



# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 1 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 137 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





### ಮುಡಾ ನಿವೇಶನ ಹಂಚಿಕೆ ಹಗರಣ

## ಸಿದ್ದರಾಮಯ್ಯರಿಗೆ ಸದ್ಯ ಸಮಾಧಾನ

# ವಿಚಾರಣೆ ನಾಳೆಗೆ

● ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಕಾನೂನು ಪ್ರಕಾರವೇ ಒಪ್ಪಿಗೆ ನೀಡಿದ್ದಾರೆ: ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಸಮರ್ಥನೆ ● ದೂರನ್ನು ಕೂಲಂಕಷವಾಗಿ ಪರಿಶೀಲಿಸಿಯೇ ನಿರ್ಧಾರ ಕೈಗೊಂಡಿದ್ದಾರೆ ● ಈ ಸಂಬಂಧ ಹಲವು ಸಾಂವಿಧಾನಿಕ ಪೀಠಗಳ ತೀರ್ಪು ಪ್ರಸ್ತಾಪ

**ಬೆಂಗಳೂರು, ಆ.31(ಕೆಎಂಶಿ)– ಮುಡಾದ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದನ್ನು ಪ್ರಶ್ನಿಸಿದ ಮೊಕದ್ದಮೆಯ ವಿಚಾರಣೆಯನ್ನು ರಾಜ್ಯ ಹೈಕೋರ್ಟ್ ಸೆಪ್ಟೆಂಬರ್ 2ರ ಮಧ್ಯಾಹ್ನ 2–30ಕ್ಕೆ ಮುಂದೂಡಿದೆ.**




ಇದಕ್ಕೂ ಮುನ್ನ, ವಿಚಾರಣೆಯ ಮೂರನೇ ದಿನವಾದ ಇಂದು ಮುಖ್ಯಮಂತ್ರಿ ಹಾಗೂ ದೂರುದಾರರ ಪರ ಕರ್ನಾಟಕ ಹಾಗೂ ಸುಪ್ರೀಂಕೋರ್ಟ್‌ನ ಘಟಾನುಘಟಿ ನ್ಯಾಯವಾದಿಗಳು ವಾದ–ಪ್ರತಿವಾದ ಮಂಡಿಸಿದರು.


ರಾಜ್ಯಪಾಲರ ನಿರ್ಧಾರ ಪ್ರಶ್ನಿಸಿ ಮುಖ್ಯಮಂತ್ರಿ ಸಲ್ಲಿಸಿರುವ ಅರ್ಜಿಯ ಮೂರನೇ ದಿನದ ವಿಚಾರಣೆಯನ್ನು, ನ್ಯಾಯಮೂರ್ತಿ ಎಂ.ನಾಗಪ್ರಸನ್ನ ನೇತೃತ್ವದ ಪೀಠ ಬೆಳಗ್ಗೆ ಕೈಗೆತ್ತಿಕೊಂಡಿತು.

ಮೊದಲಿಗೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿ, 5 ಅಂಶಗಳ ಆಧಾರದಲ್ಲಿ ವಾದ ಮಂಡಿಸುತ್ತಿದ್ದೇನೆ ಎಂದು ಹೇಳುತ್ತಿದ್ದಂತೆ ಮಧ್ಯಪ್ರವೇಶಿಸಿದ ಸಿಎಂ ಪರ ವಕೀಲ ರವಿವರ್ಮ ಕುಮಾರ್, ರಾಜ್ಯಪಾಲರ ಆದೇಶದ ಒಂದು ಪ್ಯಾರಾ ಓದುವುದಾಗಿ ಮನವಿ ಮಾಡಿದರು.

'ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್‌ಗಳಡಿಯಲ್ಲಿ ತನಿಖೆಗೆ ಅನುಮತಿ ನೀಡಲಾಗಿದೆ. ಆರೋಪಿತ ಘಟನೆ ನಡೆದಾಗ ಭಾರತೀಯ ನ್ಯಾಯ ಸಂಹಿತೆ ಜಾರಿಯಲ್ಲಿರಲಿಲ್ಲ. ಹೀಗಾಗಿ ರಾಜ್ಯಪಾಲರ ಅನುಮತಿಯೇ ಕಾನೂನುಬಾಹಿರ. ಐಪಿಸಿ ಸೆಕ್ಷನ್ ಅಡಿ ಅನುಮತಿ ನೀಡುತ್ತೇನೆಂದು ಹೇಳಬಹುದಿತ್ತು. ರಾಜ್ಯಪಾಲರು ತಮ್ಮ ವಿವೇಚನೆ ಬಳಸಿಲ್ಲವೆಂಬುದಕ್ಕೆ ಇದು ಸಾಕ್ಷಿ. ಸಿಎಂ ಪತ್ನಿ ಪಾರ್ವತಿ ಹಾಗೂ ಅವರ ಸಹೋದರನ ವಿರುದ್ಧ ಆರೋಪ ವಿದೆ. ಪತ್ನಿ ಹಾಗೂ ಮೈದುನನ ಲೋಪಗಳಿಗೆ ಸಿಎಂ ಜವಾಬ್ದಾರಿಯಾಗುತ್ತಾರೆಯೇ?' ಎಂದು ಸಿಎಂ ಪರ ಹಿರಿಯ ವಕೀಲ ರವಿವರ್ಮ ಕುಮಾರ್ ವಾದಿಸಿದರು.

ಇದಕ್ಕೆ ತಮಾಷೆಯಾಗಿಯೇ ಪ್ರತಿಕ್ರಿಯಿಸಿದ ತುಷಾರ್ ಮೆಹ್ತಾ, ಪತ್ನಿ ಪರವಾಗಿ ಪತಿಗೆ ಹೊಣೆಗಾರಿಕೆ ಇರುತ್ತದೆ. ಎಲ್ಲಾ ಲೋಪಗಳನ್ನೂ ಪತ್ನಿ ಮೇಲೆ ಪತಿ ಹೊರಿಸಬಾರದು ಎಂದು ಹೇಳಿದರು.

ಬಳಿಕ ರಾಜ್ಯಪಾಲರ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 17ಎ ಅಡಿಯಲ್ಲಿ ಮೇಲ್ನೋಟಕ್ಕೆ ಅಪರಾಧ ಕಂಡು ಬರುತ್ತದೆಯೇ ಎಂದು ನೋಡಬೇಕು. ರಾಜ್ಯಪಾಲರು ನ್ಯಾಯಮೂರ್ತಿಯಲ್ಲ, ಅವರು ಅಂತಿಮ ತೀರ್ಪು ನೀಡುತ್ತಿಲ್ಲ. ಮೇಲ್ನೋಟಕ್ಕೆ ಅಪರಾಧದ ಅಂಶಗಳಿವೆಯೇ ಇಲ್ಲವೇ ಎಂದು ನೋಡಬೇಕು. ರಾಜ್ಯಪಾಲರು ವಿವರವಾದ ಕಾರಣ ನೀಡಿದರೆ ತನಿಖೆ ಮೇಲೆ ಪ್ರಭಾವವಾಗುತ್ತದೆ. ಹೀಗಾಗಿ ಕೇವಲ ವಿವೇಚನೆ ಬಳಸಿ ರಾಜ್ಯಪಾಲರು ತೀರ್ಮಾನಿಸಬೇಕಾಗುತ್ತದೆ. 17ಎ ಹಂತದಲ್ಲಿ ಸಹಜ ನ್ಯಾಯ ಪಾಲಿಸಬೇಕಾದ ಅಗತ್ಯವಿಲ್ಲ. ಸಿಎಂಗೆ ಶೋಕಾಸ್ ನೋಟಿಸ್ ನೀಡಲೇಬೇಕೆಂಬ ನಿಯಮವಿಲ್ಲ. ಹೀಗಾಗಿ ಅಬ್ರಹಾಂ ದೂರಿಗೆ ಮಾತ್ರ ಸಿಎಂಗೆ ಶೋಕಾಸ್ ನೋಟಿಸ್ ನೀಡಿದ್ದಾರೆ. ಉಳಿದ ಇಬ್ಬರ ದೂರಿಗೆ ಸಂಬಂಧಿಸಿದಂತೆ ಶೋಕಾಸ್ ನೋಟಿಸ್ ನೀಡಿಲ್ಲ. ಶೋಕಾಸ್ ನೋಟಿಸ್ ನೀಡಬೇಕಿಲ್ಲ ಎಂದು ■ 6ನೇ ಪುಟಕ್ಕೆ



ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ಆಡಳಿತದಲ್ಲಿ ಸಚಿವರಾಗಿದ್ದ ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ ಹಾಗೂ ಜನಾರ್ದನ ರೆಡ್ಡಿ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದ ರಾಜ್ಯಪಾಲರ ತಾರತಮ್ಯ ನೀತಿಯನ್ನು ಖಂಡಿಸಿ ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ರಾಜಭವನಕ್ಕೆ ತೆರಳಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

### ರಾಜ್ಯ ಸರ್ಕಾರ ಅಸ್ಥಿರಗೊಳಿಸುವ ಯತ್ನ ಆರೋಪ

## ಕಾಂಗ್ರೆಸ್ ರಾಜಭವನ ಚಲೋ

● ಕುಮಾರಸ್ವಾಮಿ ಸೇರಿ ಬಿಜೆಪಿಯ ಮೂವರು ಮಾಜಿ ಸಚಿವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಆಗ್ರಹ ● ರಾಜಭವನ ಚಲೋಗೂ ಮುನ್ನ ವಿಧಾನಸೌಧ ಆವರಣದ ಗಾಂಧಿ ಪ್ರತಿಮೆ ಬಳಿ ಧರಣಿ; ನಂತರ ಹಾದಿಯುದ್ದಕ್ಕೂ ರಾಜ್ಯಪಾಲರ ವಿರುದ್ಧ ಆಕ್ರೋಶ; ಕೊನೆಗೆ ರಾಜ್ಯಪಾಲರಿಗೆ ಮನವಿ ಸಲ್ಲಿಕೆ!

ಬೆಂಗಳೂರು, ಆ.31(ಕೆಎಂಶಿ)–ಪ್ರಜಾತಾಂತ್ರಿಕವಾಗಿ ಚುನಾಯಿತವಾದ ಸರ್ಕಾರಗಳನ್ನು ವಾಮಮಾರ್ಗದಲ್ಲಿ ಅಸ್ಥಿರಗೊಳಿಸುವ ಕೇಂದ್ರ ಸರ್ಕಾರ ಮತ್ತು ರಾಜಭವನ ಷಡ್ಯಂತ್ರಗಳ ನಡೆಸುತ್ತಿದೆ ಎಂದು ದೂರಿ ಕಾಂಗ್ರೆಸ್‌ನ ಎಲ್ಲಾ ಜನಪ್ರತಿನಿಧಿಗಳು ಇಂದಿಲ್ಲಿ ರಾಜಭವನ ಚಲೋ ನಡೆಸಿದರು.

ಅಲ್ಲದೆ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ಆಡಳಿತದಲ್ಲಿ ಸಚಿವರಾಗಿದ್ದ ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ ಹಾಗೂ ಜನಾರ್ದನ ರೆಡ್ಡಿ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದ ರಾಜ್ಯಪಾಲರ ತಾರತಮ್ಯ ನೀತಿಯನ್ನು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಖಂಡಿಸಿದ್ದಾರೆ. ರಾಜಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿ, ಮನವಿ ಸಲ್ಲಿಸುವುದಕ್ಕೂ ಮುನ್ನ ಕಾಂಗ್ರೆಸ್ ■ 6ನೇ ಪುಟಕ್ಕೆ

**ತಮ್ಮ ಬಳಿ ಯಾವುದೇ ಪ್ರಕರಣ ಇಲ್ಲ ಎಂದಿದ್ದಾರೆ!**

ತಮ್ಮ ಬಳಿ ಯಾವುದೇ ಪ್ರಕರಣಗಳು ಬಾಕಿ ಇಲ್ಲ ಎಂಬುದಾಗಿ ರಾಜ್ಯಪಾಲರು ತಿಳಿಸಿದ್ದಾರೆ, ಅವರು ಏಕೆ ಹೀಗೆ ಹೇಳುತ್ತಿದ್ದಾರೆ ಎಂದು ಮತ್ತೊಮ್ಮೆ ಪರಿಶೀಲನೆ ಮಾಡಲಾಗುವುದು. ಇದು ನಿಜವೋ, ಸುಳ್ಳೋ ಪರಿಶೀಲಿಸಲಾಗುವುದು, ಒಳಗಿನ ವಿಚಾರವನ್ನು ಮಾಧ್ಯಮದ ಮೂಲಕ ಚರ್ಚೆ ಮಾಡುವುದಿಲ್ಲ. ಅವರು ನನ್ನ ಬಳಿ ಯಾವುದೇ ಅರ್ಜಿಗಳಿಲ್ಲ ಎಂದು ಹೇಳಿದ್ದಾರೆ. ಅದನ್ನು ನಾವು ಪರಿಶೀಲಿಸುತ್ತೇವೆ. ರಾಜ್ಯಪಾಲರಿಗೆ ಪರ್ಯಾಯ ದಾರಿಗಳಿಲ್ಲ, ಅವರು ನಾಲ್ವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲೇಬೇಕು ಎಂದರು.




## ಅಕ್ಟೋಬರ್‌ನಿಂದ ದೆಹಲಿಯಲ್ಲಿ ನಂದಿನಿ ಹಾಲು, ಮೊಸರು ಮಾರಾಟ



ಬೆಂಗಳೂರು, ಆ.31– ನಾಡಿನಾದ್ಯಂತ ಮನೆ ಮನೆಗಳಲ್ಲಿ ಚಿರಪರಿಚಿತವಾಗಿರುವ ನಂದಿನಿ ಹಾಲು, ಮೊಸರು ಹಾಗೂ ಇನ್ನಿತರೆ ಉತ್ಪನ್ನ ಇದೀಗ ಉತ್ತರ ಭಾರತಕ್ಕೂ ಲಗ್ಗೆ ಇಡುತ್ತಿದೆ. ಅಕ್ಟೋಬರ್‌ನಲ್ಲಿ ದೆಹಲಿಯಲ್ಲಿ ಹಾಲು ಮತ್ತು ಮೊಸರು ಮಾರಾಟವನ್ನು ಕರ್ನಾಟಕ ಹಾಲು ಒಕ್ಕೂಟ (KMF) ಪ್ರಾರಂಭಿಸಲಿದೆ.

ದೇಶದ ಬಹುತೇಕ ಭಾಗಗಳಲ್ಲಿ ಹಸುವಿನ ಹಾಲಿನ ಬಳಕೆ ಹೆಚ್ಚುತ್ತಿದ್ದು, ಇದು ಕೆಎಂಎಫ್ ತನ್ನ ವ್ಯವಹಾರವನ್ನು ವಿಸ್ತರಿಸಲು ಸೂಕ್ತ ಸಮಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಟೋಬರ್ ಮೊದಲ ವಾರದಿಂದ ನೀಲಿ, ಹಸಿರು, ಕೆಂಪು ಮತ್ತು ಕಿತ್ತಳೆ ಮಾದರಿಗಳೊಂದಿಗೆ ದೆಹಲಿ ಮಾರುಕಟ್ಟೆ ಪ್ರವೇಶಿಸುವ ಗುರಿ ಹೊಂದಿದ್ದೇವೆ. ಮೊದಲ ಆರು ತಿಂಗಳ ಕಾಲ ನಿತ್ಯ ಸುಮಾರು 2 ಲಕ್ಷ ಲೀಟರ್ ಹಾಲು ಮಾರಾಟ ಮಾಡಿ ಕ್ರಮೇಣ ಅದನ್ನು ವಿಸ್ತರಿಸುವ ಗುರಿ ಹೊಂದಲಾಗಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ.ಜಗದೀಶ್ ತಿಳಿಸಿದರು.

ಕಂಪನಿ ಗುಡ್‌ಲೈಫ್ ಬ್ರಾಂಡ್ ಮಾತ್ರವಲ್ಲದೆ ಪ್ರತಿದಿನವೂ ಮಾರಾಟದೊಂದಿಗೆ ನೇರ ಮಾರಾಟಕ್ಕಾಗಿ ಉತ್ತರ ಭಾರತದ ರಾಜ್ಯಗಳತ್ತ ಸಾಗುತ್ತಿರುವುದು ಇದೇ ಮೊದಲು ಎಂದು ಕೆಎಂಎಫ್ ಅಧಿಕಾರಿಗಳು ತಿಳಿಸಿದ್ದಾರೆ. ■ 6ನೇ ಪುಟಕ್ಕೆ

### ರೇಣುಕಾಸ್ವಾಮಿ ಕೊಲೆ ಪ್ರಕರಣ

## ಪವಿತ್ರಾಗೌಡ ಜಾಮೀನು ಅರ್ಜಿ ವಜಾ



**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ಕೋರಿ ಎ1 ಆರೋಪಿ ಪವಿತ್ರಾ ಗೌಡ ಹಾಗೂ ಎ7 ಆರೋಪಿ ಅನುಕುಮಾರ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 57ನೇ ಸಿಸಿಹೆಚ್ ನ್ಯಾಯಾಲಯ ಶನಿವಾರ ವಜಾಗೊಳಿಸಿದೆ.

ಪವಿತ್ರಾಗೌಡ ಪರ ಟಾಮಿ ಸೆಬಾಸ್ಟಿಯನ್, ಅನುಕುಮಾರ್ ಪರವಾಗಿ ಹಿರಿಯ ವಕೀಲ ರಾಮಸಿಂಗ್ ವಾದ ಮಂಡಿಸಿದ್ದರು. ವಾದ ಪ್ರತಿವಾದಗಳನ್ನು ಆಲಿಸಿದ ಕೋರ್ಟ್ ಸಂಜೆ 4:30ರ ವೇಳೆಗೆ ಇಬ್ಬರ ಅರ್ಜಿಯನ್ನು ವಜಾಗೊಳಿಸಿ, ತೀರ್ಪು ಪ್ರಕಟಿಸಿತು.

ಇದೇ ಆ.19ರಂದು ಪವಿತ್ರಾಗೌಡ ಪರ ವಕೀಲರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಆ.28 ರಂದು ವಿಚಾರಣೆ ನಡೆಸಿದ್ದ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಅರ್ಜಿ ವಿಚಾರಣೆಯನ್ನು ಆ.31ಕ್ಕೆ ಮುಂದೂಡಿತ್ತು. ಶನಿವಾರ ಮತ್ತೆ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್ ಜಾಮೀನು ನಿರಾಕರಿಸಿತು.

**ಎಸ್‌ಪಿಪಿ ವಾದ:** ಪವಿತ್ರಾಗೌಡ ಅರ್ಜಿ ವಿಚಾರಣೆ ವೇಳೆ ಎಸ್‌ಪಿಪಿ ಪ್ರಸನ್ನಕುಮಾರ್, ಪವಿತ್ರಾ ಗೌಡಗೆ ಜಾಮೀನು ನೀಡದಂತೆ ಆಕ್ಷೇಪಿಸಿದರು. ಮಹಿಳೆಯಾದರೂ ಜಾಮೀನು ಕೊಡಬಾರದು ಅಂತ ಕೇರಳ ಹಾಗೂ ಕೋಲ್ಕತ್ತಾ ಹೈಕೋರ್ಟ್ ಆದೇಶಗಳನ್ನು ಉಲ್ಲೇಖಿಸಿದರು. ಮಹಿಳೆಯರಿಗೆ ವಿಶೇಷ ಅವಕಾಶ ಯಾಕೆ ಕೊಡಬೇಕು. ಕೇರಳದ ಪ್ರಕರಣದಲ್ಲಿ ದೋಷಾರೋಪ ಪಟ್ಟಿ ಹಾಕಿದ ■ 5ನೇ ಪುಟಕ್ಕೆ

## ನೀಟ್, ಸಿಇಟಿ ಪ್ರವೇಶ ಪ್ರಕ್ರಿಯೆ ಆರಂಭ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೀಟ್ ಹಾಗೂ ಸಿಇಟಿ ಮೊದಲ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದ್ದು, ಆ. 31ರಿಂದಲೇ ಪ್ರವೇಶ ಪ್ರಕ್ರಿಯೆಗಳು ಆರಂಭವಾಗಲಿವೆ.

ವೈದ್ಯಕೀಯ, ದಂತವೈದ್ಯಕೀಯ, ಆಯುಷ್, ಎಂಜಿನಿಯರಿಂಗ್, ವಾಸ್ತುಶಿಲ್ಪಶಾಸ್ತ್ರ, ಕೃಷಿ ವಿಜ್ಞಾನ, ಪಶುವೈದ್ಯಕೀಯ, ಬಿ–ಫಾರ್ಮ, ಬಿಎಸ್‌ಸಿ (ನರ್ಸಿಂಗ್), ಯೋಗ ಮತ್ತು ನ್ಯಾಚುರೋಪತಿ ಮುಂತಾದ ಕೋರ್ಸ್‌ಗಳ ಅಭ್ಯರ್ಥಿಗಳು ಪೋಷಕರ ಜತೆ ಚರ್ಚಿಸಿ, ವಿವರಣೆಗಳನ್ನು ಅರ್ಥಮಾಡಿಕೊಂಡು ನಾಲ್ಕು ಚಾಯ್ಸ್‌ಗಳಲ್ಲಿ ಸೂಕ್ತವಾದ ಕಾಲೇಜು ಹಾಗೂ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆಯಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

'ಚಾಯ್ಸ್ 1 ಮತ್ತು ಚಾಯ್ಸ್ 2'ರ ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಆ.31ರ ಮಧ್ಯಾಹ್ನ 1ರಿಂದ ಸೆ.4ರ ಸಂಜೆ 4ರ ಒಳಗೆ ಶುಲ್ಕ ಪಾವತಿಸಬೇಕು. ಶುಲ್ಕ ಪಾವತಿಸಿದ ನೀಟ್ ಅಭ್ಯರ್ಥಿಗಳು ಮೂಲ ದಾಖಲೆಗಳು ಮತ್ತು ಎರಡು ಸೆಟ್ ದೃಢೀಕೃತ ನಕಲು ಪ್ರತಿಗಳೊಂದಿಗೆ ಸೆ. 2ರ ಬೆಳಿಗ್ಗೆ 10:30ರಿಂದ ಸೆ. 4ರ ಸಂಜೆ 4 ರವರೆಗೆ ಕೆಇಎ ಕಚೇರಿಗೆ ಖುದ್ದಾಗಿ ಸಲ್ಲಿಸಬೇಕು. ಸೆ. 2ರಿಂದ ಸೆ. 5ರೊಳಗೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬೇಕು. ಆಯ್ಕೆ ■ 5ನೇ ಪುಟಕ್ಕೆ




# ನಾಳೆಯಿಂದ ರಾಜ್ಯದಲ್ಲಿ ಡಿಜಿಟಲ್ ಪೋಡಿ ದುರಸ್ತಿ ಅಭಿಯಾನ

### ಕಂದಾಯ ಸಚಿವ ಕೃಷ್ಣ ಭೈರೇಗೌಡ ಘೋಷಣೆ




ಪೋಡಿ ದುರಸ್ತಿ ಕಾರ್ಯಕ್ಕೆ ಚುರುಕು ನೀಡುವ ಸಂಬಂಧ ಎಲ್ಲಾ ಜಿಲ್ಲಾಧಿಕಾರಿಗಳು, ತಹಸೀಲ್ದಾರರು, ಕಂದಾಯ ನಿರೀಕ್ಷಕರೂ ಸೇರಿ ಇಲಾಖೆ ಅಧಿಕಾರಿಗಳ ಜೊತೆಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ಸಭೆ ನಡೆಸಿದರು.

**ಬೆಂಗಳೂರು:** ಸೆಪ್ಟೆಂಬರ್ 2ರಿಂದ 1–5 ನಮೂನೆ ಪೋಡಿ ದುರಸ್ತಿ ಕಾರ್ಯವನ್ನು ಅಭಿಯಾನ ಮಾದರಿಯಲ್ಲಿ ರಾಜ್ಯಾದ್ಯಂತ ಜಾರಿಗೊಳಿಸುವಂತೆ ಕಂದಾಯ ಸಚಿವ ಕೃಷ್ಣಭೈರೇಗೌಡ, ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ತಹಸೀಲ್ದಾರ್‌ಗಳಿಗೆ ಸೂಚನೆ ನೀಡಿದ್ದಾರೆ.

ದಶಕಗಳಿಂದ ಬಾಕಿ ಉಳಿದಿರುವ ಪೋಡಿ ದುರಸ್ತಿ ಕಾರ್ಯಕ್ಕೆ ಚುರುಕು ನೀಡುವ ಸಂಬಂಧ ಎಲ್ಲಾ ಜಿಲ್ಲಾಧಿಕಾರಿಗಳು, ತಹಸೀಲ್ದಾರರು, ಕಂದಾಯ ನಿರೀಕ್ಷಕರೂ ಸೇರಿ ಇಲಾಖೆಯ ಅಧಿಕಾರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಚಿವ ಕೃಷ್ಣ ಭೈರೇಗೌಡ ಅವರು ಸಭೆ ನಡೆಸಿದ್ದಾರೆ. ರಾಜ್ಯದಲ್ಲಿ ಸುಮಾರು 10 ಲಕ್ಷ ರೈತರಿಗೆ ಹತ್ತಾರು ವರ್ಷಗಳ ಹಿಂದೆ ಸರ್ಕಾರಿ ಜಮೀನು ಅಕ್ರಮ ಸಕ್ರಮದಡಿ ಮಂಜೂರಾಗಿದ್ದರೂ, ಪೋಡಿ ದುರಸ್ತಿ ಆಗದೆ ಬಾಕಿ ಉಳಿದಿದೆ. ಲಕ್ಷಾಂತರ ರೈತರು ಅನೇಕ ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದರೂ ಕೆಲವೇ ಕೆಲವರಿಗೆ ಮಾತ್ರ ಪೋಡಿ ದುರಸ್ತಿಯಾಗಿದ್ದು ಬಹುತೇಕರಿಗೆ ಆಗಿರುವುದಿಲ್ಲ. ಇದರಿಂದಾಗಿ ಹಲವು ರೈತರು ತೀವ್ರ ತೊಂದರೆಗೆ ಸಿಲುಕಿದ್ದು, ಅಧಿಕಾರಿಗಳು ಸೆ.2ರಿಂದ ಅಭಿಯಾನ ಮಾದರಿಯಲ್ಲಿ 1–5 ನಮೂನೆ ಪೋಡಿ ದುರಸ್ತಿ ಕೆಲಸಕ್ಕೆ ■ 5ನೇ ಪುಟಕ್ಕೆ

## ನಾಳೆಯಿಂದಲೇ ಎನಿವೇರ್ ನೋಂದಣಿ



ಮೈಸೂರು, ಆ. 31 (ಆರ್‌ಕೆ)– ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮೈಸೂರು ಜಿಲ್ಲೆಯ ಎಲ್ಲಾ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಸೆ.2ರಿಂದ ಎನಿವೇರ್ ನೋಂದಣಿ ವ್ಯವಸ್ಥೆ ಕಲ್ಪಿಸಲಾಗಿದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯು 2024ರ ಸೆ.2ರಿಂದ ಎನಿವೇರ್ ನೋಂದಣಿ ವ್ಯವಸ್ಥೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ತರುತ್ತಿದ್ದು, ಅದರಂತೆ ಸಾರ್ವಜನಿಕರು ದಸ್ತಾವೇಜುಗಳನ್ನು ಸ್ಥಿರಾಸ್ತಿ ಇರುವ ಜಿಲ್ಲೆಯ ಯಾವುದೇ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ನೋಂದಣಿ ಮಾಡಿಸಬಹುದಾಗಿದೆ. ಮೈಸೂರು ಜಿಲ್ಲೆಯ ಎಲ್ಲಾ ಉಪನೋಂದಣಾಧಿಕಾರಿ ಕಚೇರಿಗಳಲ್ಲೂ ಎನಿವೇರ್ ನೋಂದಣಿ ವ್ಯವಸ್ಥೆಯು ಸೋಮವಾರ ದಿಂದ ಜಾರಿಗೆ ಬರಲಿದೆ. ಮೈಸೂರು ನಗರದ 5 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 13 ಉಪ ನೋಂದಣಾಧಿಕಾರಿ ಕಚೇರಿಗಳ ಪೈಕಿ ಯಾವುದೇ ಕಚೇರಿಗಳಲ್ಲಿ ಸಾರ್ವಜನಿಕರು ತಮ್ಮ ಸ್ಥಿರಾಸ್ತಿಗಳನ್ನು ನೋಂದಣಿ ಮಾಡಿಸಬಹುದು ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಜಿಲ್ಲಾ ನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೈಸೂರು ಜಿಲ್ಲೆಯ ಯಾವುದೇ ಸ್ಥಳ ದಲ್ಲಿರುವ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು 13ರ ಪೈಕಿ ಯಾವುದೇ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಸ್ಥಿರಾಸ್ತಿ ಇರುವ ವ್ಯಾಪ್ತಿಯ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಜನಸಂದಣಿ ಇದ್ದಲ್ಲಿ ಕಡಿಮೆ ಜನಸಂದಣಿ ಇರುವ ಕಚೇರಿಗೆ ಹೋಗಿ ಬಹುಬೇಗ ನೋಂದಣಿ ಮಾಡಿಸಬಹುದಾಗಿದೆ. ಮೈಸೂರು ಜಿಲ್ಲೆಯ ಎಲ್ಲಾ ಉಪ ನೋಂದಣಾಧಿಕಾರಿಗಳಲ್ಲಿ ಡಿಇಓ (ಡೇಟಾ ಎಂಟ್ರಿ ಆಪರೇಟರ್), ದ್ವಿತೀಯ ದರ್ಜೆ ಕ್ಲರ್ಕ್‌ಗಳು ಹಾಗೂ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ.



# ಬ್ಯಾಕ್‌ಲಾಗ್ ಹುದ್ದೆ ನೇಮಕಾತಿ ಹಗರಣ: ಮೂವರು ಸರ್ಕಾರಿ ನೌಕರರು ಸೇರಿ 48 ಜನರ ಬಂಧಿಸಿದ ಸಿಸಿಬಿ

ಬೆಂಗಳೂರು,ಆ.31–ಜಲಸಂಪನ್ಮೂಲ ಇಲಾಖೆ 'ಸಿ' ವೃಂದದ ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಸಂಬಂಧ ನಕಲಿ ದಾಖಲೆ ಸಲ್ಲಿಸಿ ಉದ್ಯೋಗ ಗಿಟ್ಟಿಸಲು ಯತ್ನಿಸಿದ್ದ ಆರೋಪದಡಿ 37 ಅಭ್ಯರ್ಥಿಗಳು, ಮೂವರು ಸರ್ಕಾರಿ ನೌಕರರು, 11 ಮಂದಿ ಮಧ್ಯವರ್ತಿಗಳು ಸೇರಿ ಒಟ್ಟು 48 ಮಂದಿಯನ್ನು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ವಿಶೇಷ ವಿಚಾರಣಾ ದಳದ ಅಧಿಕಾರಿಗಳು ಬಂಧಿಸಿದ್ದಾರೆ.




ಕಲುಬುರಗಿ ಜಿಲ್ಲೆಯ ಮೊರಾರ್ಜಿ ದೇಸಾಯಿ ವಸತಿ ಪಿಯು ಕಾಲೇಜಿನ ಪ್ರಾಂಶುಪಾಲ ಆನಂದ್, ಜೋಗ್‌ಫಾಲ್ ಕೆಪಿಟಿಸಿಎಲ್ ಕಚೇರಿಯ ಎಫ್‌ಡಿಎ ಕೃಷ್ಣ ಗುರುನಾಥ್ ರಾಥೋಡ್, ಜಲಸಂಪನ್ಮೂಲ ಇಲಾಖೆ(ಹಾಸನ) ಎಸ್‌ಡಿಎ ಗಂಗೂರು ಪ್ರದೀಪ್ ಬಂಧಿತರು. ಜತೆಗೆ ಹಾಸನದ ಟಿ.ರವಿ, ಮಳವಳ್ಳಿಯ ಪ್ರದೀಪ್, ಜೇವರ್ಗಿಯ ಎನ್.ನಿಂಗಪ್ಪ, ನಿವಾಸಿ ವಿಜಯಪುರದ ಸಿಂದಗಿ ಮಲ್ಲಿಕಾರ್ಜುನ್ ಸಂಪೂರ್, ಕಲುಬುರಗಿಯ ಮುಸ್ತಫಾ ಮತ್ತು 37 ಅನರ್ಹ ಅಭ್ಯರ್ಥಿಗಳು ಸೇರಿ ಒಟ್ಟು 48 ಮಂದಿಯನ್ನು ಬಂಧಿಸಲಾಗಿದೆ. ಆರೋಪಿಗಳಿಂದ ಸುಮಾರು 40 ಲಕ್ಷ ರೂ. ಮೌಲ್ಯದ 2 ಕಾರು, 17 ಮೊಬೈಲ್ ಹಾಗೂ ಹಾರ್ಡ್ ಡಿಸ್ಕ್ ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಏನಿದು ಪ್ರಕರಣ?:** ಜಲಸಂಪನ್ಮೂಲ ಇಲಾಖೆಯಿಂದ 2022ರ ಅಕ್ಟೋಬರ್‌ನಲ್ಲಿ 182 'ಸಿ' ವೃಂದದ ಎಸ್‌ಡಿಎ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಸಂಬಂಧ ನೇರ ನೇಮಕಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಇದಕ್ಕೆ ಯಾವುದೇ ಲಿಖಿತ ಪರೀಕ್ಷೆ ನಡೆಸದೆ ದ್ವಿತೀಯ ಪಿಯುಸಿಯಲ್ಲಿ ಪಡೆದ ಅತಿ ಹೆಚ್ಚು ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳಿಗೆ ನೇರ ಅವಕಾಶ ಕಲ್ಪಿಸಲಾಗಿತ್ತು. ನೇಮಕಾತಿಗೆ ಅದರಂತೆ ಆನ್‌ಲೈನ್‌ನಲ್ಲಿ ಸಾಕಷ್ಟು ಅರ್ಜಿಗಳು ಸಲ್ಲಿಕೆಯಾಗಿದ್ದವು.

### 62 ಅಭ್ಯರ್ಥಿಗಳ ಅಂಕಪಟ್ಟಿ ನಕಲಿ

ನೇಮಕಾತಿ ವಿಭಾಗದ ಅಧಿಕಾರಿಗಳು ಅರ್ಜಿ ಹಾಗೂ ಅಂಕಪಟ್ಟಿಗಳ ಪರಿಶೀಲನೆ ವೇಳೆ 12 ಜಿಲ್ಲೆಗಳ 62 ಅಭ್ಯರ್ಥಿಗಳ ಅಂಕಪಟ್ಟಿಗಳು ನಕಲಿಯಾಗಿರುವುದು ಕಂಡು ಬಂದಿತ್ತು. ಈ ಸಂಬಂಧ ಅಧಿಕಾರಿಗಳು 2023ರ ಜುಲೈನಲ್ಲಿ ಶೇಷಾದ್ರಿಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಬಳಿಕ ಈ ಪ್ರಕರಣವನ್ನು ಸಿಸಿಬಿ ತನಿಖೆಗೆ ವಹಿಸಲಾಗಿತ್ತು. ಇದೀಗ ತನಿಖೆ ನಡೆಸಿ ಅನರ್ಹ ಅಭ್ಯರ್ಥಿಗಳು, ಮಧ್ಯವರ್ತಿಗಳು ಸೇರಿದಂತೆ 48 ಮಂದಿಯನ್ನು ಬಂಧಿಸಲಾಗಿದೆ. ಈ ವಂಚನೆ ಜಾಲದಲ್ಲಿ ಇನ್ನೂ 25 ಮಂದಿ ಅನರ್ಹ ಅಭ್ಯರ್ಥಿಗಳು ಹಾಗೂ 6 ಮಂದಿ ಮಧ್ಯವರ್ತಿಗಳು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಬಲೆ ಬೀಸಲಾಗಿದೆ.

ಆಹಾರ ಸುರಕ್ಷತಾ ಅಧಿಕಾರಿಗಳಿಂದ

# ಮೈಸೂರಲ್ಲಿ ಎರಡು ದಿನಗಳ ಸ್ವಚ್ಛತೆ, ನೈರ್ಮಲ್ಯ ಅಭಿಯಾನ

## ಏಳು ಮಂದಿಗೆ ನೋಟಿಸ್, 1,10,000 ರೂ. ದಂಡ ವಸೂಲಿ



ಮೈಸೂರು, ಆ. 31(ಆರ್‌ಕೆ)– ಹೋಟೆಲು, ಬೀದಿ ಬದಿ ಅಂಗಡಿಗಳಲ್ಲಿ ಸ್ವಚ್ಛತೆ, ನೈರ್ಮಲ್ಯ, ಆಹಾರ ಸುರಕ್ಷತೆ ಕಾಪಾಡುವ ಸಲುವಾಗಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳ ಎರಡು ದಿನಗಳ ಜಾಗೃತಿ ಅಭಿಯಾನ ಇಂದು ಅಂತ್ಯಗೊಂಡಿತು.

ಸರ್ಕಾರದ ನಿರ್ದೇಶನದಂತೆ ಆಹಾರ ಸುರಕ್ಷತಾ ಇಲಾಖೆ ಜಿಲ್ಲಾ ಅಂಕಿತ ಅಧಿಕಾರಿ ಡಾ. ಎಸ್.ಎಲ್. ರವೀಂದ್ರ ನೇತೃತ್ವದಲ್ಲಿ ಶುಕ್ರವಾರ ಮತ್ತು ಶನಿವಾರ ನಡೆದ ಅಭಿಯಾನದಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳಾದ ಗಿರೀಶ್, ರಾಜೇಶ್ ಮತ್ತು ದಾಕ್ಷಾಯಿಣಿ ಪಾಲ್ಗೊಂಡಿದ್ದರು.

ಎರಡು ದಿನಗಳ ಅಭಿಯಾನದಲ್ಲಿ 60 ಕಡೆ ಹೋಟೆಲ್, ರಸ್ತೆ ಬದಿಯ ಫಾಸ್ಟ್‌ಫುಡ್‌ಗಳಲ್ಲಿ ಸ್ವಚ್ಛತೆ, ನೈರ್ಮಲ್ಯ ಹಾಗೂ ಆಹಾರದ ಗುಣಮಟ್ಟ ನಿರ್ವಹಣೆ ಬಗ್ಗೆ ಪರಿಶೀಲಿಸಿದ ಅಧಿಕಾರಿಗಳು, ಬೆಣ್ಣೆ, ಟೀ ಪೌಡರ್, ತಂದೂರಿ ಚಿಕನ್‌ಗಳ ಸ್ಯಾಂಪಲ್‌ಗಳನ್ನು ಪಡೆದಿದ್ದು, ಮೈಸೂರಿನ ಸಯ್ಯಾಜಿರಾವ್ ರಸ್ತೆ ತಿಲಕ್‌ನಗರದಲ್ಲಿರುವ ವಿಭಾಗೀಯ ಆಹಾರ ಪ್ರಯೋಗಾಲಯ (Divisional Food Laboratory)ಕ್ಕೆ ಪರೀಕ್ಷೆಗಾಗಿ ನೀಡಲಾಗಿದೆ.

ಅಭಿಯಾನದ ವೇಳೆ ಸರಿಯಾಗಿ ಸ್ವಚ್ಛತೆ ಕಾಪಾಡದ 7 ಹೋಟೆಲ್ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದ್ದು, ವಿವಿಧೆಡೆ ಒಟ್ಟು 1,10,000 ರೂ. ದಂಡ ವಸೂಲಿ ಮಾಡಲಾಗಿದೆ. ಪ್ರಯೋಗಾಲಯದ ವರದಿ ಬಂದ ನಂತರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಡಾ. ರವೀಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ನಗರದಾದ್ಯಂತ ಎಲ್ಲೆಂದರಲ್ಲಿ ಬೀದಿ ಬದಿಗಳಲ್ಲಿ ಫಾಸ್ಟ್‌ಫುಡ್, ಚಾಟ್ಸ್ ಅಂಗಡಿಗಳು ತಲೆ ಎತ್ತಿದ್ದು, ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ವಸ್ತುಗಳನ್ನು ಬಳಸುವ ಜೊತೆಗೆ ಆಹಾರ ಪದಾರ್ಥಗಳ ಗುಣಮಟ್ಟಕ್ಕೆ ಆದ್ಯತೆ ನೀಡದಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಅಭಿಯಾನ ನಡೆಸಲಾಗಿದೆ ಎಂದು ಅವರು ತಿಳಿಸಿದರು.

### ಸಿಎಂ ಪದಕ ವಿಜೇತ ಇನ್‌ಸ್ಪೆಕ್ಟರ್ ಡಾ.ಶೇಖರ್‌ಗೆ ಸನ್ಮಾನ



ಮುಖ್ಯಮಂತ್ರಿ ಪದಕ ಪುರಸ್ಕೃತ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಡಾ.ಶೇಖರ್ ಅವರನ್ನು ಕಡಕೊಳ ಗ್ರಾಮಸ್ಥರ ಪರವಾಗಿ ಅಭಿನಂದಿಸಲಾಯಿತು. ಈ ವೇಳೆ ಜಿಪಂ ಮಾಜಿ ಸದಸ್ಯ ಪಟೇಲ್ ಜವರೇಗೌಡ, ದಿ.ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕಡಕೊಳ ಕುಮಾರಸ್ವಾಮಿ, ಮಾಜಿ ಗ್ರಾಪಂ ಅಧ್ಯಕ್ಷ ಚಿರಮೇಶ್‌ನಾಯಕ, ಮುಖಂಡರಾದ ಎಲ್ಲಪ್ಪನಾಯಕ, ಟಿ.ಪಿ.ಮಾದೇಶ್, ರವಿಗೌಡ ನಾರಾಯಣ ನಾಯ್ಕ ಮತ್ತಿತರರು ಉಪಸ್ಥಿತರಿದ್ದರು.

# ಬ್ರ್ಯಾಂಡ್ ಟೈಮ್ ಇಂಡಿಯಾದಿಂದ ಉಡುಪುಗಳ ಬೃಹತ್ ಮಾರಾಟ ಮೇಳ



ಮೈಸೂರು,ಆ.31(ಪಿಎಂ)– ಬ್ರ್ಯಾಂಡ್ ಟೈಮ್ ಇಂಡಿಯಾ ವತಿಯಿಂದ ಆ.30ರಿಂದ ಸೆ.1ರವರೆಗೆ ಮೂರು ದಿನಗಳ ಕಾಲ ಬ್ರ್ಯಾಂಡೆಡ್ ಉಡುಪುಗಳ ಬೃಹತ್ ಮಾರಾಟ ಮೇಳ ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ತಿಲಕನಗರದ ಸಯ್ಯಾಜಿರಾವ್ ರಸ್ತೆಯ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಹಮ್ಮಿಕೊಂಡಿರುವ ಮಾರಾಟ ಮೇಳಕ್ಕೆ ಗ್ರಾಹಕರು ಬೆಳಗ್ಗೆ 10ರಿಂದ ರಾತ್ರಿ 10ರವರೆಗೆ ಭೇಟಿ ನೀಡಬಹುದು. ಪುರುಷರು, ಮಹಿಳೆಯರು ಹಾಗೂ ಮಕ್ಕಳ ಬ್ರ್ಯಾಂಡೆಡ್ ಉಡುಪುಗಳ ಖರೀದಿಗೆ ಶೇ.80ರಷ್ಟು ರಿಯಾಯಿತಿ ದೊರೆಯಲಿದೆ. ಅಲ್ಲದೆ, ಮಹಿಳೆಯರ ಟಾಪ್ ಖರೀದಿಗೆ ಈ ವಿಶೇಷ ಕೊಡುಗೆ ಮಾತ್ರವಲ್ಲದೆ, 999 ರೂ.ಗಳಲ್ಲಿ 1 ಕೆಜಿ ಬ್ರ್ಯಾಂಡೆಡ್ ಬಟ್ಟೆಗಳನ್ನು ಖರೀದಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## 50:50 ಅನುಪಾತದಡಿ ಮಂಜೂರು ಮಾಡಿರುವ 25 ನಿವೇಶನ ಹಿಂಪಡೆದು ಬಡವರಿಗೆ ಹಂಚಲು ಆಗ್ರಹ

ಮೈಸೂರು, ಆ.31–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಕ್ಯಾಥಡ್ರಲ್ ಪಾರಿಸ್ ಸೊಸೈಟಿಯ ಕಾರ್ಯದರ್ಶಿ ರೆವೆರೆಂಡ್ ಫಾ. ಸ್ಟ್ಯಾನ್ಲಿ ಡಿ ಅಲಮೇಡ ಅವರ ಹೆಸರಿಗೆ 50:50 ಅನುಪಾತದಡಿ ಮಂಜೂರು ಮಾಡಿರುವ 25 ನಿವೇಶನಗಳನ್ನು ರದ್ದುಪಡಿಸಿ ನೈಜ ಬಡವರಿಗೆ ಹಂಚಬೇಕು ಎಂದು ಮೈಸೂರು ಧರ್ಮ ಪ್ರಾಂತ್ಯ ಕ್ರೈಸ್ತ ಜನರ ಅಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಸ್ಟೀಫನ್ ಸುಜೀತ್ ಆಗ್ರಹಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ರಿಂಗ್ ರಸ್ತೆ ಹಾಗೂ ಬಡಾವಣೆಗೆ ಬಳಸಿಕೊಂಡಿದೆ ಎನ್ನಲಾದ ಭೂಮಿ ಕ್ಯಾಥಡ್ರಲ್ ಪಾರಿಸ್ ಸೊಸೈಟಿಗೆ ಸೇರಿದ್ದಲ್ಲ. ಜೇಮ್ಸ್ ಮಾರ್ಟೀಸ್ ಎಂಬುವರು ಈ ಭೂಮಿಯ ಜಿಪಿಎ ಹೋಲ್ಡರ್ ಆಗಿದ್ದು, ಅವರು ಈ ಭೂಮಿಯಲ್ಲಿ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಿದ್ದರು. ಹೀಗಾಗಿ ರೆ.ಫಾ. ಸ್ಟ್ಯಾನ್ಲಿ ಡಿ ಅಲಮೇಡ ಹೆಸರಿಗೆ ಮಂಜೂರಾಗಿರುವ ನಿವೇಶನಗಳನ್ನು ಮುಡಾ ಹಿಂಪಡೆದು ನೈಜ ಬಡವರಿಗೆ ಹಂಚಿಕೆ ಮಾಡಬೇಕು ಹಾಗೂ ಅಲಮೇಡ ಅವರಿಗೆ ನಿವೇಶನಗಳನ್ನು ಮಂಜೂರು ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಜಾನ್ ಫರ್ನಾಂಡಿಸ್, ಮರಿಯಾ ಫ್ರಾನ್ಸಿಸ್, ಆಂಬ್ರೊ ಜಾರ್ಜ್, ಜೋಸೆಫ್ ಮತ್ತಿತರರು ಉಪಸ್ಥಿತರಿದ್ದರು.

# ಗ್ರಾಮೀಣ ಪ್ರತಿಭೆ ಗುರುತಿಸಲು ಕ್ರೀಡಾಕೂಟ ಸಹಕಾರಿ

## ಹೋಬಳಿ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿದ ಶಾಸಕ ಜಿ.ಟಿ.ದೇವೇಗೌಡರ ಅಭಿಮತ

ಮೈಸೂರು,ಆ.31– ಗ್ರಾಮೀಣ ಪ್ರದೇಶ ಮಕ್ಕಳ ಪ್ರತಿಭೆ ಗುರುತಿಸಲು ಶಾಲಾ ಹಂತದ ಕ್ರೀಡಾಕೂಟ ಸಹಕಾರಿಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ದೂರ ಗ್ರಾಮದಲ್ಲಿರುವ ಶ್ರೀ ಮಹದೇಶ್ವರ ವಿದ್ಯಾಸಂಸ್ಥೆಯಲ್ಲಿ ನಡೆದ ಜಯಪುರ ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು. ಕ್ರೀಡಾಕೂಟಗಳಿಂದ ವಿದ್ಯಾರ್ಥಿಗಳ ನಡುವೆ ಸಹೋದರ ಸಂಬಂಧ ಬೆಳೆಯಲಿವೆ ಎಂದರು.

ಕ್ರೀಡೆ ಜತೆಗೆ ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ರೂಢಿಸಿಕೊಳ್ಳಬೇಕು. ಯಾವ ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಬೆಳೆಸಿಕೊಳ್ಳುತ್ತಾನೋ ಭವಿಷ್ಯದಲ್ಲಿ ಉತ್ತಮ ಪ್ರಜೆಯಾಗಿ ಹೊರಹೊಮ್ಮುತ್ತಾನೆ ಎಂದರು. ಸಮಾರಂಭದಲ್ಲಿ ಬರಡನಪುರ ಮಠದ ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಗ್ರಾಪಂ ಅಧ್ಯಕ್ಷ ಎಂ.ನಾಗರಾಜು, ವೀರಶೈವ ಮುಖಂಡ ಹಿನ್‌ಕಲ್ ಬಸವರಾಜು, ಮುಖಂಡರಾದ ಕುಮಾರ್, ನಂದೀಶ್ ಚಾಮುಂಡಯ್ಯ, ಮಹೇಶ್ ಇತರರು ಹಾಜರಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ದೂರ ಗ್ರಾಮದಲ್ಲಿರುವ ಶ್ರೀ ಮಹದೇಶ್ವರ ವಿದ್ಯಾ ಸಂಸ್ಥೆಯಲ್ಲಿ ಆಯೋಜಿಸಿದ್ದ ಜಯಪುರ ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

## ಎ.ಪಿ.ಸವಿತಾಗೆ ಪಿಹೆಚ್.ಡಿ



ಮೈಸೂರು,ಆ.31(ಪಿಎಂ)– ಡಾ.ಸಿ.ಬಸವರಾಜು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಎ.ಪಿ. ಸವಿತಾ ಅವರು ಸಾದರಪಡಿಸಿದ 'ಫೀಮೇಲ್ ಪೋಯೆಟಿಸಿಡ್ ಪ್ರಾಬ್ಲಮ್ಸ್ ಅಂಡ್ ಪರ್ಸ್‌ಪೆಕ್ಟಿವ್ಸ್–ಎ ಸೋಸಿಯೋ ಲೀಗಲ್ ಸ್ಟಡಿ ವಿಥ್ ಸ್ಪೆಷಲ್ ರೆಫರೆನ್ಸ್ ಟು ಮೈಸೂರು ಸಿಟಿ' ಮಹಾಪ್ರಬಂಧವನ್ನು ಕಾನೂನು ವಿಷಯದಲ್ಲಿ ಪಿಹೆಚ್.ಡಿ ಪದವಿಗೆ ಮೈಸೂರು ವಿಶ್ವವಿದ್ಯಾನಿಲಯ ಅಂಗೀಕರಿಸಿದೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30 ರಿಂದ.

■ **ಅಜ್ಜನ ಮನೆ ಕಲಾ ಪ್ರಪಂಚ :** ವರ್ಷಋತು ವೈಭವ ಜುಗಲ್‌ಬಂದಿ ಉತ್ಸವ, ಉತ್ತರಾದಿ ದಕ್ಷಿಣಾದಿ ಸಂಗೀತ ಲಾಲಿತ್ಯ, ಆಹ್ವಾನಿತರು: ವಿದ್ವಾನ್ ಹೆಚ್.ಕೆ.ನರಸಿಂಹ ಮೂರ್ತಿ, ವಿದ್ವಾನ್ ಜಿ.ಎಸ್.ರಾಮಾನುಜಮ್, ವಿದ್ವಾನ್ ವೀರಭದ್ರಯ್ಯ ಹಿರೇಮಠ್, ಸ್ಥಳ: ಶ್ರೀ ಸಚ್ಚಿದಾನಂದ ವಿಲಾಸ, ಶ್ರೀ ಶೃಂಗೇರಿ ಶಂಕರ ಮಠ, ಅಗ್ರಹಾರ, ಬೆಳಗ್ಗೆ 9.30 ರಿಂದ.

■ **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಪತ್ತಿನ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಎಂ.ಎಲ್. ವರ್ಧಮಾನಯ್ಯ ಸಭಾಂಗಣ, ಶ್ರೀಹರ್ಷ ರಸ್ತೆ, ಬೆಳಗ್ಗೆ 10ಕ್ಕೆ.

■ **ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸಂಘ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಶ್ರೀಮತಿ ಕೆ.ಎಲ್.ಲಲಿತಾ, ಸ್ಥಳ: ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಸಮುದಾಯ ಭವನ, ಕೆ.ಆರ್.ಮೊಹಲ್ಲಾ, ಬೆಳಗ್ಗೆ 10ಕ್ಕೆ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮಾರ್ಷಿಯಲ್ ಆರ್ಟ್ಸ್ ಮತ್ತು ಯೋಗ:** ರಾಜ್ಯ ಮಟ್ಟದ ಇಂಟರ್ ಜೂಡೋ ಕರಾಟೆ ಮತ್ತು ಯೋಗ ಚಾಂಪಿಯನ್‌ಶಿಪ್, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಶಾಸಕ ಟಿ.ಎಸ್. ಶ್ರೀವತ್ಸ ಮುಖ್ಯ ಅತಿಥಿಗಳು: ಮಾಜಿ ಮೇಯರ್ ಸಂದೇಶ್ ಸ್ವಾಮಿ, ಲಯನ್ ಟಿ ಸುರೇಶ್ ಗೋಲ್ಡ್, ವಿ.ಮಹೇಶ್, ಕೆ.ದೀಪಕ್, ಎ.ವೇದಾವತಿ, ಕಾರ್ತಿಕ್, ಮೈಸೂರು ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಶಿವದಾಸ್, ಕಾರ್ಯದರ್ಶಿ ದೀಪಕ್, ಸ್ಥಳ: ಸಮಸ್ತ ಕಲ್ಯಾಣ ಮಂಟಪ, ದೇವೇಗೌಡ ವೃತ್ತ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಬಸವ ಸಮಿತಿ:** ಶರಣ ಸಂಗಮ, ದತ್ತಿ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗದ ಸದಸ್ಯೆಯರಿಂದ ರುದ್ರ ಪಠಣ, ಅಧ್ಯಕ್ಷತೆ: ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಭುವನ ಸಂಗಾತಿ :** 24ನೇ ವರ್ಷದ ಸಮಾರಂಭ, ಸಾನ್ನಿಧ್ಯ: ಉರಿಲಿಂಗಪೆದ್ದಿ ಮಠದ ಪೀಠಾಧ್ಯಕ್ಷ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಎ.ಆರ್.ಕೃಷ್ಣಮೂರ್ತಿ, ಮುಖ್ಯ ಅತಿಥಿಗಳು: ಶಾಸಕ ರವಿ ಶಂಕರ್, ಕರಾಮುವಿವಿ ಕುಲಪತಿ ಪ್ರೊ ಶರಣಪ್ಪ ವಿ.ಹಲಸೆ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಮರಿಸ್ವಾಮಿ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಹವ್ಯಾಸಿ ಬರಹಗಾರ ಹರಕುಮಾರ್, ಸ್ಥಳ: ಹೋಟೆಲ್ ಗೋವರ್ಧನ ಸಭಾಂಗಣ, ಬೆಳಗ್ಗೆ 11ರಿಂದ.



### ಇಂದಿನ ಪಂಚಾಂಗ

**1.09.2024 ಭಾನುವಾರ, ಮಳೆ ನಕ್ಷತ್ರ: ಪುಬ್ಬ, 31.08.2024ರಿಂದ 12.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ**

■ **ಮೈಸೂರು ಸಂತೆ:** 5ನೇ ಆವೃತ್ತಿ ಹಣ್ಣು ತರಕಾರಿ ಸಂತೆ, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11 ರಿಂದ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ:** 43ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ಮುಖ್ಯ ಅತಿಥಿಗಳು: ವನಿತಾ ಸದನ ಅಧ್ಯಕ್ಷೆ ಎನ್.ಭಾರತಿ, ಟ್ರಸ್ಟಿಗಳಾದ ರವಿಕುಮಾರ್, ಶ್ಯಾಮಲಾ, ವಿದ್ವಾನ್ ಡಾ.ಎಂ. ಶ್ರೀನಿವಾಸಮೂರ್ತಿ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಶ್ರೀ ಕೃಪಾ ಕಲಾ ಕೇಂದ್ರದವರಿಂದ ಭಕ್ತಿಗೀತೆಗಳು, ಮ್ಯೂಸಿಕಲ್ ಬ್ಯಾಂಡ್ ಮೈರಾಗ್ ಅವರಿಂದ ಫ್ಯೂಷನ್, ವಿದುಷಿ ಲಾವಣ್ಯ ಅವರಿಂದ ಗಾಯನ, ವಿದ್ವಾನ್ ಜಿ.ರಾಘವ ಅವರಿಂದ ಸ್ಯಾಕ್ಸೋಫೋನ್ ವಾದನ, ಸ್ಥಳ: ಕಲೆಮನೆ ಸಭಾಂಗಣ, ಹೆಬ್ಬಾಳು 2ನೇ ಹಂತ, ಮಧ್ಯಾಹ್ನ 2.30ಕ್ಕೆ.

■ **ಭೀಮ ಜ್ಯೋತಿ ಸೌಹಾರ್ದ ಸಹಕಾರಿ ಸಂಘ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಆರ್.ಲಕ್ಷ್ಮಣ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ಕ್ಕೆ.

■ **ಆದರ್ಶ ಸೇವಾ ಸಂಘ:** ಪ್ರತಿಭಾ ಪುರಸ್ಕಾರ, ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅತಿಥಿಗಳು: ವಿಶ್ರಾಂತ ನ್ಯಾಯಮೂರ್ತಿ ಎನ್. ಕುಮಾರ್, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಆರ್.ವಿ.ದೇಶಪಾಂಡೆ, ಮಾಜಿ ಶಾಸಕ ಎಸ್.ಎ.ರಾಮದಾಸ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ, ಸ್ಥಳ: ನಾದ ಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಮಧ್ಯಾಹ್ನ 3ಕ್ಕೆ.

■ **ಮೈಸೂರು ವಿವಿ ಸಂಶೋಧಕರ ಸಂಘ, ಎಲ್ಲಾ ವಿದ್ಯಾರ್ಥಿ ಹಾಗೂ ಪ್ರಗತಿಪರ ಸಂಘಟನೆಗಳು:** ಪ್ರೊ.ಬಿ.ಪಿ. ಮಹೇಶ್ ಚಂದ್ರ ಗುರು ಅವರ ವಿರಚಿತ ವಿಶ್ವಮಾನ್ಯ ಬಾಬಾ ಸಾಹೇಬ್ ಅಂಬೇಡ್ಕರ್ ಪುಸ್ತಕ ಬಿಡುಗಡೆ ಹಾಗೂ ನುಡಿ ನಮನ ಕಾರ್ಯಕ್ರಮ, ಸಾನ್ನಿಧ್ಯ: ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಪುಸ್ತಕ ಬಿಡುಗಡೆ: ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ್, ನುಡಿ ನಮನ: ಸಾಹಿತಿ ಪ್ರೊ.ಕೆ.ಎಸ್. ಭಗವಾನ್, ಹಿರಿಯ ಪತ್ರಕರ್ತ ಡಾ.ಕೆ.ಶಿವಕುಮಾರ್, ಉಪಸ್ಥಿತರು: ಮೈಸೂರು ವಿವಿ ಕುಲಸಚಿವ ಎನ್.ನಾಗರಾಜ, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್, ಪ್ರಸಾರಾಂಗ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ರಿಂದ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎ.ಎಸ್.ನಾಗಲಕ್ಷ್ಮೀ, ಎಸ್. ಸಂಗೀತಾ, ವ್ಯಾಖ್ಯಾನ: ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.05 ಸಾರ್ಕೋಮ ಜಾಗೃತಿ ಕುರಿತು ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಕೇರ್ ಸೊಸೈಟಿ, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹದ ಸಂದರ್ಭದಲ್ಲಿ 'ಅನಿಮಿಯಾ ಮುಕ್ತ ಪೌಷ್ಟಿಕ ಕರ್ನಾಟಕ ಕಾರ್ಯಕ್ರಮ' ಕುರಿತು ತಿಳಿಸಿಕೊಡಲಿದ್ದಾರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೈಸೂರು ವಿಭಾಗೀಯ ಸಹನಿರ್ದೇಶಕರ ಕಚೇರಿಯಲ್ಲಿ ಉಪನಿರ್ದೇಶಕರಾಗಿರುವ ಡಾ.ಬಿ. ಮಲ್ಲಿಕಾ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ: ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ: ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಪ್ರೌಢಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಆಕಾಶವಾಣಿಯಲ್ಲಿ ಮಿಶ್ರ ಮಾಧುರ್ಯ

**ಮಧ್ಯಾಹ್ನ:** 12.05 ವನಿತಾ ವಿಹಾರ–ಕೋಲಾರದ ಯಶಸ್ವಿನಿ ಮಹಿಳಾ ಮಂಡಲದ ಮಹಿಳಾ ಸಬಲೀಕರಣ ಕಾರ್ಯ ಚಟುವಟಿಕೆ ಕುರಿತು ಸಂಸ್ಥಾಪಕ ನಿರ್ದೇಶಕಿ ಕೆ.ಎಸ್.ನಾಗವೇಣಿ ಅವರೊಡನೆ ಸಂದರ್ಶನ, ಸಂದರ್ಶಕರು–ಹೆಚ್.ಜಿ.ಶೋಭಾ, ನಿರ್ವಹಣೆ–ಕೆ.ಎಲ್. ರಾಜೇಶ್ವರಿ, 12.30 ದೇವರನಾಮ–ಶ್ರೇಯಸ್. ಎನ್, 12.45 ಜನಪದ ಸಂಗೀತ–ನಾಗಮಂಗಲ ಎಲೆಕೊಪ್ಪ ಗ್ರಾಮದ ನಂಜೇಗೌಡ ಹಾಗೂ ಸಂಗಡಿಗರು ಹಾಡಿರುವ ಭಾಗವಂತಿಕೆ ಮೇಳದ ಪದಗಳು, 1.20 ಭಾವಗೀತೆಗಳು–ಎಂ.ಮಹಾಲಿಂಗ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಮರ್ಯಾದೆ ಮಹಲ್, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ– ತಾಳಮದ್ದಲೆ, ಪ್ರಸಂಗ–ಶ್ವೇತಾವಸಾನ, ಪ್ರಸ್ತುತಿ–ಪುತ್ತೂರು ತಾಲೂಕು ಸುಳ್ಯಪದವಿನ ಶ್ರೀ ಮಹಾವಿಷ್ಣು ಯಕ್ಷಗಾನ ಕಲಾ ಸಂಘದ ಸದಸ್ಯರು, 4.45 ಚಿತ್ರಗೀತೆಗಳು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಎನ್.ಕೇಶವ ಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ– ಆರ್.ಲೋಕೇಶ್ವರಿ, 7.45 ಆಕಾಶವಾಣಿ ಜಾತ್ರಾ ವಿಶೇಷ–ಬಾನುಲಿ ಮಾಲಿಕೆ– ಮುಡುಕುತೊರೆ ಜಾತ್ರೆಯ ಪರಿಚಯ. ಭಾಗವಹಿಸುತ್ತಾರೆ–ಜಾನಪದ ವಿದ್ವಾಂಸ ಡಾ.ಕೃಷ್ಣಮೂರ್ತಿ ಹನೂರು ಹಾಗೂ ನೀಲಗಾರ ಗಾಯಕ ಡಾ. ಮೈಸೂರು ಗುರುರಾಜ್, ಢಕ್ಕೆಯ ಜೊತೆಗಾರ ಜಿ.ಪೃಥ್ವಿರಾಜ್, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ ನಾಟಕದ ಮೇಷ್ಟ್ರು ಗುಂಡ್ಲುಪೇಟೆ ತಾಲೂಕು ಕೂಡಲಾಪುರದ ಕೆ.ಎಸ್.ಮಹದೇವಪ್ಪ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು–ಕಿರಗಸೂರು ರಾಜಪ್ಪ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭೆ, ಉಸ್ತಾದ್ ಅಸ್ಘರ್ ಹುಸೇನ್–ವಯೋಲಿನ್

■ **ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಂಘ, ಮಂಡ್ಯ, ಲಗೋರಿ ಬಳಗ:** ಡಾ. ನೀ.ಗೂ. ರಮೇಶ್ ಅವರ ಹೊಸಗನ್ನಡ ಕಾವ್ಯ ಜಲಸಂವೇದನೆ ಕೃತಿ ಲೋಕಾರ್ಪಣೆ ಸಮಾರಂಭ, ಲೋಕಾರ್ಪಣೆ: ವಿಮರ್ಶಕ ಪ್ರೊ.ಓ.ಎಲ್. ನಾಗಭೂಷಣಸ್ವಾಮಿ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಆಶಯ ನುಡಿ: ಕರ್ನಾಟಕ ಸಂಘದ ಮಂಡ್ಯದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಕೃತಿ ಕುರಿತು: ವಿದ್ವಾಂಸ ಪ್ರೊ.ಸಿ.ನಾಗಣ್ಣ, ಪ್ರಥಮ ಕೃತಿ ಸ್ವೀಕಾರ: ಕರಾಮುವಿ ವಿಶ್ರಾಂತ ಪ್ರಧ್ಯಾಪಕ ಪ್ರೊ.ಎ.ರಂಗಸ್ವಾಮಿ, ಮುಖ್ಯ ಅತಿಥಿಗಳು: ಪ್ರೊ. ನೀಲಗಿರಿ ಎಂ.ತಳವಾರ, ಯು.ಎಸ್. ಮಹೇಶ್, ಉಪಸ್ಥಿತರು: ಡಾ.ನೀ.ಗೂ.ರಮೇಶ್, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ

■ **ಪದ್ಮಭೂಷಣ ಡಾ.ಪಂಡಿತ್ ಪುಟ್ಟರಾಜ ಗವಾಯಿಗಳವರ ಶಿಷ್ಯ ಪ್ರಶಿಷ್ಯ ಬಳಗ:** ಪಂಡಿತ್ ರಮೇಶ್ ಧನ್ನೂರ್ ಅವರ ಶಿಷ್ಯ ವೃಂದದವರಿಂದ ಗುರುವಂದನಾ ಕಾರ್ಯಕ್ರಮ, ಅಧ್ಯಕ್ಷತೆ: ಹಿರಿಯ ಗಾಯಕ ಪಂಡಿತ್ ವೀರಭದ್ರಯ್ಯ ಹಿರೇಮಠ್, ಮುಖ್ಯ ಅತಿಥಿಗಳು: ಹಿರಿಯ ವಯೋಲಿನ್ ಕಲಾವಿದ ವಿದ್ವಾನ್ ಮೈಸೂರು ಅಂಬಾ ಪ್ರಸಾದ್, ಅತಿಥಿಗಳು: ತಬಲ ವಾದಕ ಪಂಡಿತ್ ಅನಂತ್ ಹಂಪಿ ಹೊಳೆ, ಉಪಸ್ಥಿತರು: ತಬಲ ವಾದಕರಾದ ಡಾ. ದುಂಡಯ್ಯ ಪುಜಾರ್, ಪಂಡಿತ್ ಎಂ.ಗಣೇಶ್, ಪಂಡಿತ್ ರಮೇಶ್ ಧನ್ನೂರ್, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಟಿ.ಕೆ.ಲೇಔಟ್, ಸಂಜೆ 5ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ), ಕದಳಿ ಮಹಿಳಾ ವೇದಿಕೆ :** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಪ್ರಾಧ್ಯಾಪಕರಾದ ಡಾ. ಸಿ.ಪಿ. ಲಾವಣ್ಯ ಅವರಿಂದ ನುಡಿಯಬಾರದು ಕೆಟ್ಟ ನುಡಿಯ... ಮುಕ್ತಾಯಕ್ಕ ಕುರಿತು ಉಪನ್ಯಾಸ, ಸ್ಥಳ: ಡಾ. ಪೂರ್ಣಿಮಾ ಎಸ್.ಕುಮಾರಸ್ವಾಮಿ, ನಿವೇದಿತಾ ನಗರ, ಬೋಗಾದಿ 1ನೇ ಹಂತ, ಸಂಜೆ 5.30ಕ್ಕೆ

■ **ಗಾನಭಾರತೀ :** ಶ್ರೀ ಕೃಷ್ಣ ಜಯಂತಿ, ಸಾಧಕರಿಗೆ ಸನ್ಮಾನ, ಸಂಗೀತ ಕಛೇರಿ, ಸನ್ಮಾನಿತರು: ವಿದುಷಿ ನೀರಜಾ ಅಚ್ಯುತ ರಾವ್, ಡಾ.ಎಂ.ಎಸ್.ಭಾಸ್ಕರ್, ವಿದುಷಿ ಡಾ.ಟಿ.ಎಸ್. ಸತ್ಯವತಿ, ವಿದ್ವಾನ್ ರಂಗಸ್ವಾಮಿ, ವಿದ್ವಾನ್ ಬಳ್ಳಾರಿ ರಾಘವೇಂದ್ರ, ವಿದ್ವಾನ್ ಮಹಾದೇವನ್ ಅವರಿಂದ ಗಾಯನ, ವಿದ್ವಾನ್ ಬಿ.ಕೆ.ರಘು–ಪಿಟೀಲು, ವಿದ್ವಾನ್ ಕೆ.ಯು. ಜಯಚಂದ್ರರಾವ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ವೀಣೆಶೇಷಣ್ಣ ಭವನ, ಕುವೆಂಪುನಗರ, ಸಂಜೆ 6ಕ್ಕೆ

■ **ಮೈಸೂರಿನ ವಿ.ಜಾರ್ಜ್ ಪ್ರಭಾಕರ್ ಆರ್ಕೆಸ್ಟ್ರಾ, ಗಝಲ್ ಪಾರ್ಟಿ:** ಮ್ಯೂಸಿಕಲ್ ನೈಟ್ ಸಂಗೀತ ಕಾರ್ಯಕ್ರಮ ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ ಸಂಜೆ 6ಕ್ಕೆ.

■ **ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಕೃಷ್ಣೋತ್ಸವ, ಯಮಲಾರ್ಜುನ ಮೋಕ್ಷ, ಸ್ಥಳ: ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನ, ಕೋಟೆ ಅರಮನೆ ಆವರಣ, ಸಂಜೆ 6ಕ್ಕೆ.

■ **ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಧನ್ವಂತರಿ ಜಯಂತಿ, ಸಪ್ತಾರಾತ್ರೋತ್ಸವ, ಉಪನ್ಯಾಸ, ಸಂಜೆ 6ರಿಂದ, ವಾಹನೋತ್ಸವ, ಮಹಾ ಮಂಗಳಾರತಿ, ಸ್ಥಳ: ಉತ್ತರಾದಿ ಮಠದ ಶ್ರೀ ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಅಗ್ರಹಾರ, ಸಂಜೆ 7ರಿಂದ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ ಸಮಾರೋಪ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ವಿಭಾಗೀಯ ಕಾರ್ಯದರ್ಶಿ ಡಾ.ಪಾಂಡುರಂಗ, ಸಮಾ ರೋಪ ಭಾಷಣ: ಆರಕ್ಷಕ ಉಪಾಧೀಕ್ಷಕ ಜಿ.ಎಸ್.ರಘು, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟೆಬಲ್ ಟ್ರಸ್ಟ್:** ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ, ವಿದ್ವಾನ್ ಎಸ್.ಆರ್. ವಿನಯ್ ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ವಯೋಲಿನ್, ವಿದ್ವಾನ್ ಸುನಾದ ಕೃಷ್ಣ–ಮೃದಂಗ, ವಿದ್ವಾನ್ ಉದಯಕುಮಾರ್–ತಬಲ, ಸ್ಥಳ: ಆಳ್ವಾರ್ ಕಲಾ ಭವನ, ಶ್ರೀ ಕೃಷ್ಣ ದೇವಸ್ಥಾನ, ಗೋಕುಲಂ ಮೂರನೇ ಹಂತ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿದುಷಿ ಧರಿತ್ರಿ ಆನಂದರಾವ್ ಅವರಿಂದ ವಾಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಪ್ರವಚನ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಸಂಜೆ 6.30ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಮಾಸ ಶಿವರಾತ್ರಿ, ದತ್ತ ಸ್ವಾಮಿಗೆ ತೈಲಾಭಿಷೇಕ, ಸ್ಥಳ: ಆಶ್ರಮದ ಆವರಣ.

■ **ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಪೌರಾಣಿಕ ರಂಗಸಂಭ್ರಮ–2024, ಕಲಾಸುರುಚಿ ನಾಟಕ ಮಂಡಳಿ ಅವರಿಂದ ಶ್ರೀಮದ್ ರಾಮಾಯಣ ನಾಟಕ ಪ್ರದರ್ಶನ, ನಿರ್ದೇಶನ : ವಿದ್ವಾನ್ ವೈ.ಎಂ.ಪುಟ್ಟಣ್ಣಯ್ಯ, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

■ **ಇಂಡಿಯಾ :** ರಾಷ್ಟ್ರೀಯ ಕ್ರೀಡಾ ದಿನಾಚರಣೆ ಪ್ರಯುಕ್ತ ಮ್ಯಾರಥಾನ್, ಮುಖ್ಯ ಅತಿಥಿಗಳು: ಸಂಸದ ಯದುವೀರ ಒಡೆಯರ್, ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಸಾ.ರಾ. ಮಹೇಶ್, ಮೈಸೂರು ವಿವಿ ಕುಲಸಚಿವ ಪ್ರೊ. ಎನ್. ನಾಗರಾಜ್, ಶಾಸಕ ಜಿ.ಡಿ.ಹರೀಶ್‌ಗೌಡ, ಕಮಾಂಡಿಂಗ್ ಆಫೀಸರ್ ಎಸ್.ಜೆ.ಎಸ್.ಸಂದಾರ್, ಪೊಲೀಸ್ ಕಮೀಷನರ್ ಸೀಮಾ ಲಾಟ್ಕರ್, ದಿಯಾ ಫೌಂಡೇಷನ್ ಸಂಸ್ಥಾಪಕ ಟ್ರಸ್ಟಿ ನಮ್ರತಾ ಶೆಣೈ, ಸ್ಥಳ: ಓವಲ್ ಮೈದಾನ, ಬೆಳಗ್ಗೆ 6.30ಕ್ಕೆ.

■ **ರಂಗಾಯಣ :** ಬೆಂಗಳೂರು ಥಿಯೇಟರ್ ಕಲೆಕ್ಟಿವ್ ಅಭಿನಯಿಸುವ ಅನುಪಮಾ ಚಂದ್ರಶೇಖರ್ ಅವರು ರಚಿಸಿರುವ, ವೆಂಕಟೇಶ್ ಪ್ರಸಾದ್ ಅನುವಾದಿಸಿ ನಿರ್ದೇಶನದ 'ಕಾಕದೋಷ' ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 630ಕ್ಕೆ.

■ **ನಟನ ರಂಗಶಾಲೆ :** ಹಸಿರು ಹೊನ್ನು ನಾಟಕ ಪ್ರದರ್ಶನ, ನಿರ್ದೇಶನ ಬೆರ್ಟಿ ಓಲಿವೇರಾ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

# ಜಗತ್ತಿನಲ್ಲೇ ಭಾರತೀಯ ಪರಂಪರೆ, ಕಲೆಗೆ ಶ್ರೇಷ್ಠ ಸ್ಥಾನಮಾನವಿದೆ

## ಮೈಸೂರು– ಕೊಡಗು ಸಂಸದ ಯದುವೀರ್ ಅಭಿಮತ



ಮೈಸೂರು ಕರ್ನಾಟಕ ಕಲಾಮಂದಿರದಲ್ಲಿ ಕೈಲಾಸ ಕಲಾಧರ ಸಾಂಸ್ಕೃತಿಕ ಸೇವಾ ಸಂಸ್ಥೆ ವತಿಯಿಂದ ನಡೆದ ನೃತ್ಯ ಲಲಿತೆ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಮಾತನಾಡಿದರು.

ಮೈಸೂರು, ಆ.31(ಎಸ್‌ಪಿಎನ್)– ಭಾರತೀಯ ಪರಂಪರೆ, ಕಲೆ ಜಗತ್ತಿನಲ್ಲೇ ಶ್ರೇಷ್ಠ ಸ್ಥಾನ ಪಡೆದಿದೆ. ಇದನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರದು ಎಂದು ಮೈಸೂರು– ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಕರ್ನಾಟಕ ಕಲಾಮಂದಿರದಲ್ಲಿ ಕೈಲಾಸ ಕಲಾಧರ ಸಾಂಸ್ಕೃತಿಕ ಸೇವಾ ಸಂಸ್ಥೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಡೆದ ನೃತ್ಯ ಲಲಿತೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮೈಸೂರು ಸಂಸ್ಥಾನ ಕಲೆ, ಸಾಹಿತ್ಯ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಿತ್ತು. ಮೈಸೂರಿನಲ್ಲಿ ಈಗಲೂ ವೀಕೆಂಡ್‌ನಲ್ಲಿ ಕಲಾ ಪರಂಪರೆ ಬಿಂಬಿಸುವ ಕಾರ್ಯಕ್ರಮಗಳು ಆಯೋಜನೆಗೊಳ್ಳುತ್ತಿರುವುದು ಸಂತೋಷದ ಸಂಗತಿ ಎಂದರು.

ಪ್ರಧಾನಮಂತ್ರಿ ನರೇಂದ್ರಮೋದಿ ಅವರು, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿಪಥದತ್ತ ಸಾಗಲು 'ವಿಕಸಿತ ಭಾರತ್' ಯೋಜನೆ ಪರಿಚಯಿಸಿದ್ದಾರೆ.



ನೃತ್ಯ ಕಲಾವಿದೆ ಆರ್.ಪೂಜಾ ಯಶ್ವಂತ್, 'ನೃತ್ಯ ಲಲಿತೆ' ಶೀರ್ಷಿಕೆಯಡಿ ಏಕವ್ಯಕ್ತಿ ನೃತ್ಯರೂಪಕ ಪ್ರದರ್ಶಿಸಿದರು.

ಇದಕ್ಕೆ ಮೈಸೂರಿನ ಪ್ರತಿಯೊಬ್ಬ ನಾಗರಿಕರು ಕೈಜೋಡಿಸಬೇಕು ಹಾಗೂ ಮೈಸೂರಿನ ಪರಂಪರೆ, ಕಲೆಯನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲೂ ಪರಿಚಯಿಸಲು ಪ್ರಯತ್ನಿಸಬೇಕು ಎಂದು ಮನವಿ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ನಮ್ಮ ಪೂರ್ವಜರು ಕಲೆ, ನೃತ್ಯ, ಚಿತ್ರಕಲೆ, ಸಾಹಿತ್ಯ ಸೇರಿದಂತೆ ಲಲಿತ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದ್ದರು. ಪ್ರಜಾಪ್ರಭುತ್ವ ಆಡಳಿತ ಬಂದ ಮೇಲೂ ಮೈಸೂರು ಸಂಸ್ಥಾನದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ನೆನೆಯುತ್ತಿರುವುದು ಸಂತೋಷದ ಸಂಗತಿ. ಹಾಗಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಾವ ಕಾಲದಲ್ಲಿ ಮಾಡಿದ್ದರೂ ಜನರು ನೆನೆಯುತ್ತಾರೆ ಎಂಬುದಕ್ಕೆ ಈ ಘಟನೆಗಳೇ ಸಾಕ್ಷಿ ಎಂದರು.

ಇದಕ್ಕೂ ಮುನ್ನ ಕರ್ನಾಟಕ ರಾಜ್ಯ ವಿಕಲಚೇತನ ಒಕ್ಕೂಟದ ಅಧ್ಯಕ್ಷ ಎನ್. ಶ್ರೀಧರ್ ದೀಕ್ಷಿತ್ ಮಾತನಾಡಿ, ಈ ವೇದಿಕೆಯಲ್ಲಿ ಇಲ್ಲಿಯವರೆಗೆ 40 ನೃತ್ಯೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು 50ಕ್ಕೂ ಅಧಿಕ ನೃತ್ಯ ಕಲಾವಿದರಿಗೆ ತಮ್ಮ ನಾಟ್ಯ ಪ್ರಾವೀಣ್ಯತೆಯನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಈ ವೇಳೆ ನೃತ್ಯ ಕಲಾವಿದೆ ಆರ್. ಪೂಜಾ ಯಶ್ವಂತ್, 'ನೃತ್ಯ ಲಲಿತೆ' ಶೀರ್ಷಿಕೆಯಡಿ ಏಕವ್ಯಕ್ತಿ ನೃತ್ಯರೂಪಕ ಪ್ರದರ್ಶಿಸಿದರು. ವೇದಿಕೆಯಲ್ಲಿ ಕೈಶಿಕೀ ನಾಟ್ಯ ವಾಹಿನಿ ಅಧ್ಯಕ್ಷೆ ಡಾ.ಮಾಲಾ ಶಶಿಕಾಂತ್, ಕೈಲಾಸ ಕಲಾಧರ ಸೇವಾ ಸಂಸ್ಥೆಯ ಅಧ್ಯಕ್ಷೆ ಡಾ.ಕೆ.ಜಯಲಕ್ಷ್ಮೀ ಜಿತೇಂದ್ರ ಭಾಗವತ್ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮ ನಂತರ ಪುಷ್ಪಾಂಜಲಿ, ಗಣೇಶ ಕವಿತ್ವ, ಜತಿಸ್ವರ, ದರುವರ್ಣ, ದೇವರನಾಮ ಯಾರೇ ರಂಗನ, ವೀರಭದ್ರ, ನವದುರ್ಗಾ, ಮಂಗಳ ರಾಗ ಮಾಲಿಕೆಗಳನ್ನು ಪ್ರಸ್ತುತಿ ಪಡಿಸಿದರು.

# ಮೈಸೂರಲ್ಲಿ ಆರಂಭಗೊಳ್ಳಲಿವೆ ಟ್ರಿಪಲ್ ಆರ್ ಸೆಂಟರ್ಸ್

● ವ್ಯರ್ಥವೆಂದು ಬಿಸಾಡುವ ಪದಾರ್ಥಗಳ ಮರುಬಳಕೆಗೆ ಉತ್ತೇಜಿಸುವುದು, ತ್ಯಾಜ್ಯ ಉತ್ಪಾದನೆ ತಗ್ಗಿಸುವ ಉದ್ದೇಶ ● ನಗರದಲ್ಲಿ ತಲೆ ಎತ್ತಲಿವೆ ಏಳು ಸೆಂಟರ್

ಮೈಸೂರು,ಆ.31(ಪಿಎಂ)– ವ್ಯರ್ಥವೆಂದು ಬಿಸಾಡುವ ಪದಾರ್ಥಗಳನ್ನು ಸಾಧ್ಯವಾದಷ್ಟು ಮರುಬಳಕೆಗೆ ಸಜ್ಜುಗೊಳಿಸುವುದು ಮತ್ತು ಮರು ಸಂಸ್ಕರಣೆ ಮೂಲಕ ಹೊಸ ಉತ್ಪನ್ನಗಳನ್ನು ತಯಾರಿಸುವುದಕ್ಕೆ ಆದ್ಯತೆ ನೀಡುವ ಕ್ರಮವು ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಇದಕ್ಕೆ 'ಟ್ರಿಪಲ್ ಆರ್ (RRR) ಸೆಂಟರ್' ಪರಿಕಲ್ಪನೆ ಪೂರಕವಾಗಲಿದೆ.

ತ್ಯಾಜ್ಯವನ್ನು ಕಡಿಮೆಗೊಳಿಸುವುದು (ರೆಡ್ಯೂಸ್), ಮರುಬಳಕೆ (ರೀ ಯೂಸ್), ಮರು ಸಂಸ್ಕರಣೆ (ರೀ ಸೈಕಲ್) ಸದರಿ ಪರಿಕಲ್ಪನೆಯ ತಿರುಳು. ಹಾಗಾಗಿಯೇ ತ್ಯಾಜ್ಯ ಉತ್ಪಾದನೆ ತಗ್ಗಿಸಲು ಮತ್ತು ವ್ಯರ್ಥ ಪದಾರ್ಥಗಳನ್ನು ಮರುಬಳಕೆಗೆ ಸಜ್ಜುಗೊಳಿಸಲು ಮೈಸೂರು ಮಹಾನಗರಪಾಲಿಕೆಯು ನಗರದಲ್ಲಿ ಟ್ರಿಪಲ್ ಆರ್ ಕೇಂದ್ರಗಳನ್ನು ತೆರೆಯಲು ಮುಂದಾಗಿದೆ. ನಗರದ ವಿವಿಧೆಡೆ 7 ಟ್ರಿಪಲ್ ಆರ್ ಕೇಂದ್ರಗಳನ್ನು ಸಜ್ಜುಗೊಳಿಸುವ ಪಾಲಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

2024–25ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಸದರಿ ಕೇಂದ್ರಗಳನ್ನು ಅನುಷ್ಠಾನಗೊಳಿಸುವ ಯೋಜನೆಗೆ ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿದ್ದು, ಅದರಂತೆ ಒಟ್ಟು 30 ಲಕ್ಷ ರೂ. ವೆಚ್ಚದಲ್ಲಿ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುತ್ತಿದೆ. ಪಾಲಿಕೆಯ ವಲಯ ಕಚೇರಿ ಕಟ್ಟಡಗಳ ಆವರಣದಲ್ಲಿ ಈ ಕೇಂದ್ರಗಳ ಸ್ಥಾಪನೆಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಸದರಿ ಕೇಂದ್ರಗಳ ಸ್ಥಾಪನೆಗಾಗಿ ಶೆಡ್‌ಗಳನ್ನು ಟೆಂಡರ್ ದಾರರು ನಿರ್ಮಿಸಿಕೊಡಲಿದ್ದಾರೆ.

ಇನ್ನು ಎರಡು ತಿಂಗಳಲ್ಲಿ ಈ ಯೋಜನೆಯಡಿ ಸೆಂಟರ್‌ಗಳು ಕಾರ್ಯಾರಂಭ ಮಾಡಲಿವೆ. ಈ ಯೋಜನೆಗೆ ಅಗತ್ಯವಿರುವ ಬಂಡವಾಳವನ್ನು ಪಾಲಿಕೆ ಹೂಡಿದರೆ, ಆಸಕ್ತ ಸ್ವಸಹಾಯ ಸಂಘಗಳ ಮೂಲಕ ಸೆಂಟರ್‌ಗಳ ಕಾರ್ಯನಿರ್ವಹಣೆಗೆ ಕ್ರಮ ವಹಿಸಲು ಪಾಲಿಕೆ ಉದ್ದೇಶಿಸಿದೆ. ಏಕಬಳಕೆ ಪ್ಲಾಸ್ಟಿಕ್ ನಿಷೇಧದ ಹಿನ್ನೆಲೆಯಲ್ಲಿ ಅದಕ್ಕೆ ಪರ್ಯಾಯ ವಸ್ತುಗಳನ್ನು ಸಾರ್ವಜನಿಕರಿಗೆ ಒದಗಿಸುವ ನಿಟ್ಟಿನಲ್ಲಿಯೂ ಈ ಕೇಂದ್ರಗಳು ಕಾರ್ಯನಿರ್ವಹಿಸಲಿವೆ. ಸಮಾರಂಭಗಳಿಗೆ ಭೋಜನಕ್ಕಾಗಿ ಸ್ಟೀಲ್ ತಟ್ಟೆ, ಲೋಟಗಳನ್ನು ಇದೇ ಕೇಂದ್ರಗಳ ಮೂಲಕ ಬಾಡಿಗೆ ಆಧಾರದಲ್ಲಿ ಒದಗಿಸುವ ಮೂಲಕ ಪ್ಲಾಸ್ಟಿಕ್‌ಗೆ ಪರ್ಯಾಯ ಮಾರ್ಗವನ್ನು ಸಾರ್ವಜನಿಕರು ಅನುಸರಿಸಲು ಉತ್ತೇಜನ ನೀಡುವ ನಿಟ್ಟಿನಲ್ಲೂ ಕೇಂದ್ರಗಳು ಕೆಲಸ ಮಾಡಲಿವೆ. ಹಳೇ ಬಟ್ಟೆ ಸೇರಿದಂತೆ ಬಳಸಿ ವ್ಯರ್ಥವೆಂದು ಪರಿಗಣಿಸಿರುವ ಅನೇಕ ಸಾಮಗ್ರಿಗಳನ್ನು ಸಾರ್ವಜನಿಕರು ಬಿಸಾಡದೇ ಈ ಕೇಂದ್ರಗಳಿಗೆ ತಲುಪಿಸಿದರೆ ಮರುಬಳಕೆಗೆ ಅವುಗಳನ್ನು ಸಜ್ಜುಗೊಳಿಸಲಾಗುತ್ತದೆ. ಸಂಸ್ಕರಣೆ ಮೂಲಕ ಪುನರ್ ಬಳಕೆಗೆ ವ್ಯವಸ್ಥೆ ಸಹ ಮಾಡಲಾಗುತ್ತದೆ. ಹಳೇ ಬಟ್ಟೆಗಳಿಂದ ಬಟ್ಟೆ ಬ್ಯಾಗ್ ತಯಾರಿಸಲು ಪ್ಲಾಸ್ಟಿಕ್ ಕವರ್‌ಗೆ ಪರ್ಯಾಯವಾಗಿ ಪೂರೈಸುವುದೂ ಈ ಕೇಂದ್ರಗಳಿಂದ ಆಗಲಿದೆ.

ಹಳೆ ಬಟ್ಟೆ, ಹಳೇ ರಬ್ಬರ್ ಸಾಮಗ್ರಿ, ಇ ವೇಸ್ಟ್, ಹಳೇ ಪೇಪರ್, ಹಳೇ ಟೈರ್ ಸೇರಿದಂತೆ ಮೊದಲಾದ ಹಳೇ ಸಾಮಗ್ರಿಗಳನ್ನು ಈ ಕೇಂದ್ರಗಳಿಗೆ ನೀಡಬಹುದು. ಕೇಂದ್ರಗಳ ಸ್ಥಾಪನೆಗೆ ಐದು ಸ್ಥಳಗಳನ್ನು ಅಂತಿಮಗೊಳಿಸಲಾಗಿದೆ. ಜೆಪಿ ನಗರ, ಕುವೆಂಪುನಗರ, ವಲಯ ಕಚೇರಿ 6ರ ಎದುರು, ಸರಸ್ವತಿಪುರಂ ಬೇಕ್ ಪಾಯಿಂಟ್ ವೃತ್ತ, ಮಾತೃ ಮಂಡಳಿ ವೃತ್ತ ಸೇರಿದಂತೆ ಪಾಲಿಕೆಯ ಜಾಗದಲ್ಲಿ ಒಟ್ಟು 7 ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

**ಇಂದೋರ್ ಮಾದರಿ:** ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಅಭಿಯಾನದ ಭಾಗವಾಗಿ ಈ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುತ್ತಿದೆ. ಅಂತೆಯೇ ಮಧ್ಯಪ್ರದೇಶದ ಇಂದೋರ್ ನಗರದಲ್ಲಿ ಇಲ್ಲಿನ ಮುನ್ಸಿಪಾಲ್ ಕಾರ್ಪೋರೇಷನ್ ಸಹ ಟ್ರಿಪಲ್ ಆರ್ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದು, ಮೈಸೂರು ಮಹಾನಗರ ಪಾಲಿಕೆ ಪ್ರತಿನಿಧಿಗಳು ಅಲ್ಲಿಗೆ ಭೇಟಿ ನೀಡಿ, ಅಲ್ಲಿನ ಅನುಷ್ಠಾನ ವಿಧಾನಗಳನ್ನು ಅಧ್ಯಯನ ಮಾಡಿದ್ದು, ಇದೀಗ ಮೈಸೂರಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.





ಇಂದೋರ್ ನಗರದಲ್ಲಿ ಆರಂಭಿಸಲಾಗಿರುವ ಟ್ರಿಪಲ್ ಆರ್ ಕೇಂದ್ರದ ಚಿತ್ರ.

> "ಟ್ರಿಪಲ್ ಆರ್ ಸೆಂಟರ್‌ಗಳಿಗಾಗಿ ಟೆಂಡರ್‌ದಾರರು ಶೆಡ್‌ಗಳನ್ನು ನಿರ್ಮಾಣ ಮಾಡಲಿದ್ದಾರೆ. ಈ ಕೇಂದ್ರಗಳಲ್ಲಿ ಇ–ತ್ಯಾಜ್ಯಗಳ ಕಲಾಕೃತಿಗಳನ್ನು ನಿರ್ಮಿಸಿ, ಸಾರ್ವಜನಿಕರ ಗಮನ ಸೆಳೆಯಲಾಗುವುದು. ಆಸಕ್ತ ಸ್ವಸಹಾಯ ಸಂಘಗಳ ಮೂಲಕ ಕೇಂದ್ರಗಳು ಕಾರ್ಯನಿರ್ವಹಣೆ ಮಾಡಲಿವೆ. ಗುಜರಿ ಮಾದರಿಯಲ್ಲಿ ಕೆಲ ಸಾಮಗ್ರಿಗಳಿಗೆ ಪ್ರತಿಯಾಗಿ ನಗದು ನೀಡುವ ಬಗ್ಗೆಯೂ ಚಿಂತಿಸಲಾಗಿದೆ. ತ್ಯಾಜ್ಯದಿಂದ ಬೊಂಬೆ ಸೇರಿದಂತೆ ಕಲಾಕೃತಿಗಳನ್ನು ತಯಾರು ಮಾಡುವ ಪ್ರಕ್ರಿಯೆಯೂ ಕೇಂದ್ರಗಳಲ್ಲಿ ನಡೆಯಲಿದೆ. ಒಟ್ಟಾರೆ ತ್ಯಾಜ್ಯದ ಉತ್ಪಾದನೆ ಕಡಿಮೆ ಮಾಡಿ, ಮರುಬಳಕೆಗೆ ಸಾರ್ವಜನಿಕರನ್ನು ಉತ್ತೇಜಿಸುವುದು ಈ ಕೇಂದ್ರಗಳ ಉದ್ದೇಶವಾಗಿದೆ.
>
> –ಮೃತ್ಯುಂಜಯ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ.

## ವಿಚಾರಣೆ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಚಾಮುಂಡೇಶ್ವರಿ ದರ್ಶನ!

ಮೈಸೂರು, ಆ.31– ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿರುವ ಸಂಬಂಧ ಹೈಕೋರ್ಟ್‌ನಲ್ಲಿ ಸೋಮವಾರ ಮಧ್ಯಾಹ್ನ ವಿಚಾರಣೆ ಮುಂದುವರೆಯಲಿದ್ದು, ಅಂದು ಬೆಳಗ್ಗೆ ಸಿಎಂ ಮೈಸೂರಿಗೆ ಆಗಮಿಸಿ ಚಾಮುಂಡೇಶ್ವರಿಯ ದರ್ಶನ ಪಡೆಯಲಿದ್ದಾರೆ.

ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಸೋಮವಾರ(ಸೆ.2) ಬೆಳಗ್ಗೆ 11.25ಕ್ಕೆ ಮೈಸೂರಿಗೆ ಆಗಮಿಸಲಿರುವ ಸಿಎಂ ಸಿದ್ದರಾಮಯ್ಯ, ವಿಮಾನ ನಿಲ್ದಾಣದಿಂದ ನೇರವಾಗಿ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿಯ ದರ್ಶನ ಪಡೆಯಲಿದ್ದಾರೆ. ನಂತರ 12.30ಕ್ಕೆ ಬೆಟ್ಟದ ದಾಸೋಹ ಭವನದಲ್ಲಿ ಶ್ರೀ ಚಾಮುಂಡಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಿದ ನಂತರ ಕೆಲಕಾಲ ವಿಶ್ರಾಂತಿ ಪಡೆದು ಸಂಜೆ 4.45ಕ್ಕೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

# ಕೋವಿಡ್ ಹಗರಣ: ನ್ಯಾ. ಕುನ್ಹಾ ಅವರಿಂದ ಮುಖ್ಯಮಂತ್ರಿಗಳಿಗೆ ತನಿಖಾ ವರದಿ ಸಲ್ಲಿಕೆ



ಬೆಂಗಳೂರು, ಆ.31– ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಕೋವಿಡ್ ಹಗರಣದ ಬಗ್ಗೆ ತನಿಖೆ ನಡೆಸಿದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿ. ಕುನ್ಹಾ ಅವರ ತನಿಖಾ ವರದಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೈಸೇರಿದೆ.

ಸಿಎಂ ಅಧಿಕೃತ ನಿವಾಸ ಕಾವೇರಿಯಲ್ಲಿ ಸಿದ್ದರಾಮಯ್ಯ ಭೇಟಿ ಮಾಡಿದ ನ್ಯಾ. ಜಾನ್ ಮೈಕಲ್ ಡಿ.ಕುನ್ಹಾ ತನಿಖಾ ವರದಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಪೊನ್ನಣ್ಣ, ಸಚಿವರಾದ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ ಕಾಲದ ಹಗರಣಗಳ ಆರೋಪಕ್ಕೆ ಸಂಬಂಧಪಟ್ಟಂತೆ ತನಿಖೆ ನಡೆಸಲು 2023 ಆಗಸ್ಟ್‌ನಲ್ಲಿ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಜಾನ್ ಮೈಕೆಲ್ ಡಿ.ಕುನ್ಹಾ ಅವರ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಿದ್ದ ಸಿದ್ದರಾಮಯ್ಯ ಸರ್ಕಾರ ವರದಿ ನೀಡುವಂತೆ ಸೂಚಿಸಿತ್ತು.

ವೆಂಟಿಲೇಟರ್‌ಗಳ ಖರೀದಿ, ಆಕ್ಸಿಜನ್ ಉಪಕರಣಗಳ ಖರೀದಿ, ನಿರ್ವಹಣೆ ಲೋಪ, ಕೋವಿಡ್–19 ನಿರ್ವಹಣಾ ಉಪಕರಣಗಳು, ರ್‍ಯಾಪಿಡ್ ಆಂಟಿಜೆನ್ ಟೆಸ್ಟ್ ಕಿಟ್‌ಗಳ ಖರೀದಿ ಮತ್ತು ಸಂಗ್ರಹಣೆಯಲ್ಲಿ ಲೋಪ, ಅಕ್ರಮಗಳ ಆರೋಪದ ಬಗ್ಗೆ ತನಿಖೆಗೆ ಸೂಚಿಸಲಾಗಿತ್ತು. ಆಯೋಗ ರಚನೆಯಾಗಿ ವರ್ಷದೊಳಗೆ ತನಿಖಾ ವರದಿ ಸಲ್ಲಿಕೆಯಾಗಿದ್ದು, ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ವರದಿ ಬಹಿರಂಗೊಳಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

**ಆರೋಗ್ಯ ಇಲಾಖೆಯಿಂದಲೂ ವರದಿ ಸಲ್ಲಿಕೆ:** ಕೋವಿಡ್ ಹಗರಣಗಳ ಬಗ್ಗೆ ತನಿಖೆ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯ ಹಣಕಾಸು ವಿಭಾಗವು ರಾಜ್ಯ ಸರ್ಕಾರಕ್ಕೆ 2023ರ ಜುಲೈ 5ರಂದೇ ವರದಿ ಸಲ್ಲಿಸಿತ್ತು. ಬಿಜೆಪಿ ಅವಧಿಯಲ್ಲಿ ಕೋವಿಡ್ ವೇಳೆ ಎಷ್ಟು ವೈದ್ಯಕೀಯ ಸಲಕರಣೆ ಖರೀದಿ ಆಗಿತ್ತು, ಯಾವೆಲ್ಲ ಔಷಧಿ ಖರೀದಿ ಮಾಡಲಾಗಿತ್ತು. ವಿಭಾಗವಾರು ಯಾವುದಕ್ಕೆ ಎಷ್ಟು ಹಣ ಖರ್ಚಾಗಿದೆ, ಏನೆಲ್ಲಾ ಖರೀದಿ ಆಗಿದೆ, ಎನ್.ಹೆಚ್.ಎಂ, ಅಡ್ಮಿನ್ ವಿಭಾಗ, ಇಂಜಿನಿಯರಿಂಗ್ ವಿಭಾಗ, ಐಸಿಯು, ವೆಂಟಿಲೇಟರ್ ಖರೀದಿ ಸೇರಿದಂತೆ ವಿಭಾಗವಾರು ಪ್ರತ್ಯೇಕ ಬಿಲ್‌ಗಳನ್ನು ಒಳಗೊಂಡ ವರದಿಯನ್ನು ಸಲ್ಲಿಕೆ ಮಾಡಲಾಗಿತ್ತು.



## ದರ್ಶನ್ ಭೇಟಿಯಾದ ಪತ್ನಿ ವಿಜಯಲಕ್ಷ್ಮಿ



ಬಳ್ಳಾರಿ: ಮೂರು ಬ್ಯಾಗ್‌ಗಳಲ್ಲಿ ವಿಜಯಲಕ್ಷ್ಮಿ ದರ್ಶನ್‌ಗೆ ಕೊಡಲು ಟೀ ಶರ್ಟ್ ಸೇರಿದಂತೆ ಇತರ ಬಟ್ಟೆಗಳು, ಬಿಸ್ಕೆಟ್ ಹಾಗೂ ಡ್ರೈ ಫ್ರೂಟ್ಸ್‌ಗಳನ್ನೂ ನೀಡಿದ್ದಾರೆ. ಪೊಲೀಸರು ಬ್ಯಾಗ್ ಪರಿಶೀಲಿಸಿದ ಬಳಿಕವೇ ಅವುಗಳನ್ನು ಜೈಲಿನ ಒಳಗೆ ಕೊಂಡೊಯ್ಯಲು ಅನುಮತಿಸಿದ್ದಾರೆ. ಬಳ್ಳಾರಿ ಜೈಲಿಗೆ ಶಿಫ್ಟ್ ಆದ ಎರಡೇ ದಿನಗಳಲ್ಲಿ ದರ್ಶನ್ 4 ಕೆಜಿ ತೂಕ ಕಳೆದುಕೊಂಡಿದ್ದಾರೆ ಎನ್ನಲಾಗಿದೆ. ಪರಪ್ಪನ ಅಗ್ರಹಾರ ಜೈಲಿನಿಂದ ಬಳ್ಳಾರಿ ಸೆಂಟ್ರಲ್ ಜೈಲಿಗೆ ಬಂದಾಗ 107 ಕೆಜಿ ಇದ್ದ ದರ್ಶನ್, ಇದೀಗ 4 ಕೆಜಿ ತೂಕ ಕಳೆದುಕೊಂಡು 103 ಕೆಜಿ ತೂಕ ಹೊಂದಿದ್ದಾರೆ ಎಂದು ಮೂಲಗಳಿಂದ ತಿಳಿಬಂದಿದೆ.

## ಶಾಪಿಂಗ್ ಮಾಲ್‌ನಲ್ಲಿ ಕುಸಿದು ಬಿದ್ದ ಮಾಜಿ ಸಿಎಂ ಸದಾನಂದಗೌಡರ ಪತ್ನಿ



ಬೆಂಗಳೂರು, ಆ.31–ಶಾಪಿಂಗ್‌ಗೆ ಬಂದಿದ್ದ ವೇಳೆ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡರ ಪತ್ನಿ ಡಾಟಿ ಸದಾನಂದಗೌಡ ಕುಸಿದು ಬಿದ್ದ ಘಟನೆ ಬೆಂಗಳೂರಿನ ನಾಗಸಂದ್ರ ಮೆಟ್ರೋ ಬಳಿಯ ಐಕಿಯಾ ಮಾಲ್‌ನಲ್ಲಿ ನಡೆದಿದೆ. ಹಠಾತ್ ಉಸಿರಾಟದ ತೊಂದರೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರು ಕುಸಿದು ಬಿದ್ದಿದ್ದಾರೆ. ಕೂಡಲೇ ಎಚ್ಚೆತ್ತ ಕಾರು ಚಾಲಕ, ಸಮೀಪದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾನೆ. ವಿಷಯ ತಿಳಿದು ಡಿ.ವಿ.ಸದಾನಂದಗೌಡ ಆಸ್ಪತ್ರೆಗೆ ದೌಡಾಯಿಸಿದರು. ಅವರ ಜೊತೆ ದಾಸರಹಳ್ಳಿಯಲ್ಲಿ ಶಾಸಕ ಮುನಿರಾಜು ಹಾಗೂ ಸುಜಾತ ಮುನಿರಾಜು ಕೂಡ ಆಸ್ಪತ್ರೆಗೆ ಆಗಮಿಸಿದರು. ಸದ್ಯ ತೀವ್ರ ನಿಗಾ ಘಟಕದಲ್ಲಿ ಡಾಟಿ ಸದಾನಂದಗೌಡ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.














**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು**
ಜೆ.ಎಲ್.ಬಿ ರಸ್ತೆ, ಮೈಸೂರು – 570005,
ದೂರವಾಣಿ/ಫ್ಯಾಕ್ಸ್: 0821–2420624
ಸಂ: ಮೈನಪ್ರಾ/ಅಅ/ಪಿಬಿ/ಟಿಎನ್/ದಸಸರಾ–05/2024–25 ದಿ: 30.08.2024

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**

(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ರೂ. 5.00 ಲಕ್ಷ ರಿಂದ 25 ಲಕ್ಷದವರೆಗಿನ ಅಂದಾಜು ಮೊತ್ತದ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ 01 ರಿಂದ 16 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿ: 31.08.2024 ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ದಿ: 09.09.2024ರ ಸಂಜೆ 4.00 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ದಿ: 10.09.2024ರ ಸಂಜೆ 4.30 ರ ನಂತರ ತೆರೆಯಲಾಗುವುದು. ಅರ್ಹ ನೋಂದಾಯಿತ ಸಿವಿಲ್ ಮತ್ತು ವಿದ್ಯುತ್ ಗುತ್ತಿಗೆದಾರರು ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ 0821–2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.mudamysore.gov.in ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

**ಟಿಪ್ಪಣಿ:** ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೇ ಪರಿಗಣಿಸುವುದು. ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಅಧೀಕ್ಷಕ ಅಭಿಯಂತರರು
DIPR/DDMYS-492/KSMCA-335/2024-25

**ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ –571107**
ಈ–ಮೇಲ್ :itstaff_ulb_periyapatna@yahoo.com Phone(O): 08223-273036
ಸಂ:ಪಿಪುಸ/ತಾಂತ್ರಿಕ/ಜೆಇ2/ಟೆಂಡರ್–11/2024–25 ದಿನಾಂಕ: 30.08.2024

**ಟೆಂಡರ್ ಪ್ರಕಟಣೆ**

ಈ ಮೂಲಕ ಪ್ರಕಟಿಸುವುದೇನೆಂದರೆ ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ 2019–20, 2020–21, 2022–23 & 2023–24ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ (ಉಳಿಕೆ ಅನುದಾನ) ಮತ್ತು ಪುರಸಭಾ ಅನುದಾನ ಒಳಗೊಂಡ ಕಾಮಗಾರಿಗಳನ್ನು ನಿರ್ವಹಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ–1) ನಿಯಮಾವಳಿಯಂತೆ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸದರಿ ವೆಬ್‌ಸೈಟ್ ಮುಖಾಂತರ ಸಲ್ಲಿಸಬಹುದು.

**ಟೆಂಡರ್ ಸಲ್ಲಿಸುವ ವಿವರ:** 1) ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿ: 02.09.2024 ರಿಂದ 17.09.2024ರ ವರೆಗೆ. 2) ಟೆಂಡರ್ ಸ್ವೀಕರಿಸುವ ಕೊನೆಯ ದಿ: 17.09.2024 ರ ಸಂಜೆ 04.00 ಗಂಟೆ 3) ಟೆಂಡರ್‌ಗಳನ್ನು ತೆರೆಯುವ ದಿ: 19.09.2024 ರ ಸಂಜೆ 04.00 ಗಂಟೆ.

| ಕ್ರ ಸಂ. | ಇಂಡೆಂಟ್ ನಂ. | ಅಂದಾಜು ಮೊತ್ತ ರೂ.ಗಳಲ್ಲಿ | ಇಎಂಡಿ ಮೊತ್ತ ರೂ.ಗಳಲ್ಲಿ |
|---|---|---|---|
| 1 | DMA/2024-25/RD/WORK_INDENT28435 | 2,90,000/- | 7,250/- |
| 2 | DMA/2024-25/RD/WORK_INDENT28438 | 1,90,000/- | 4,750/- |
| 3 | DMA/2024-25/RD/WORK_INDENT28440 | 1,65,000/- | 4,125/- |
| 4 | DMA/2024-25/RD/WORK_INDENT28441 | 1,45,000/- | 3,625/- |

**ಸೂಚನೆ:** ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ   ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ
DIPR/DDMYS-502/KSMCA-334/2024-25

## ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ನೀವು ಹೀಗೆ ಆಡ್ತಾ ಇರಿ ನರಕದಲ್ಲೂ ಜಾಗ ಸಿಗೋಲ್ಲ
ಗಂಡ : ಅಷ್ಟಕ್ಕೂ ಈಗ ಎಲ್ಲಿದ್ದೀನಿ ಅಂತಾ....!!

ಮೈಸೂರು ಮಿತ್ರ

ಭಾನುವಾರ, 1 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ..........**

ಹಣ ಮನುಷ್ಯನನ್ನು ಬದಲಿಸುವುದಿಲ್ಲ. ಮನುಷ್ಯನ ನಿಜ ಸ್ವರೂಪವನ್ನು ಹೊರಗೆ ಹಾಕುತ್ತದೆ. – ನುಡಿಮುತ್ತು

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಮಳೆ ನೀರನ್ನು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ ಹಾಗೆ.

## ನಿಮ್ಮ ಪತ್ರಗಳು

### ಜೈಲುಗಳು ಮೋಜು ಮಸ್ತಿಯ ತಾಣವಾಗದಿರಲಿ

ಮಾನ್ಯರೆ,

ರೇಣುಕಾ ಸ್ವಾಮಿ ಅಪಹರಣ ಮತ್ತು ಕೊಲೆ ಪ್ರಕರಣದಲ್ಲಿ ಚಿತ್ರ ನಟ ದರ್ಶನ್ ಹಾಗೂ ಪವಿತ್ರಾ ಗೌಡ ಸೇರಿದಂತೆ ಇತರ ಆರೋಪಿಗಳನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಈ ಹಿಂದೆ ಬಂಧನದಲ್ಲಿ ಇಟ್ಟಿದ್ದು ಸರಿಯಷ್ಟೆ. ಜೈಲಿನಲ್ಲಿ ದರ್ಶನ್‌ಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಲಾಗಿತ್ತು ಎಂಬ ಆರೋಪ ಕೇಳಿ ಬಂದ ಹಿನ್ನಲೆಯಲ್ಲಿ ದರ್ಶನ್ ಸೇರಿದಂತೆ ಕೆಲವು ವಿಚಾರಣಾದೀನ ಖೈದಿಗಳನ್ನು ರಾಜ್ಯದ ಇತರ ಜೈಲುಗಳಿಗೆ ಸ್ಥಳಾಂತರ ಗೊಳಿಸಲಾಗಿದೆ. ಪರಪ್ಪನ ಅಗ್ರಹಾರ ಸೇರಿದಂತೆ ರಾಜ್ಯದ ಅನೇಕ ಜೈಲುಗಳಲ್ಲಿ ಆಯ್ದ ಕೈದಿಗಳಿಗೆ ಎಲ್ಲಾ ರೀತಿಯ ಸೌಕರ್ಯ ಮತ್ತು ಸೌಲಭ್ಯಗಳನ್ನು ನೀಡಲಾಗುತ್ತದೆ ಎಂಬ ಆರೋಪ ಹಲವಾರು ವರ್ಷಗಳಿಂದ ಕೇಳಿ ಬರುತ್ತಿದೆ. ಪ್ರಕರಣವೊಂದರಲ್ಲಿ ಜೈಲು ಶಿಕ್ಷೆಗೆ ಗುರಿಯಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲು ಸೇರಿದ್ದ ದಿವಂಗತ ಜಯಲಲಿತಾ ಆಪ್ತೆ ಶಶಿಕಲಾರವರಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ನೀಡಲಾಗಿತ್ತು ಎಂಬ ಬಗ್ಗೆ ಸಾಕಷ್ಟು ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗಿ ನಂತರ ತಣ್ಣಗಾಗಿದ್ದವು. ಹಿರಿಯ ಪೋಲಿಸ್ ಅಧಿಕಾರಿ (ಐಪಿಎಸ್) ಶ್ರೀಮತಿ ರೂಪ ಸಹ ಇದರ ಬಗ್ಗೆ ತನಿಖೆ ನಡೆಸಿ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಿದ್ದರು. ಅದರ ಹಣೇಬರಹ ಏನಾಗಿದೆಯೋ ಗೊತ್ತಿಲ್ಲ. ಪ್ರಭಾವಶಾಲಿ ವ್ಯಕ್ತಿಗಳು, ರಾಜಕಾರಣಿಗಳು, ಸಿರಿವಂತರು ಹಣ ಚೆಲ್ಲಿ ಜೈಲುಗಳಲ್ಲಿ ತಮಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಪಡೆಯಬಹುದೆಂಬ ವರದಿಗಳ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಈಗಲಾದರೂ ಎಚ್ಚೆತ್ತು ಜೈಲುಗಳಲ್ಲಿ ಇಂತಹ ಕೃತ್ಯಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು. ಜೊತೆಗೆ ಅಗತ್ಯ ಸುಧಾರಣಾ ಕ್ರಮಗಳನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕು. ಜೈಲು ಸುಧಾರಣಾ ಕೇಂದ್ರಗಳಾಗಬೇಕೇ ಹೊರತು, ಮೋಜು ಮಸ್ತಿಗಳ ತಾಣವಾಗಬಾರದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

### ಜನೋಪಯೋಗಿ ರಸ್ತೆಯನ್ನು ದುರಸ್ತಿಪಡಿಸಿ

ಮಾನ್ಯರೆ,

ಹೆಚ್.ಡಿ.ಕೋಟೆ, ಜಯಪುರದ ಸುತ್ತಮುತ್ತಲ ಹತ್ತಾರು ಹಳ್ಳಿಯಿಂದ ದಿನಂಪ್ರತಿ ಸಾವಿರಾರು ಮಂದಿ ಮೈಸೂರಿಗೆ ಹೋಗಲು ಮಾನಂದವಾಡಿ ರಸ್ತೆಯ ಬದಿಯಲ್ಲಿರುವ ಕೆಂಚಲಗೂಡು ಗೇಟಿನಿಂದ ಹೊರಟು ಸುಪ್ತಋಷಿ ನಗರದ ಮೂಲಕ ಮಾಲೆಗಾಲದ ಮಾರಮ್ಮನವರ ದೇವಸ್ಥಾನದ ಪಕ್ಕದಿಂದ ವಿವೇಕಾನಂದ ನಗರದ ಮೂಲಕ ಮೈಸೂರು ತಲುಪಿ ತಮ್ಮ ಕೆಲಸ ಕಾರ್ಯಗಳನ್ನು ಪೂರೈಸಿ ವಾಪಸ್ಸು ಮರಳುವರು. ಸದರಿ ರಸ್ತೆ ಕೆಂಚಲಗೂಡಿನಿಂದ ರಿಂಗ್ ರಸ್ತೆಯವರೆಗೆ ಸುಮಾರು ಐದು ಕಿಲೋ ಮೀಟರ್ ಅಂತರವಿದ್ದು ಅದರಲ್ಲಿ ಸುಮಾರು ಒಂದೂವರೆ ಕಿಲೋಮೀಟರ್‌ನಷ್ಟು ರಸ್ತೆ ತೀರಾ ಹಾಳಾಗಿದೆ. ವಾಹನ ಸಂಚಾರಕ್ಕೆ ಅನಾನುಕೂಲವಾಗಿದೆ. ತುಂಬಾ ಗುಂಡಿ ಬಿದ್ದು ದೊಡ್ಡ ದೊಡ್ಡ ಹೊಂಡಗಳಾಗಿ ನೀರು ತುಂಬಿಕೊಂಡು ಸಂಚಾರಕ್ಕೆ ತೊಂದರೆಯಾಗಿದೆ.

ದಿನಂಪ್ರತಿ ಸಾವಿರಾರು ಮಂದಿ ಪ್ರಯಾಣಿಸುವ ಇಂತಹ ಕೆಟ್ಟ ರಸ್ತೆ ಬಗ್ಗೆ ಗಮನಹರಿಸದಿರುವುದು ಸೋಜಿಗವಾಗಿದೆ. ಈ ರಸ್ತೆಯು ನಿರ್ವಹಣೆ ಲೋಕೋಪಯೋಗಿ ಇಲಾಖೆಗೆ ಸೇರಿರುವುದಾಗಿ ತಿಳಿದಿದೆ. ಆದುದರಿಂದ ಈ ಜನೋಪಯೋಗಿ ರಸ್ತೆಯನ್ನು ತುರ್ತಾಗಿ ರಿಪೇರಿ ಮಾಡಬೇಕಾಗಿ ಮನವಿ.

–ನಂಜುಂಡ ಸ್ವಾಮಿ.ಕೆ.ಪಿ, ಕೆಂಚಲಗೂಡು.

### ದಸರಾ ಉಸ್ತುವಾರಿ ಪ್ರಾಮಾಣಿಕ, ಶುದ್ಧ ಹಸ್ತರಾಗಿರಲಿ

ಮಾನ್ಯರೆ,

ವಿಶ್ವ ವಿಖ್ಯಾತ ನಾಡ ಹಬ್ಬ ದಸರಾವನ್ನು, ಈ ವರ್ಷ ರಾಜ್ಯದಲ್ಲಿ ಸಮೃದ್ಧ ಮಳೆಯಾದ ಹಿನ್ನೆಲೆಯಲ್ಲಿ ಅದ್ದೂರಿಯಾಗಿ ಆಚರಿಸಲು ರಾಜ್ಯ ಸರ್ಕಾರ ಈಗಾಗಲೇ ತೀರ್ಮಾನಿಸಿ, ಈ ವರ್ಷ ಸುಮಾರು 40 ಕೋಟಿ ರೂಪಾಯಿ ವೆಚ್ಚ ಮಾಡುವುದಾಗಿ ಹೇಳಿದೆ. ಕಳೆದ ವರ್ಷ ರಾಜ್ಯದಲ್ಲಿ ಬರ ಇದ್ದಾಗಲೂ 40 ಕೋಟಿ ರೂಪಾಯಿಗೂ ಹೆಚ್ಚು ಹಣ ಖರ್ಚಾಗಿದೆ ಎಂದು ಹೇಳಲಾಗುತ್ತಿತ್ತು. ಆದರೆ ಕಳೆದ ವರ್ಷ ನಡೆದ ದಸರಾದಲ್ಲಿ ಕೆಲವು ಮಧ್ಯವರ್ತಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳು, ಅದರಲ್ಲೂ ಯುವ ದಸರಾ ಮತ್ತು ಯುವ ಸಂಭ್ರಮ ಕಾರ್ಯಕ್ರಮಗಳಲ್ಲಿ ಕಲಾವಿದರುಗಳಿಂದಲೇ ಕಮಿಷನ್ ಪಡೆದ ಆರೋಪವೂ ಕೇಳಿ ಬಂತು. ಕಳೆದ ವರ್ಷ ದಸರಾ ಮುಗಿದು 2 ತಿಂಗಳಾದರೂ ಕೆಲವು ಇಲಾಖೆಗಳು ಲೆಕ್ಕ– ಪತ್ರಗಳನ್ನೇ ಬಹಿರಂಗಪಡಿಸಲಿಲ್ಲ, ಇದರಲ್ಲಿ ರಾಮನ ಲೆಕ್ಕ ಎಷ್ಟು ಕೃಷ್ಣನ ಲೆಕ್ಕ ಎಷ್ಟು ಎಂದು ತಿಳಿಯಲಿಲ್ಲ. ಆದರೆ ಈ ಬಾರಿ ದಸರಾ ಹಾಗೆ ಆಗಬಾರದು. ದಸರಾ ಉಸ್ತುವಾರಿ ವಹಿಸುವವರು ಪ್ರಾಮಾಣಿಕವಾಗಿ ಶುದ್ಧ ಹಸ್ತದವರಾಗಿರ ಬೇಕು. ದಸರಾ ಹೆಸರಿನಲ್ಲಿ ಯಾರೇ ಆದರೂ ಹಣ ದುರುಪಯೋಗಪಡಿಸಿಕೊಂಡರೆ ಅಂತಹವರು ತಾಯಿ ಚಾಮುಂಡೇಶ್ವರಿಯ ಶಾಪಕ್ಕೆ ಗುರಿಯಾಗಬೇಕಾಗುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

### ಮೈಸೂರು ವಿವಿಯಲ್ಲಿ ವಿದೇಶಿ ಭಾಷೆಗಳ ಅಧ್ಯಯನಕ್ಕೆ ಅಧ್ಯಾಪಕರು ನೇಮಕವಾಗಲಿ

ಮಾನ್ಯರೆ,

ಶತಮಾನೋತ್ಸವ ಆಚರಿಸಿಕೊಂಡ ದೇಶ–ವಿದೇಶಗಳಲ್ಲೂ ಸಹ ಶಿಕ್ಷಣ ಕ್ಷೇತ್ರದಲ್ಲಿ ಮಾದರಿಯಾಗಿರುವ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂದು ಚೈನಿಸ್, ಫ್ರೆಂಚ್, ಜರ್ಮನ್, ಇಟಾಲಿಯನ್, ಜಪಾನೀಸ್, ಮತ್ತು ರಷಿಯನ್ ಹೀಗೆ ಇನ್ನಿತರ ವಿದೇಶಿ ಭಾಷೆಗಳ ಅಧ್ಯಯನ ಮಾಡಲು ವಿದ್ಯಾರ್ಥಿಗಳಿಗೆ ಅವಕಾಶವಿದೆ. ಆದರೆ ಕಳೆದ ವರ್ಷದಿಂದ ಚೈನೀಸ್ ಮತ್ತು ರಷ್ಯನ್ ಭಾಷೆಗಳ ಅಧ್ಯಯನಕ್ಕೆ ಹೊರತುಪಡಿಸಿ ಉಳಿದ ವಿದೇಶಿ ಭಾಷೆಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಾಪಕರಿಲ್ಲದೆ, ವಿದ್ಯಾರ್ಥಿಗಳಿಗೆ ಭಾಷೆ ಕಲಿಕೆಯ ಅವಕಾಶಗಳು ಕೈತಪ್ಪುತ್ತಿವೆ. ಇದರಲ್ಲಿ ನಾನು ಕೂಡ ಒಬ್ಬನಾಗಿ ಕಳೆದ ವರ್ಷದಿಂದಲೂ ಫ್ರೆಂಚ್ ಭಾಷೆಯನ್ನು ಕಲಿಯುವ ಆಸಕ್ತಿಯಿಂದ ಅನೇಕ ಬಾರಿ ಈ ಅಧ್ಯಯನ ವಿಭಾಗಕ್ಕೆ ದೂರವಾಣಿ ಕರೆ ಮಾಡಿ ವಿಷಯದ ಬಗ್ಗೆ ಮಾತನಾಡಿದಾಗ ಅಧ್ಯಾಪಕರಿಲ್ಲ ಎಂದು ಉತ್ತರಿಸುತ್ತಿದ್ದಾರೆ. ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ, ಬೆಂಗಳೂರು ಜಿಲ್ಲೆಯು ಸೇರಿ ರಾಜ್ಯ, ಅಂತರ ರಾಜ್ಯ ಮತ್ತು ವಿದೇಶಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆಯುತ್ತಿದ್ದು, ಶಿಕ್ಷಣ ಮುಗಿಸಿ ನಂತರ ವಿದೇಶದಲ್ಲಿ ಉದ್ಯೋಗ ಪಡೆಯುವ ಆಸಕ್ತಿ ಇರುವವರಿಗೆ ವಿದೇಶಿ ಭಾಷೆಗಳು ಹೆಚ್ಚು ಅವಶ್ಯಕತೆಯೊಂದಿಗೆ ಉಪಯುಕ್ತವಾಗಿರುವುದರಿಂದ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಕುಲಸಚಿವರು ಸಂಬಂಧಪಟ್ಟ ವಿದೇಶಿ ಭಾಷೆಗಳ ಅಧ್ಯಯನ ವಿಭಾಗದ ಅಧ್ಯಕ್ಷರೊಡನೆ ಚರ್ಚಿಸಿ ತಮ್ಮ ವಿಶ್ವವಿದ್ಯಾಲಯದಲ್ಲಿ ಇರುವ ವಿದೇಶಿ ಭಾಷೆಗಳ ಅಧ್ಯಯನ ಕಲಿಕೆಗೆ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಅಧ್ಯಾಪಕರನ್ನು ನೇಮಕ ಮಾಡಬೇಕೆಂದು ಮನವಿ. –ನಾಗೇಶ್, ಮಾನಸಗಂಗೋತ್ರಿ, ಮೈಸೂರು

## ನಾದ ಲಹರಿ



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

# ಸಂಗೀತ ಸ್ವರಗಳು ಸ್ವರ್ಗಮಯ!

ಸಂಗೀತವು ಮನುಷ್ಯನ ಹುಟ್ಟಿನೊಂದಿಗೇ ಒಂದಲ್ಲ ಒಂದು ರೀತಿಯಲ್ಲಿ ಸಂಗಾತಿಯಾಗಿದೆ. ಇರುವ ಏಳು ಸ್ವರಗಳು ಅದೆಷ್ಟು ಬಗೆಯಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಬಲ್ಲವು ಎಂಬುದನ್ನು ಕುರಿತು ಯೋಚಿಸಿದಾಗ ಬಲು ಅಚ್ಚರಿಯಾಗುತ್ತದೆ. ಅದೇ ಸರಿಗಮಪದನಿ. ಆದರೆ ಅದರಲ್ಲಿ ಅದೆಷ್ಟು ಸಂಶೋಧನೆಯನ್ನು ಮನುಷ್ಯ ನಡೆಸಿದ್ದಾನೆ ಎಂದರೆ, ಅದರಿಂದ ಉದ್ಭವಿಸಿದ ಅಸಂಖ್ಯಾತ ರಾಗಗಳು, ಕೊನೆಯಿಲ್ಲದ ರಚನಾ ಪ್ರಕಾರಗಳು, ತಾಳ, ಶ್ರುತಿ, ವಾದ್ಯ ಪ್ರಭೇದಗಳು? ಸಮಯ ಸಂದರ್ಭಕ್ಕೆ ತಕ್ಕಂತೆ ಸಂಗೀತವನ್ನು ಬಳಸಿಕೊಳ್ಳುವ ಜಾಣ್ಮೆ, ಇವೆಲ್ಲವನ್ನೂ ಮಾನವನ ಅನ್ವೇಷಕ ಬುದ್ಧಿ ಮಾಡುತ್ತಲೇ ಬಂದಿದೆ. ಅದರ ಪರಿಣಾಮವಾಗಿ ಸಂಗೀತವು ಕಲೆಯಾಗಿ, ವಿಜ್ಞಾನವಾಗಿ ಬೆಳೆದಿದೆ. ಸಂಗೀತದ ಪರಿಣಾಮದ ಬಗ್ಗೆಯೂ ವಿಪುಲವಾಗಿ ಸಂಶೋಧನೆ ನಡೆಯುತ್ತಿದೆ. ಭಾರತದಲ್ಲಿ ಸಂಗೀತದ ಮೌಲ್ಯ ಮತ್ತು ಪ್ರಾಮುಖ್ಯತೆಗಳ ಬಗ್ಗೆ ನಮ್ಮ ಪೂರ್ವಜರು ಬಹಳಷ್ಟು ಜ್ಞಾನವನ್ನು ಪಡೆದಿದ್ದರೆಂಬುದೂ ವಾಸ್ತವ.

ತಾನಸೇನನು ದೀಪಕ ರಾಗವನ್ನು ಹಾಡಿ ದೀಪಗಳನ್ನು ಹೊತ್ತಿಸಿದುದು, ಮೇಘಮಲ್ಹಾರ್ ರಾಗವನ್ನು ಹಾಡಿ ಮಳೆ ಬರಿಸಿದುದರ ಕತೆಯಂತೂ ಜನಜನಿತವಾಗಿದೆ. ಗುಂಡಾಕ್ರಿ(ಯ)ರಾಗವನ್ನು ಹಾಡಿ ಕಲ್ಲನ್ನು ಕರಗಿಸಿದುದು, ಘೋಷವತಿ ಎಂಬ ವೀಣೆಯನ್ನು ನುಡಿಸುತ್ತಾ ಉದಯನನು ಆನೆಗಳನ್ನು ಪಳಗಿಸುತ್ತಿದ್ದುದು, ಅಷ್ಟಾವಂಕನ ಹಾಡಿಗೆ ಮನಸು ತೆತ್ತ ಯಶೋಧರನ ರಾಣಿ ಅಮೃತಮತಿ, ಮುಂತಾದ ಸಂಗೀತಕ್ಕೆ ಸಂಬಂಧಿಸಿದ ರೋಚಕ ಪ್ರಸಂಗಗಳ ಉಲ್ಲೇಖವನ್ನು ಕನ್ನಡ ಕಾವ್ಯಗಳಲ್ಲಿ ಕಾಣಬಹುದು. ಅಂತಹುದೇ ಅನೇಕ ಪವಾಡಗಳನ್ನು ಸಂಗೀತದ ಇತಿಹಾಸದಲ್ಲಿ ದಾಖಲಾಗಿರುವುದನ್ನೂ ನಾವು ನೋಡಬಹುದು. ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರಾದ ಮುತ್ತುಸ್ವಾಮಿ ದೀಕ್ಷಿತರು ತಮ್ಮ ಶಿಷ್ಯನು ತಡೆಯಲಾಗದ ಉದರ ಬೇನೆಯಿಂದ ಒದ್ದಾಡುವುದನ್ನು ಕಂಡು, ನವಗ್ರಹ ಕೀರ್ತನೆಯನ್ನು ರಚಿಸಿ, ಅದನ್ನು ಅವನು ಹಾಡಿಕೊಂಡಂತೆಲ್ಲ ಅವನ ಬೇನೆ ಶಮನವಾದುದೂ ಅದರಲ್ಲಿ ಒಂದು. ಹಲವು ವರುಷಗಳಿಂದ ಮಳೆಯನ್ನೇ ಕಾಣದೆ ಬರದಿಂದ ಕಂಗೆಟ್ಟ ಹಳ್ಳಿಯೊಂದಕ್ಕೆ ಅವರು ಭೇಟಿ ನೀಡಿದಾಗ ಆ ಹಳ್ಳಿಗರ ಪ್ರಾರ್ಥನೆಯಂತೆ ಅಮೃತವರ್ಷಿಣಿ ರಾಗದಲ್ಲಿ ಕೀರ್ತನೆಯನ್ನು ರಚಿಸಿ, ಧಾರಾಕಾರವಾಗಿ ಮಳೆ ಸುರಿಯುವಂತೆ ಮಾಡಿ, ಮತ್ತೆ ಸಲಿಲಂ ಸ್ತಂಭಯ ಸ್ತಂಭಯ? ಎಂದು ಪ್ರಾರ್ಥಿಸಿದ ನಂತರವೇ ಮಳೆ ನಿಂತಿತೆಂಬ ದಾಖಲೆಯೂ ಇದೆ. ಹೀಗೆ ಸಂಗೀತದಲ್ಲಿ–ಸ್ವರಗಳಲ್ಲಿ ಅಡಗಿರುವ ಅದ್ಭುತ ಶಕ್ತಿಯನ್ನು ಅಂದಾಜಿಸಲು ನಮ್ಮಂತಹ ಪಾಮರರಿಂದ ಸಾಧ್ಯವೇ ಬಹುಶಃ ನಾದೋಪಾಸಕರಿಂದ ಮಾತ್ರ ಅದನ್ನು ಕಂಡುಕೊಳ್ಳಲು ಸಾಧ್ಯವಾದೀತು. ಸಂಗೀತವೂ ಉಪಾಸನೆಯ ಮಾರ್ಗವಾಯಿತು ನಮ್ಮ ಹಿರಿಯರಿಗೆ. ಯಾಜ್ಞವಲ್ಕ್ಯರು ವೀಣಾವಾದನ ತತ್ವಜ್ಞಃ ಶ್ರುತಿಜಾತಿ ವಿಶಾರದಃ ತಾಳಜ್ಞಶ್ಚಪ್ರಯಾಸೇನ ಮೋಕ್ಷಮಾರ್ಗಂ ಸಗಚ್ಛತಿ ಎಂದಿದ್ದಾರೆ. ನಮ್ಮ ಪೂರ್ವಜರು ಪ್ರತೀ ಸ್ವರಗಳಲ್ಲೂ ದೇವದೇವತೆಗಳನ್ನು ಕಂಡರು. ಸಂಗೀತ ಒಂದು ಪವಿತ್ರ ವಿದ್ಯೆಯಾಯಿತು. ಅದನ್ನು ವಶಪಡಿಸಿಕೊಳ್ಳಲು ಕಠಿಣ ಸಾಧನಾ ಮಾರ್ಗವನ್ನು ಅನುಸರಿಸಲು ಅವರು ಹಿಂಜರಿಯಲಿಲ್ಲ. ಇಡೀ ಬದುಕನ್ನೇ ಅದರ ಸೇವೆಗೆ ಮೀಸಲಿಟ್ಟವರು ಅದೆಷ್ಟೋ ಮಂದಿ. ಹಿಂದಿನ ಒಬ್ಬೊಬ್ಬ ಸಂಗೀತೋಪಾಸಕರ ಬದುಕನ್ನು ಅವಲೋಕಿಸಿದಾಗ ಒಬ್ಬೊಬ್ಬರೂ ಕ್ರಮಿಸಿದ ಕಠಿಣ ಹಾದಿಯು ಗೋಚರಿಸುತ್ತದೆ. ಗುರುವಿನಲ್ಲಿ ಅಚಲ ಶ್ರದ್ಧೆ, ನಂಬಿಕೆ, ಗುರುವಿಗೆ ಸಂಪೂರ್ಣ ಶರಣಾಗತಿ, ನಿರಂತರ ಸಾಧನೆ ಇವುಗಳೇ ಅವರ ಯಶಸ್ಸಿನ ಆಧಾರದ ಮೆಟ್ಟಿಲುಗಳಾಗಿರುವುದನ್ನು ಗಮನಿಸಬಹುದು.



> ಸಂಗೀತಕ್ಕೆ ಜಾತಿ, ಮತ, ಲಿಂಗಗಳ ಭೇದವಿಲ್ಲ. ನಾದದ ಮೋಡಿಗೆ ಒಳಗಾಗದವರೇ ಇಲ್ಲ ಎಂದರೂ ನಡೆದೀತು. ಭಗವಂತನೇ ಸಂಗೀತ ವಾದ್ಯಗಳನ್ನು ಕೈಯಲ್ಲಿ ಹಿಡಿದಿದ್ದಾನೆ ಅಂದಮೇಲೆ ಅದರ ಮಧುರತೆಯು ಸ್ಪಷ್ಟವಾದೀತು. ಇಡೀ ವಿಶ್ವವೇ ನಾದಮಯ ಅಲ್ಲವೇ?

ಸಂಗೀತಕ್ಕೆ ಜಾತಿ, ಮತ, ಲಿಂಗಗಳ ಭೇದವಿಲ್ಲ. ನಾದದ ಮೋಡಿಗೆ ಒಳಗಾಗದವರೇ ಇಲ್ಲ ಎಂದರೂ ನಡೆದೀತು. ಭಗವಂತನೇ ಸಂಗೀತ ವಾದ್ಯಗಳನ್ನು ಕೈಯಲ್ಲಿ ಹಿಡಿದಿದ್ದಾನೆ ಅಂದ ಮೇಲೆ ಅದರ ಮಧುರತೆಯು ಸ್ಪಷ್ಟವಾದೀತು. ಇಡೀ ವಿಶ್ವವೇ ನಾದಮಯ ಅಲ್ಲವೇ? ಹರಿಹರನ ಒಂದು ರಗಳೆ ಅನಾಯನಾರನ ರಗಳೆ. ಅದರಲ್ಲಿ ಅನಾಯನಾರನು ಕೊಳಲನ್ನು ನುಡಿಸುತ್ತಿರುವಾಗ ಆಗುತ್ತಿದ್ದ ಅದ್ಭುತ ಪರಿಣಾಮದ ಒಂದು ಸಶಕ್ತ, ಸುಂದರ ಸ್ತಬ್ಧ ಚಿತ್ರವನ್ನು ಹರಿಹರನು ಕಟ್ಟಿಕೊಡುತ್ತಾನೆ.

ಕೆಲವು ಜಿಂಕೆಗಳು ಬಾಯಲ್ಲಿನ ಎಳೆ ಗರಿಕೆಯನ್ನು ಅಗಿಯುವುದ ಮರೆತು ಅವನ ಮಡಿಲಲ್ಲಿ ತಲೆಯಿಟ್ಟು ಕೇಳಿದರೆ, ಮತ್ತೆ ಕೆಲವು ತಮ್ಮ ಹುಟ್ಟು ವೈರವನ್ನು ಮರೆತು ಅವನ ಕೊಳಲ ಇಂಪಿಗೆ ಮೈಮರೆತಿದ್ದುವಂತೆ. ಕೆಲವು ಅವನ ಹೆಗಲ ಮೇಲೆ ತಲೆ ಇಟ್ಟಿದ್ದವು. ಅವನ ಕೊಳಲ ನಾದದಿಂದ ಏಳುತ್ತಿದ್ದ ಪಂಚಾಕ್ಷರಗಳ ರೋಮಾಂಚನದ ಬಗ್ಗೆ ಅವನ ವರ್ಣನೆಯನ್ನು ಓದಿಯೇ ಆನಂದಿಸಬೇಕು. ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿಗಾನರಸಂ ಫಣಿಃ. ಪಶುಗಳೂ ಶಿಶುಗಳೂ ಸಹ ಗಾನರಸಕ್ಕೆ ಮನಸೋಲುತ್ತವೆ ಎಂದ ಮೇಲೆ ಮಾನವರೂ ಅದಕ್ಕೆ ಹೊರತಾಗಲು ಹೇಗೆ ಸಾಧ್ಯ?

ಸಂಗೀತಕ್ಕೆ ರೋಗಗಳನ್ನು ಗುಣಪಡಿಸಬಲ್ಲ ಶಕ್ತಿ ಇದೆ ಎಂಬುದರ ಬಗ್ಗೆ ಹಲವು ಕಡೆ ಸಂಶೋಧನೆಗಳು ನಡೆಯುತ್ತಲೇ ಇವೆ. ಅದಕ್ಕೆ ಪೂರಕವಾಗಿ ಒಂದೆರಡು ಘಟನೆಗಳನ್ನು ಉಲ್ಲೇಖಿಸಬಹುದು.

ವೀಣೆ ಶೇಷಣ್ಣ ಮತ್ತು ಸುಬ್ಬಣ್ಣನವರು ಬಂಧುಗಳೂ ಹೌದು, ಗುರುಮಿತ್ರರೂ ಹೌದು. ಇಬ್ಬರೂ ಕೂಡಿ ಅನೇಕ ರಾಜಸಂಸ್ಥಾನಗಳಲ್ಲಿ ದ್ವಂದ್ವ ವೀಣಾ ಕಛೇರಿಗಳನ್ನು ನೀಡಿದ್ದರು. ಆದರೂ ಒಮ್ಮೊಮ್ಮೆ ಚಾಡಿಕೋರರ ಮಾತಿಗೆ ಕಿವಿಗೊಟ್ಟು ಅವರ ನಡುವೆ ಮೌನ ಆವರಿಸುತ್ತಿತ್ತು. ಅದೇನು ದ್ವೇಷವಲ್ಲ. ಹಾಗೇ, ಹುಸಿಕೋಪ. ಅಂತಹ ಒಂದು ಸಂದರ್ಭ. ಸುಬ್ಬಣ್ಣನವರಿಗೆ ಹೊಸ ಚಪ್ಪಲಿ ಕಚ್ಚಿ ಸಣ್ಣ ಹುಣ್ಣಾಯಿತು. ಆದರೆ ಅದು ಕಡಿಮೆ ಆಗುವುದರ ಬದಲು ಹೆಚ್ಚಾಗುತ್ತಾ, ತೀವ್ರ ಬಾಧೆಯನ್ನು ಅನುಭವಿಸುವಂತಾಯಿತು. ಇನ್ನು ನಾನು ಬದುಕುವುದಿಲ್ಲ ಎಂದು ಅವರಿಗೆ ಅನಿಸಿತು. ಸಾಯುವ ಮುಂಚೆ ಶೇಷಣ್ಣನವರ ವೀಣೆಯನ್ನು ಕೇಳಿಯಾದರೂ ಸಾಯೋಣ ಎಂದು ಅವರಿಗೆ ಹೇಳಿ ಕಳುಹಿಸಿದರು. ಹಲವು ದಿನದಿಂದ ಸುಬ್ಬಣ್ಣನವರನ್ನು ಭೇಟಿಯಾಗದೇ ಚಡಪಡಿಸುತ್ತಿದ್ದ ಶೇಷಣ್ಣನವರು ಕೂಡಲೇ ತಮ್ಮ ವೀಣೆಯನ್ನು ಹೊರಿಸಿಕೊಂಡು ಸುಬ್ಬಣ್ಣನವರ ಮನೆಗೆ ಹೋದರು. ವೀಣೆ ನುಡಿಸಲು ಪ್ರಾರಂಭಿಸಿದರು. ಅದನ್ನು ಕೇಳುತ್ತಾ, ಎಷ್ಟೋ ದಿನಗಳಿಂದ ನಿದ್ದೆ ಇಲ್ಲದೆ ಒದ್ದಾಡಿದ್ದ ಸುಬ್ಬಣ್ಣನವರಿಗೆ ನಿದ್ದೆ ಹತ್ತಿತು. ಮೆಲ್ಲಗೆ ತಮ್ಮ ವೀಣೆಯನ್ನು ಕೆಳಗಿರಿಸಿದ ಶೇಷಣ್ಣನವರು, ಅವರಿಗೆ ಎಚ್ಚರವಾದ ಮೇಲೆ ನನಗೆ ತಿಳಿಸಿ ಎಂದು ಹೇಳಿ ಮನೆಗೆ ಹೋದರು. ಎಚ್ಚರಾದಾಗ, ಅಷ್ಟು ದಿನಗಳಿಂದ ನೋವು ಅನುಭವಿಸುತ್ತಿದ್ದ ಸುಬ್ಬಣ್ಣನವರ ಹುಣ್ಣು ಒಡೆದು, ರಕ್ತ ಕೀವುಗಳೆಲ್ಲ ಸೋರಿಹೋಗಿತ್ತು. ಕ್ರಮೇಣ ಅವರ ಆರೋಗ್ಯ ಸುಧಾರಿಸಿತು. ಶೇಷಣ್ಣನವರ ಮನೆಗೆ ಹೋಗಿ ಹಣ್ಣು ತಾಂಬೂಲಗಳನ್ನು ಸಮರ್ಪಿಸಿ ಧನ್ಯವಾದಗಳನ್ನು ಅರ್ಪಿಸಿದರು.

ಬಿಡಾರಂ ಕೃಷ್ಣಪ್ಪನವರ ಬದುಕಿನಲ್ಲೂ ಇಂತಹ ಘಟನೆ ನಡೆದಿದೆ. ಮದರಾಸಿನ ಅವರ ಸಂಗೀತದ ಪ್ರೇಮಿಯೊಬ್ಬರು ತಮ್ಮ ಕೊನೆಗಾಲ ಸಮೀಪಿಸಿತೆಂದು, ಅದಕ್ಕೆ ಮೊದಲು ಕೃಷ್ಣಪ್ಪನವರ ಸಂಗೀತ ಕೇಳಬೇಕೆಂದು ಬಯಸಿದಾಗ ಕೃಷ್ಣಪ್ಪನವರು ಮದರಾಸಿಗೆ ಧಾವಿಸಿ, ನಿತ್ಯವೂ ಅವರಿಗೆ ತಮ್ಮ ಸಂಗೀತವನ್ನು ಕೇಳಿಸಿದರಂತೆ. ಆತನ ಆರೋಗ್ಯ ಸುಧಾರಿಸಿ, ಅವರು ಕೃಷ್ಣಪ್ಪನವರಿಗೆ ತಮ್ಮ ರಾಮಮಂದಿರ ನಿರ್ಮಾಣಕ್ಕೆ ಏನು ಬೇಕಾದರೂ ತೆಗೆದುಕೊಳ್ಳಿ ಎಂದರಂತೆ. ಬಿಡಾರಂ ಅವರ ಶಿಷ್ಯರಾದ ಪಿಟೀಲು ಚೌಡಯ್ಯನವರು ತಮ್ಮ ಮನೆಯ ಅಂಗಳದಲ್ಲಿದ್ದ ಎರಡು ನಿಂಬೆ ಗಿಡದಲ್ಲಿ ಒಂದರ ಸಮೀಪ ನಿತ್ಯವೂ ಸಾಧನೆ ಮಾಡುತ್ತಿದ್ದರಂತೆ. ಇನ್ನೊಂದು ಗಿಡಕ್ಕಿಂತ ಈ ಗಿಡದಲ್ಲಿ ನಿಂಬೆಹಣ್ಣು ಹುಲುಸಾಗಿ ಫಲ ಕೊಡುತ್ತಿತ್ತಂತೆ.

ಹೀಗೆ ಸಂಗೀತದ, ಅದರ ಸಪ್ತಸ್ವರಗಳಲ್ಲಿ ಅಡಗಿದ ಶಕ್ತಿಯನ್ನು ಅಲ್ಲಗಳೆಯಲು ಸಾಧ್ಯವೇ?

# ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



## 34. ಡಾ.ಟಿ.ವಿ.ಆರ್ಮುಗಂ ಮೊದಲಿಯಾರ್



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಅಂದಿಗೆ ಕಾಲರಾ, ಪ್ಲೇಗ್ ಇತ್ಯಾದಿ ಅಂಟು ಜಾಡ್ಯಗಳು ಜಾಸ್ತಿಯಾಗಿ ಹೆಚ್ಚಿನ ಪ್ರಮಾಣದಲ್ಲಿ ಸಾವು–ನೋವುಗಳಾಗುತ್ತಿದ್ದರಿಂದ ವೈದ್ಯಕೀಯ ಚಿಕಿತ್ಸೆಗಾಗಿ ಸಮರ್ಥ ವೈದ್ಯರ ಅಗತ್ಯ ಹೆಚ್ಚಾಗಿತ್ತು. ಆದರೆ ಮೈಸೂರು ರಾಜ್ಯದಲ್ಲಿಯೇ ಸಾಕಷ್ಟು ಮಂದಿ ವೈದ್ಯರು ಸಿಗದೆ ಹೊರ ರಾಜ್ಯಗಳಿಂದಲೂ ವೈದ್ಯರ ಸೇವೆಯನ್ನು ಪಡೆದುಕೊಳ್ಳಬೇಕಾಗುತ್ತಿತ್ತು. ಆ ರೀತಿ ಸೇವೆ ಸಲ್ಲಿಸಿದವರ ಪೈಕಿ ಡಾ.ಟಿ.ವಿ.ಆರ್ಮುಗಂ ಮೊದಲಿಯಾರ್ ಒಬ್ಬರು. ಅಂದಿನ ಮದ್ರಾಸ್ ರಾಜ್ಯದಲ್ಲಿ ಜನಿಸಿ ಅಲ್ಲಿಯೇ ಓದಿದರೂ ಡಾ. ಆರ್ಮುಗಂ ಮೊದಲಿಯಾರ್ ಅವರು ತಮ್ಮ ಇಡೀ ಸೇವೆಯನ್ನು ಮೈಸೂರು ರಾಜ್ಯಕ್ಕೆ ಮೀಸಲಾಗಿಟ್ಟಿದ್ದರು. ಮೈಸೂರು ಮತ್ತು ಬೆಂಗಳೂರಿನಲ್ಲಿ ಸೇವೆ ಸಲ್ಲಿಸಿ ಖ್ಯಾತಿ ಪಡೆದಿದ್ದರು.

ಡಾ.ಆರ್ಮುಗಂ ಮೊದಲಿಯಾರ್ ಹುಟ್ಟಿದ್ದು ಮದ್ರಾಸಿನ ಸೇಲಂ ಜಿಲ್ಲೆಯ ಹೊಸೂರಿನಲ್ಲಿ. ಅವರದು ಪ್ರತಿಷ್ಠಿತ ಹಾಗೂ ಸ್ಥಿತಿವಂತ ಕುಟುಂಬ. ಅವರು ಜನಿಸಿದ್ದು 1861ರ ಏಪ್ರಿಲ್ 10ರಂದು. ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಮುಗಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದರು. ನಂತರ 1887ರಲ್ಲಿ ವೆಲ್ಲೂರಿನಲ್ಲಿ ಬಿ.ಎಂ.ಸಿ.ಎಂ. ಶಿಕ್ಷಣ ಮುಗಿಸಿ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಅರ್ಹತೆ ಗಳಿಸಿದರು. ಅದೇ ವರ್ಷದ ಸೆಪ್ಟಂಬರ್ ತಿಂಗಳಲ್ಲಿ ಮೈಸೂರಿನಲ್ಲಿ ಅಸಿಸ್ಟೆಂಟ್ ಸರ್ಜನ್ ಆಗಿ ಇವರು ನೇಮಕಗೊಂಡು ಸ್ವಲ್ಪ ಕಾಲ ಮೈಸೂರಿನಲ್ಲಿ ಸಿವಿಲ್ ಸರ್ಜನ್ ಮತ್ತು ಮೈಸೂರು ಕಾರಾಗೃಹದ ಸೂಪರಿಂಟೆಂಡೆಂಟ್ ಆಗಿದ್ದುದರ ಜೊತೆಗೆ ಮಹಾರಾಣಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದರು. ಪ್ರಾರಂಭದಲ್ಲಿ ಚೆಲುವಾಂಬ ಆಸ್ಪತ್ರೆ ಈಗಿನ ಮಹಾರಾಣಿ ಕಾಲೇಜಿನ ಹಾಸ್ಟೆಲ್ ಜಾಗದ ಒಂದು ಸಣ್ಣ ಕಟ್ಟಡದಲ್ಲಿ ಪ್ರಾರಂಭವಾಗಿತ್ತು. ಆಗ ಅದನ್ನು ಮಹಾರಾಣಿ ಆಸ್ಪತ್ರೆ ಎಂದು ಕರೆಯುತ್ತಿದ್ದರು. ಕೆಲ ವರ್ಷಗಳ ನಂತರ ಅದನ್ನು ಈಗಿನ ಜಾಗಕ್ಕೆ ಬದಲಾಯಿಸಲಾಯಿತು.

1891ರ ಅಂತ್ಯದ ವೇಳೆಗೆ ಪೂರ್ಣ ಪ್ರಮಾಣದ ಸಿವಿಲ್ ಸರ್ಜನ್ ಆದ ಮೊದಲಿಯಾರ್ 1893–94ರಲ್ಲಿ ಮೈಸೂರು ಕಾರಾಗೃಹದ ಸೂಪರಿಂಟೆಂಡೆಂಟ್ ಆಗಿ ಕಾರ್ಯನಿರ್ವಹಿಸಿದರು. ನಂತರ 1908ರಲ್ಲಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಮೊದಲ ಶ್ರೇಣಿಯ ಸೀನಿಯರ್ ಸರ್ಜನ್ ಆಗಿ ನೇಮಕವಾಗಿದ್ದುದರ ಜೊತೆಗೆ ಮೈಸೂರು ಸರ್ಕಾರದಲ್ಲಿ ಸ್ಯಾನಿಟರಿ ಕಮಿಷನರ್ ಕೂಡ ಆಗಿದ್ದರು. ನಂತರ ಅವರು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿ ನೇಮಕಗೊಂಡರು. ಅಲ್ಲಿ ಸೇವೆ ಸಲ್ಲಿಸಿದ ನಂತರ ನಿವೃತ್ತರಾಗಿ ಬೆಂಗಳೂರಿನಲ್ಲಿಯೇ ವಾಸ ಮಾಡಲಾರಂಭಿಸಿದರು.

ಅತ್ಯುತ್ತಮ ಶಸ್ತ್ರಚಿಕಿತ್ಸಕರೆಂದು ಪರಿಗಣಿಸಲಾಗಿದ್ದ ಡಾ.ಆರ್ಮುಗಂ ಮೊದಲಿಯಾರ್ ಅವರು ಸರ್ ಎಂ.ವಿಶ್ವೇಶ್ವರಯ್ಯನವರ ಸಮಕಾಲೀನರು. ಅವರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರಧಾನ ಸೂಪರಿಂಟೆಂಡೆಂಟ್ ಆಗಿದ್ದಾಗ ಅದರ ಕೀರ್ತಿ ಎಲ್ಲ ಕಡೆ ವ್ಯಾಪಿಸಿತ್ತು. ಇದಕ್ಕೆ ಕಾರಣ ಶಸ್ತ್ರಚಿಕಿತ್ಸೆ ಯಲ್ಲಿ ಅವರಿಗಿದ್ದ ಶ್ರೇಷ್ಠ ಪರಿಣಿತಿ. ಜೊತೆಗೆ ಚಿಕಿತ್ಸೆಗಾಗಿ ಬಂದ ರೋಗಿಗಳ ಬಗ್ಗೆ ಇವರು ತೋರುತ್ತಿದ್ದ ಅನುಕಂಪ ಹಾಗೂ ಮಾನವೀಯ ಸಹೃದಯತೆ. ಅವರ ಈ ಗುಣಗಳೇ ರೋಗಿಗೆ ಔಷಧಿಯಾಗಿತ್ತು.

ಆರ್ಮುಗಂ ಮೊದಲಿಯಾರ್ ಅವರು ಹಾಸ್ಯ ಪ್ರಜ್ಞೆಯವರು. ಅದಕ್ಕಿಂತ ಹೆಚ್ಚಿಗೆ ಬದುಕಿನಲ್ಲಿ ಧಾರ್ಮಿಕ ಮನೋಭಾವದವರಾಗಿದ್ದು ಭಗವದ್ಭಕ್ತರಾಗಿದ್ದರು. ಆದರೆ ಇದನ್ನು ಢಂಬಾಚಾರವನ್ನಾಗಿ ಮಾಡಿಕೊಂಡು ಹೊರಗೆ ತೋರುವ ಪ್ರಯತ್ನ ಮಾಡುತ್ತಿರಲಿಲ್ಲ. ಅವರು ಚಿಕ್ಕವರಿದ್ದಾಗ ಕಲಾಸಿಪಾಳ್ಯದಲ್ಲಿ ವಾಸವಾಗಿದ್ದರು. ಅಲ್ಲಿದ್ದ ಸಹಜಾನಂದ ಸ್ವಾಮಿಗಳ ಮಠದಲ್ಲಿ ಅವರಿಗೆ ತುಂಬಾ ಭಕ್ತಿ. ಸ್ವಾಮಿಗಳು ರಚಿಸಿದ ಕನ್ನಡ 'ವೇದಾಂತ ಪಂಚದಶಿ'ಯ ಪ್ರಕಟಣೆಗೆ ಮೊದಲಿಯಾರ್ ಅವರು ಉದಾರವಾಗಿ ನೆರವು ನೀಡಿದ್ದರು. ಆ ಗ್ರಂಥ ಉತ್ತಮ ಗುಣಮಟ್ಟದ ಕಾಗದ ಮತ್ತು ಅಂದವಾದ ಹೊರಕಟ್ಟಿನಿಂದ ಮೈಸೂರಿನ ವೆಸ್ಲಿ ಪ್ರೆಸ್ಸಿನಲ್ಲಿ ಮುದ್ರಿತವಾಗಿತ್ತು. ಇದಲ್ಲದೆ ಸ್ವಾಮಿ ಸಹಜಾನಂದ ಅವರು 'ವೃತ್ತಿ ಪ್ರಭಾಕರ' ಎಂಬ ಮೀಮಾಂಸ ಗ್ರಂಥವನ್ನೂ ಕನ್ನಡಕ್ಕೆ ತಂದಿದ್ದರು. ಸ್ವಾಮಿಗಳಾದರೋ ಹುಟ್ಟಿನಿಂದ ಬ್ರಾಹ್ಮಣೇತರರು. ಮೊದಲಿಯಾರರು ಇಂತಹ ಧಾರ್ಮಿಕ ಕಾರ್ಯಗಳಿಗೆ ಯಾರಿಗೂ ತಿಳಿಯದಂತೆ ಉದಾರ ಮನಸ್ಸಿನಿಂದ ಕೊಡುಗೆ ನೀಡುತ್ತಿದ್ದರು.

ಅದೇ ಉದಾರ ಮನೋಭಾವ ರೋಗಿಗಳ ವಿಚಾರದಲ್ಲೂ ತೋರುತ್ತಿದ್ದರು. ತಾವು ನೀಡಿದ ಚಿಕಿತ್ಸೆಗೆ ಇವರು ಯಾರಿಂದಲೂ ಹಣ ತೆಗೆದುಕೊಳ್ಳುತ್ತಿರಲಿಲ್ಲ. ಅಪೇಕ್ಷಿಸುತ್ತಲೂ ಇರಲಿಲ್ಲ. ಅವರು ಬಡವರೆಂದು ತಿಳಿದರೆ ತಾವೇ ಸಹಾಯ ಮಾಡುತ್ತಿದ್ದರು. ಒಮ್ಮೆ ಅವರು ಶಿವಮೊಗ್ಗಾದಲ್ಲಿದ್ದಾಗ ಮಧ್ಯರಾತ್ರಿಯಲ್ಲಿ ಒಬ್ಬ ಮುಸಲ್ಮಾನರವ ಅವರ ಮನೆಯ ಮುಂದೆ ಆರ್ತ ಸ್ವರದಿಂದ ಕೂಗುತ್ತಿದ್ದನಂತೆ. ಡಾಕ್ಟರ್ ಆಳುಗಳು ಅವನನ್ನು ಓಡಿಸುವ ಪ್ರಯತ್ನ ಮಾಡುತ್ತಿದ್ದಾಗ ಅವನ ಅರಚಾಟ ಜಾಸ್ತಿಯಾಗಿ, ಅದನ್ನು ಕೇಳಿಸಿಕೊಂಡ ಮೊದಲಿಯಾರರು ಹೊರಗೆ ಬಂದರಂತೆ. ಆ ವ್ಯಕ್ತಿಯ ಬಗ್ಗೆ ವಿಚಾರಿಸಿ, ತಿಳಿದು ಒಂದು ಕೈಯ್ಯಲ್ಲಿ ಲಾಂದ್ರವನ್ನೂ, ಇನ್ನೊಂದು ಕೈಯಲ್ಲಿ ಔಷಧದ ಚೀಲವನ್ನೂ ಹಿಡಿದು ಅವನ ಹಿಂದೆ ಹೋದರಂತೆ. ರೋಗಿಗೆ ಚಿಕಿತ್ಸೆ ನೀಡಿ ಬರುವಾಗ ಅವನಿಗೆ ಹತ್ತು ರುಪಾಯಿ ಕೊಟ್ಟು ಹಿಂತಿರುಗಿದರಂತೆ. ಅವರದು ವಿಶೇಷ ಅಂತಃಕರಣ. ಇಂತಹ ಸಂದರ್ಭಗಳು ಎಷ್ಟೋ ಎನ್ನುತ್ತಾರೆ ಪೂಜ್ಯ ಡಿ.ವಿ.ಗುಂಡಪ್ಪನವರು ಆರ್ಮುಗಂ ಮೊದಲಿಯಾರರ ಬಗ್ಗೆ ತಮ್ಮ 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಬರೆಯುತ್ತಾ.

ಡಾ.ಮೊದಲಿಯಾರ್ ಅವರ ವೈದ್ಯಶಾಸ್ತ್ರ ಪ್ರಾವೀಣ್ಯತೆಯ ಬಗ್ಗೆ ಡಿ.ವಿ.ಜಿ. ಅವರು ಒಂದು ಸ್ವಾರಸ್ಯ ಘಟನೆಯನ್ನು ಪ್ರಸ್ತಾಪಿಸುತ್ತಾರೆ. 'ಶ್ರೀಮನ್ಮಹಾರಾಜರಿಗೆ ಒಂದು ಸಾರಿ ಹೊಟ್ಟೆನೋವು ಬರುತ್ತಿತ್ತು. ಆಗ ಡಾ.ರಾಬಿನ್‌ಸನ್ ಎಂಬಾತ ಪ್ರಸಿದ್ಧನಾಗಿದ್ದ: ಮೈಸೂರಿನಲ್ಲಿ ಕೃಷ್ಣರಾಜೇಂದ್ರ ಆಸ್ಪತ್ರೆಯ ಮುಖ್ಯ ಅಧಿಕಾರಿಯಾಗಿಯೂ ಮೆಡಿಕಲ್ ಕಾಲೇಜಿನ ಮುಖ್ಯಾಧ್ಯಾಪಕನಾಗಿಯೂ ಇದ್ದ. ಆತ ಅಮೆರಿಕದವನೆಂದು ತೋರುತ್ತದೆ. ಮಹಾರಾಜರ ದೇಹಸ್ಥಿತಿಯನ್ನು ಪರೀಕ್ಷೆ ಮಾಡಿ ಆತ ಒಂದು ಶಸ್ತ್ರಚಿಕಿತ್ಸೆ ಪಡೆಯುವುದು ತುರ್ತು ಅವಶ್ಯ ಎಂದು ಅಭಿಪ್ರಾಯ ಕೊಟ್ಟ. ಇದಕ್ಕೆ ಒಪ್ಪುವುದಕ್ಕಿಂತ ಮುಂಚೆ ಬೇರೆ ಏನಾದರೂ ಉಪಾಯವಿದ್ದೀತೇನೋ ಎಂದು ನೋಡಬೇಕೆಂದು ಅರಮನೆಯಲ್ಲಿ ಕೆಲವರಿಗೆ ಅನ್ನಿಸಿತು. ಈ ಜನರ ಯೋಚನೆಯಂತೆ ಹಳೆಯ ವೈದ್ಯ ಆರ್ಮುಗಂ ಮೊದಲಿಯಾರರಿಗೆ ಕರೆ ಹೋಯಿತು.

ಮೊದಲಿಯಾರರು ಅರಮನೆಗೆ ಬಂದರು. ತಮ್ಮ ಕೈಯಿಂದ ಮಹಾರಾಜರ ಹೊಟ್ಟೆಯ ಮೇಲೆ ಸವರುತ್ತ, ಬಳಿ ಇದ್ದವರನ್ನು ಕುರಿತು ಕೊಂಚ ಹರಳೆಣ್ಣೆ ತರಿಸುವಂತೆ ಹೇಳಿದರು. ಎಣ್ಣೆ ಬಂದ ಮೇಲೆ ಅದನ್ನು ತಾವೇ ಕೈಯಿಂದ ಎತ್ತಿ ಮಹಾರಾಜರಿಗೆ ಕುಡಿಸಿದರು. ಆಮೇಲೆ ಮಹಾರಾಜರನ್ನು ಕುರಿತು 'ನಾನು ಇಲ್ಲಿಯೇ ಪಕ್ಕದ ಕೋಣೆಯಲ್ಲಿ ಇರುತ್ತೇನೆ. ಕೊಂಚ ಹೊತ್ತು ನೋಡೋಣ' ಎಂದು ನಗುತ್ತ ಪಕ್ಕದ ಕೋಣೆಗೆ ಬಂದು ಅರ್ಧ ಮುಕ್ಕಾಲು ಘಂಟೆಯ ಹೊತ್ತು ಅರಮನೆಯ ಅಧಿಕಾರಿಗಳೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು. ಪ್ರಭುಗಳವರ ಸವಾರಿ ಒಂದೆರಡು ಬಾರಿ ಬಚ್ಚಲು ಮನೆಗೆ ಚಿತ್ತೈಸಿತ್ತು. ಹೊಟ್ಟೆನೋವು ಇಳಿದುಹೋಗಿತ್ತು. ಮೊದಲಿಯಾರರು ಹೇಳಿದರು: 'ಇದಕ್ಕೆಲ್ಲ ಚಾಕು ಹಾಕುತ್ತಾರೆಯೇ ಎಲ್ಲದರೂ! ಏನಿರುತ್ತದೆ ನಮ್ಮ ಹೊಟ್ಟೆಯಲ್ಲಿ? ಹಂದಿಯೇ, ಕಾಡೆಮ್ಮೆಯೇ? ಅಮೆರಿಕದವರು ಏನು ಬೇಕಾದರೂ ಮಾಡಿಕೊಳ್ಳಲಿ.' ಇದು ಡಾ.ಆರ್ಮುಗಂ ಮೊದಲಿಯಾರರ ಚಿಕಿತ್ಸಾ ವಿಧಾನ ಎನ್ನುತ್ತಾರೆ ಡಿ.ವಿ.ಜಿ.

ಮೊದಲಿಯಾರರದು ದೊಡ್ಡ ಸಂಸಾರ. ಚಿಕ್ಕವರಿಗೆಲ್ಲಾ ವಿದ್ಯಾಭ್ಯಾಸ ಮಾಡಿಸಿದರು. ಅವರಲ್ಲಿ ಒಬ್ಬರು ಹೈಕೋರ್ಟ್ ನ್ಯಾಯಾಧೀಶರಾಗಿಯೂ ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಾಗಿಯೂ ಇದ್ದ ಟಿ.ಸಿಂಗಾರವೇಲು ಮೊದಲಿಯಾರರು.

ಡಾ.ಆರ್ಮುಗಂ ಮೊದಲಿಯಾರರ ವ್ಯಕ್ತಿತ್ವ ಹಾಗೂ ಕೆಲವು ಪ್ರಸಂಗಗಳನ್ನು ಡಿ.ವಿ.ಜಿ. ಅವರು ತಮ್ಮ 'ಜ್ಞಾಪಕ ಚಿತ್ರಶಾಲೆ–7'ರಲ್ಲಿ ಸ್ವಾರಸ್ಯವಾಗಿ ವರ್ಣಿಸಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

## ಪ್ಯಾರಾಲಿಂಪಿಕ್ಸ್ 2024: ಭಾರತಕ್ಕೆ ಐದನೇ ಪದಕ

# 10 ಮೀ. ಏರ್ ರೈಫಲ್‌ನಲ್ಲಿ ಕಂಚು ಗೆದ್ದ ರುಬಿನಾ ಫ್ರಾನ್ಸಿಸ್



**ಪ್ಯಾರಿಸ್:** ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನ ಮೂರನೇ ದಿನ ಭಾರತಕ್ಕೆ ಐದನೇ ದಿನ ಲಭಿಸಿದೆ. ಕ್ರೀಡಾಕೂಟದ ಎರಡನೇ ದಿನ 1 ಚಿನ್ನ ಸೇರಿದಂತೆ 4 ಪದಕ ಗೆದ್ದಿದ್ದ ಭಾರತಕ್ಕೆ ಮೂರನೇ ದಿನ ಒಂದು ಕಂಚಿನ ಪದಕ ಸಿಕ್ಕಿದೆ. ಮಹಿಳೆಯರ 10 ಮೀಟರ್ ಏರ್ ರೈಫಲ್ ಎಸ್‌ಹೆಚ್ 1 ಫೈನಲ್‌ನಲ್ಲಿ ಭಾರತದ ರುಬಿನಾ ಫ್ರಾನ್ಸಿಸ್ 211.1 ಅಂಕ ಸಂಪಾದಿಸಿ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಎಂಟು ಮಹಿಳೆಯರ ನಡುವೆ ನಡೆದ ಈ ಫೈನಲ್ ಸುತ್ತಿನಲ್ಲಿ ರುಬಿನಾ ಬೆಳ್ಳಿ ಪದಕದ ರೇಸ್‌ನಲ್ಲಿದ್ದರು. ಆದರೆ ಕೊನೆಯ ಎರಡು ಶಾಟ್‌ಗಳಲ್ಲಿ ಲಯ ಕಳೆದುಕೊಂಡ ಅವರು ಒಟ್ಟು 211.1 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಮೊನ್ನೆ ನಡೆದ ಅರ್ಹತಾ ಸುತ್ತಿನಲ್ಲಿ ಏಳನೇ ಸ್ಥಾನ ಪಡೆದು ಫೈನಲ್‌ಗೆ ಅರ್ಹತೆ ಪಡೆದಿದ್ದರು.

**ಶೂಟಿಂಗ್‌ನಲ್ಲಿ 4ನೇ ಪದಕ:** ರುಬಿನಾ ಫ್ರಾನ್ಸಿಸ್ ಗೆದ್ದ ಕಂಚಿನ ಪದಕ, ಶೂಟಿಂಗ್‌ನಲ್ಲಿ ಭಾರತಕ್ಕೆ ಸಿಕ್ಕ ನಾಲ್ಕನೇ ಪದಕ ಮತ್ತು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಒಟ್ಟಾರೆ ಐದನೇ ಪದಕವಾಗಿದೆ. ಇದಕ್ಕೂ ಮೊದಲು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನ ಎರಡನೇ ದಿನ, ಅವನಿ ಲೆಖರಾ ಮಹಿಳೆಯರ 10 ಮೀಟರ್ ಏರ್ ರೈಫಲ್ (SH1) ಈವೆಂಟ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಇತಿಹಾಸವನ್ನು ಸೃಷ್ಟಿಸಿದ್ದರೆ, ಇದೇ ಈವೆಂಟ್‌ನಲ್ಲಿ ಮತ್ತೊರ್ವ ಭಾರತೀಯ ಸ್ಪರ್ಧಿ ಮೋನಾ ಅಗರ್ವಾಲ್ ಕಂಚಿನ ಪದಕ ಗೆದ್ದಿದ್ದರು. ಆ ನಂತರ, ಪುರುಷರ 10 ಮೀಟರ್ ಏರ್ ಪಿಸ್ತೂಲ್ (SH1) ನಲ್ಲಿ ಮನೀಶ್ ನರ್ವಾಲ್ ಬೆಳ್ಳಿ ಪದಕ ಗೆದ್ದಿದ್ದರು. ಉಳಿದಂತೆ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಭಾರತದ ಪ್ರೀತಿ ಪಾಲ್ ಕಂಚಿನ ಪದಕ ಗೆದ್ದುಕೊಟ್ಟಿದ್ದರು.

ಒಂದನೇ ಪುಟದಿಂದ

## ಡಿಜಿಟಲ್ ಪೋಡಿ ದುರಸ್ತಿ ಅಭಿಯಾನ

ಮುಂದಾಗಬೇಕು. ರೈತರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಬೇಕು ಎಂದು ಸೂಚಿಸಿದ್ದಾರೆ. ಜಮೀನು ಮಂಜೂರಾಗಿದ್ದರೂ ಪೋಡಿಯಾಗಿ ಆರ್‌ಟಿಸಿ ಆಗದೆ ಇರುವುದರಿಂದ, ಅಂತಹ ರೈತರ ಪರಿಸ್ಥಿತಿ ತ್ರಿಶಂಕುವಿನಂತೆ ಆಗಿದೆ. ತಾಲೂಕು ಕಚೇರಿ, ಸರ್ವೆ ಕಚೇರಿಗಳಿಗೆ ಅಲೆದು ಅಲೆದು ಪ್ರಯೋಜನವಾಗದೆ ತೀವ್ರ ತೊಂದರೆಗೆ ತುತ್ತಾಗಿದ್ದಾರೆ. ಈ ಬಗ್ಗೆ ಬಹಳ ವರ್ಷಗಳಿಂದ ಚರ್ಚೆಗಳು, ಪ್ರಯತ್ನಗಳು ಆಗುತ್ತಿದ್ದರೂ ಸರಿಯಾದ ಪರಿಹಾರ ದೊರೆತಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಸಮಸ್ಯೆಯನ್ನು ಪರಿಹರಿಸಲು, ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲು ಸೂಚಿಸಿದ ಹಿನ್ನೆಲೆಯಲ್ಲಿ, ಕಂದಾಯ ಇಲಾಖೆ ದುರಸ್ತಿಗೆ ಬಾಕಿಯಿರುವ ಪ್ರಕರಣಗಳ ವಿಲೇಗೆ ವ್ಯವಸ್ಥಿತವಾದ ಯೋಜನೆ ಆರಂಭಿಸಿದೆ ಎಂದು ಮಾಹಿತಿ ನೀಡಿದ್ದಾರೆ. ಈ ಹಿಂದೆ ಪೋಡಿ ದುರಸ್ತಿ ಮಾಡಲು ಅವಶ್ಯವಿರುವ 1–5 ನಮೂನೆ ಗಳನ್ನು ತಯಾರಿಸಲು ಕಾಗದದ ಕಡತಗಳನ್ನು ತಯಾರಿಸಲು ಪ್ರಯತ್ನಿಸಲಾಗಿತ್ತು. ಆದರೆ, ಆ ಕೆಲಸವೂ ಸಮರ್ಪಕವಾಗಿಲ್ಲ. ಆದ ಕೆಲವು ಕಡತ ಗಳು ಕಾಣೆಯಾಗಿವೆ ಅಥವಾ ಕೈಗೆ ಸಿಗುವುದಿಲ್ಲ. ಇದರಿಂದ ಕಡತಗಳು ಇದ್ದರೂ ಅನೇಕರಿಗೆ ಅದರ ಪ್ರಯೋಜನ ಸಿಗುತ್ತಿಲ್ಲ. ಈ ಸಮಸ್ಯೆಗಳಿಂದ ಕಂದಾಯ ಇಲಾಖೆ ಪೋಡಿ ದುರಸ್ತಿ 1–5 ಕಡತಗಳನ್ನು ಕಂಪ್ಯೂ ಟರ್‌ಗಳನ್ನು ಬಳಸಿ ಗಣಕೀಕರಿಸಿದ (ಡಿಜಿಟಲ್) 1–5 ಕಡತಗಳನ್ನು ತಯಾರಿಸಲು ಆರಂಭಿಸಿದೆ.

ಡಿಜಿಟಲ್ ಆ್ಯಪ್ ಮುಖಾಂತರ ಮಾಡುವುದ ರಿಂದ ಸರಳ, ವೇಗವಾಗಿ ಕಡತಗಳನ್ನು ತಯಾರಿಸಬಹುದು. ಯಾರ ಬಳಿ ವಿಳಂಬವಾಗಿದೆ ಎಂಬುದು ಪಾರದರ್ಶಕವಿರುವುದರಿಂದ, ವೇಗವಾಗಿ ಕೆಲಸ ವಾಗಬಹುದು. ಮೂಲ ಮಂಜೂರಿ ದಾಖಲೆಗಳನ್ನು ಸುರಕ್ಷಿತವಾಗಿಡಬಹುದು. ಮುಂದೆ ತಿದ್ದಲು, ನಕಲು ಮಾಡಲು ಸಾಧ್ಯವಿಲ್ಲ. ಒಬ್ಬ ರೈತನಿಗೆ ತಯಾರು ಮಾಡಿದ 1–5 (ನಮೂನೆ) ಕಡತ, ಆ ಸರ್ವೆ ನಂಬರಿನ ಎಲ್ಲಾ ರೈತರಿಗೂ ಅದೇ ಕಡತ ಅನುಕೂಲವಾಗುತ್ತದೆ. 1–5(ನಮೂನೆ)ಕಡತ ಕಾಣೆಯಾಗಲು ಅಥವಾ ಕಳೆದು ಹೋಗಲು ಸಾಧ್ಯವಿಲ್ಲ ಎಂದು ಸಚಿವರು ತಿಳಿಸಿದ್ದಾರೆ.

ಈ ಅಭಿಯಾನವನ್ನು ಸೆ.2ರಿಂದ ರಾಜ್ಯಾದ್ಯಂತ ಆರಂಭಿಸುತ್ತಿದ್ದೇವೆ. ರಾಜ್ಯದಲ್ಲಿ ಎಲ್ಲೆಲ್ಲಿ ರೈತರಿಗೆ ಮಂಜೂರಾಗಿರುವ ಜಮೀನುಗಳ ದುರಸ್ಥಿಯಾಗದೆ ಬಾಕಿ ಉಳಿದಿದೆಯೋ ಅಂತಹ ಪ್ರತಿಯೊಂದು ಕಡೆಯಲ್ಲೂ ಡಿಜಿಟಲಾಗಿ 1–5(ನಮೂನೆ)ಕಡತ ಸೆ.2ರಿಂದ ತಯಾರಿ ಮಾಡಲಾಗುವುದು. 1–5(ನಮೂನೆ) ಕಡತ ಎಲ್ಲಾ ಸರ್ಕಾರಿ ಜಮೀನಿಗೆ (ರೈತರಿಗೆ ಮಂಜೂರಾಗಿರುವ), ರೈತರ ಅರ್ಜಿಗೆ ಕಾಯದೆ ಕಂದಾಯ ಇಲಾಖೆ ಸ್ವಯಂ ಕಡತಗಳನ್ನು ತಯಾರಿಸಲಿದೆ. 1–5ನಮೂನೆ ಪ್ರಕಾರ ತಯಾರಾದ ಕಡತಗಳನ್ನು ಮುಂದೆ 6–10 ಮಾಡಿ ಅವರಿಗೆ ಸರ್ವೆಯೊಂದಿಗೆ ದುರಸ್ತಿ ಮಾಡಿದ ನಂತರ ಹೊಸ ಸರ್ವೆ ನಂಬರ್ ಪಹಣಿಯೊಂದಿಗೆ ಸಂಪೂರ್ಣ ದಾಖಲೆ ಮಾಡಿಕೊಡಲಾಗುವುದು. ಇದೊಂದು ದೀರ್ಘಕಾಲದ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಿ ರೈತರಿಗೆ ನೆಮ್ಮದಿಯನ್ನು ನೀಡುವ ಅಭಿಯಾನ ವಾಗಲಿದೆ. ಹೀಗಾಗಿ ಎಲ್ಲಾ ಅಧಿಕಾರಿಗಳೂ ಈ ಯೋಜನೆ ಯಶಸ್ವಿಯಾಗಲು ಸಹಕರಿಸಬೇಕಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಮನವಿ ಮಾಡಿದರು.

### ಹಾಸನದಲ್ಲಿ ಪೈಲಟ್ ಯೋಜನೆ ಯಶಸ್ವಿ

ಡಿಜಿಟಲಾಗಿ 1–5(ನಮೂನೆ) ಪೋಡಿ ದುರಸ್ತಿ ಕಾರ್ಯವನ್ನು ಹಾಸನದಲ್ಲಿ ಪ್ರಾಯೋಗಿಕವಾಗಿ ನಡೆಸಲಾಗಿದೆ. ಈ ಪ್ರಾಯೋಗಿಕ ಯೋಜನೆ ಯಶಸ್ವಿಯಾಗಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಇದೀಗ ರಾಜ್ಯಾದ್ಯಂತ ವಿಸ್ತರಿಸಲಾಗುತ್ತಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಪೋಡಿ ದುರಸ್ತಿಗೊಳಿಸಿ ರೈತರಿಗೆ ನೆಮ್ಮದಿ ನೀಡಬೇಕು ಎಂಬ ಉದ್ದೇಶದಿಂದ 8 ತಿಂಗಳ ಹಿಂದೆಯೇ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಹಾಗೂ ಕಂದಾಯ ಆಯುಕ್ತ ಸುನೀಲ್‌ಕುಮಾರ್ ಸೇರಿ ಹಿರಿಯ ಅಧಿಕಾರಿಗಳ ಜೊತೆ ನಿರಂತರವಾಗಿ ಚರ್ಚಿಸಲಾಯಿತು. ಚರ್ಚೆಯ ಫಲವಾಗಿ ಇದೀಗ ಡಿಜಿಟಲ್ ಆ್ಯಪ್ ಸಿದ್ಧಗೊಂಡಿದೆ. ಇದರ ಸಹಾಯದಿಂದ 1–5(ನಮೂನೆ) ಪೋಡಿ ದುರಸ್ತಿ ಕಾರ್ಯವನ್ನು ಸುಲಭವಾಗಿ ನಿಭಾಯಿಸಬಹುದು ಎಂದರು.

ಆಪ್‌ಗೆ ಹಾಸನದಲ್ಲಿ ಪ್ರಾಯೋಗಿಕವಾಗಿ ಚಾಲನೆ ನೀಡಿ ಕಳೆದ ಕೆಲ ತಿಂಗಳಿನಿಂದ ಪೋಡಿ ದುರಸ್ತಿ ಕೆಲಸವನ್ನು ಯಶಸ್ವಿಯಾಗಿ ಮುನ್ನಡೆಸಲಾಗುತ್ತಿದೆ. ಇದರ ಸಹಾಯದಿಂದ ಪೋಡಿ ದುರಸ್ಥಿ ಕೆಲಸ ನೂರಕ್ಕೆ ನೂರರಷ್ಟು ಸಾಧ್ಯ ಎಂಬುದನ್ನು ಹಾಸನದಲ್ಲಿ ಸಾಧಿಸಿ ತೋರಿಸಲಾಗಿದೆ. ಹೀಗಾಗಿ ಅಧಿಕಾರಿಗಳು ಪೋಡಿ ದುರಸ್ತಿ ಬಗ್ಗೆ ಇನ್ನೂ ಕಥೆ ಹೇಳುವ ಅಗತ್ಯವಿಲ್ಲ. ಇಲಾಖೆಯ ಬಳಿ ಪ್ರತಿ ತಾಲೂಕಿನ ಡಾಟಾ ಇದ್ದು, ದುರಸ್ಥಿ ಕೆಲಸ ಎಲ್ಲಾ ತಾಲೂಕುಗಳಲ್ಲೂ ಅಭಿಯಾನ ಮಾದರಿಯಲ್ಲಿ ಆರಂಭವಾಗಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

## ನೀಟ್, ಸಿಇಟಿ ಪ್ರವೇಶ ಪ್ರಕ್ರಿಯೆ ಆರಂಭ

ಮಾಡಿಕೊಂಡ ಕಾಲೇಜುಗಳಿಗೆ ಸೆ. 5ರ ಸಂಜೆ 5:30ಕ್ಕೆ ಮುಂಚೆ ಪ್ರವೇಶ ಪಡೆಯಬೇಕು ಎಂದು ಮಾಹಿತಿ ನೀಡಿದ್ದಾರೆ. ಕಾಲಮಿತಿಯ ಒಳಗೆ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಲು ಶನಿವಾರ, ಭಾನುವಾರ ಹಾಗೂ ಗೆಜೆಟ್ ಪ್ರಕಟಿತ ರಜಾ ದಿನಗಳನ್ನೂ ಕೆಲಸದ ದಿನಗಳೆಂದು ಪರಿಗಣಿಸಲಾಗುವುದು. ಎಂಜಿನಿಯರಿಂಗ್ ಪ್ರವೇಶ ಪಡೆಯುವ ಅಭ್ಯರ್ಥಿಗಳು ಮೂಲ ದಾಖಲೆಗಳ ಸಮೇತ ಕಾಲೇಜುಗಳಿಗೆ ಹೋಗಿ ವರದಿ ಮಾಡಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

## ಪವಿತ್ರಾಗೌಡ ಜಾಮೀನು ಅರ್ಜಿ ವಜಾ

ಬಳಿಕವೂ ಜಾಮೀನು ನೀಡಿಲ್ಲ. ಆದರೆ ಈ ಪ್ರಕರಣದಲ್ಲಿ ಇನ್ನೂ ದೋಷಾರೋಪ ಪಟ್ಟಿ ಸಲ್ಲಿಕೆ ಮಾಡಿಲ್ಲ. ಆದ್ದರಿಂದ ಮಹಿಳೆ ಎಂಬ ಕಾರಣಕ್ಕೆ ಪವಿತ್ರಾಗೌಡಗೆ ಜಾಮೀನು ನೀಡಬಾರದು. ಏಕೆಂದರೆ 'ಕೋಲ್ಡ್ ಬ್ಲಡೆಡ್ ಮರ್ಡರ್' ಕೇಸ್‌ನಲ್ಲಿ ಪವಿತ್ರಾಗೌಡ ಭಾಗಿಯಾಗಿದ್ದಾರೆ ಎಂದು ವಾದಿಸಿದರು. ಈ ಬಗ್ಗೆ ಇತರೆ ಆರೋಪಿಗಳು ಪವಿತ್ರಾಗೌಡ ಕೊಲೆಯಲ್ಲಿ ಭಾಗಿಯಾಗಿರುವ ಬಗ್ಗೆ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಯ ಮಾಹಿತಿಯನ್ನು ಕೋರ್ಟ್‌ಗೆ ಕೊಟ್ಟಿದ್ದೇವೆ. ಕೊಲೆ ಮಾಡುವ ಉದ್ದೇಶದಿಂದ ರೇಣುಕಾಸ್ವಾಮಿಯನ್ನ ಅಪಹರಣ ಮಾಡಲಾಗಿದೆ. ನಂತರ ಆರೋಪಿಗಳು ತೀವ್ರ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ. ಆರೋಪಿ ಕೇಶವಮೂರ್ತಿ ಕೂಡ ಕೇವಲ ಸಾಕ್ಷಿ ನಾಶ ಮಾಡಿಲ್ಲ, ಈ ಪ್ರಕರಣದಲ್ಲಿ ಆತನದ್ದು ಬಹುಮುಖ್ಯವಾದ ಪಾತ್ರ ಇದೆ. ತನಿಖೆ ಸಹ ಇನ್ನು ಮುಕ್ತಾಯ ಆಗಿಲ್ಲ. ಹೀಗಾಗಿ ಯಾವ ಆರೋಪಿಗಳಿಗೂ ಜಾಮೀನು ನೀಡಬಾರದು ಎಂದು ವಾದ ಮಂಡಿಸಿದರು.

**ಪವಿತ್ರಾಗೌಡ ಪರ ವಕೀಲರ ವಾದ ಏನು:** ಪವಿತ್ರಾಗೌಡ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ ಅನ್ನೋದು ಕಪೋಲಕಲ್ಪಿತ, ದರ್ಶನ್, ಪವಿತ್ರಾಗೌಡ ಮನೆಗೆ ಹೋಗಿ ಕರೆದೊಯ್ದಿದ್ರು ಅಷ್ಟೇ. ಹೀಗಿರುವಾಗ ಇದರಲ್ಲಿ ಪವಿತ್ರಾಗೌಡ ಅವರ ಸಂಚು ಏನಿದೆ. ಎದೆಗೆ ಪೆಟ್ಟುಬಿದ್ದ ಕಾರಣ ರೇಣುಕಾಸ್ವಾಮಿ ಸಾವನ್ನಪ್ಪಿದ್ದಾನೆ. ಹೀಗಾಗಿ ಪವಿತ್ರಾಗೌಡ ಹಲ್ಲೆಯಿಂದ ರೇಣುಕಾಸ್ವಾಮಿ ಸಾವನ್ನಪ್ಪಿಲ್ಲ. ಪವಿತ್ರಾಗೌಡ ವಿರುದ್ಧ ಗಂಭೀರ ಆರೋಪ ಇಲ್ಲ.. ಆದ್ದರಿಂದ ಬೇಲ್ ಕೊಡುವಂತೆ ಮನವಿ ಮಾಡಿದರು.

# ಮೈಸೂರಲ್ಲಿ ಮಿಯಾವಕಿ ಮಾದರಿ ಕಿರು ಅರಣ್ಯ ಅಭಿವೃದ್ಧಿಗೆ ಚಾಲನೆ

- ಮಕ್ಕಳಂತೆ ಗಿಡ, ಮರ ಬೆಳೆಸಿ ಪರಿಸರ ಸಂರಕ್ಷಿಸಿ: ಶಾಸಕ ಜಿ.ಟಿ.ದೇವೇಗೌಡ ಕರೆ
- ಮೈಸೂರು ವಿಜಯನಗರ ಮೂರನೇ ಹಂತದಲ್ಲಿ ಉತ್ತಮ ಪರಿಸರ ನೆಲೆ ನಿರ್ಮಾಣ

ಮೈಸೂರು, ಆ.31(ಬಿಎಲ್‌ಯು)– ಮಕ್ಕಳಂತೆ ಗಿಡ, ಮರಗಳನ್ನು ಬೆಳೆಸಿ, ಪರಿಸರ ಸಂರಕ್ಷಿಸಿ ಎಂದು ಶಾಸಕ ಜಿ.ಟಿ.ದೇವೇಗೌಡ ಕರೆ ನೀಡಿದ್ದಾರೆ.

ಮೈಸೂರಿನ ವಿಜಯನಗರ 3 ನೇ ಹಂತದ ಹಿನಕಲ್ ರಸ್ತೆಯ ಉದ್ಯಾನವನದಲ್ಲಿ ಜಪಾನ್‌ನ ಮಿಯಾವಕಿ ಮಾದರಿ ಕಿರು ಅರಣ್ಯ ಪದ್ಧತಿ ಅನುಷ್ಠಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಗರಗಳು ವೇಗವಾಗಿ ಬೆಳೆಯುತ್ತಿರುವ ಪರಿಣಾಮ ಗಿಡ, ಮರಗಳು ನಾಶವಾಗಿ ಇಂಗಾಲ ಡೈ ಆಕ್ಸೈಡ್ ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಜಾಗತಿಕ ತಾಪಮಾನ ಹೆಚ್ಚಳದ ದುಷ್ಪರಿಣಾಮ ತಡೆಯಲು ಗಿಡ,ಮರ ಬೆಳೆಸಿ ಅರಣೀಕರಣ ವಿಸ್ತಾರ ಮಾಡುವುದೇ ಪರಿಹಾರ ಮಾರ್ಗ ಎಂದು ಜಿ.ಟಿ. ದೇವೇಗೌಡರು ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜರು ನಗರದ ಸುತ್ತ ಹಸರೀಕರಣದ ಮೂಲಕ ಪರಿಸರ ಸಂರಕ್ಷಣೆ ಮಾಡಿದರು. ಇದನ್ನು ನಾವು ಮುಂದುವರೆಸಿಕೊಂಡು ಹೋಗಬೇಕಿದೆ. ಟೊಯೊಟಾ ಕಿರ್ಲೋಸ್ಕರ್ ಕಂಪನಿಯಂತೆ ಇತರೆ ಖಾಸಗಿ ಕಂಪನಿಗಳು ಹೀಗೆ ಹಸರೀಕರಣದ ಜವಾಬ್ದಾರಿ ಹೊರಬೇಕು ಎಂದು ಸಲಹೆ ನೀಡಿದರು.

ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದ ಸಂದರ್ಭದಲ್ಲಿ ಒಂದೇ ದಿನ ಮೈಸೂರು ನಗರದಲ್ಲಿ ಒಂದು ಲಕ್ಷ ಸಸಿ ನೆಡುವ ವಿನೂತನ ಕಾರ್ಯಕ್ರಮ ಮಾಡಿದ್ದೆ. ಅದೇ ರೀತಿಯ ಕಾರ್ಯಕ್ರಮಗಳು ಈಗ ಪ್ರಸ್ತುತ ಎಂದು ಜಿ.ಟಿ. ದೇವೇಗೌಡರು ಹೇಳಿದರು.

ಈ ವೇಳೆ ಮಾತನಾಡಿದ ನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಮೈಸೂರು ನಗರದಲ್ಲಿ 569 ಉದ್ಯಾನವನಗಳಿದ್ದು, ಇದರಲ್ಲಿ 300 ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಸಾಧ್ಯವಾಗಿಲ್ಲ. ಇಂತಹ ಖಾಸಗಿ ಕಂಪನಿಗಳು ಉದ್ಯಾನವನ ಅಭಿವೃದ್ಧಿಗೆ ಮುಂದೆ ಬಂದರೆ ನಗರ ಪಾಲಿಕೆ ಸಂಪೂರ್ಣ ಸಹಕಾರ ನೀಡುತ್ತದೆ ಎಂದು ಭರವಸೆ ನೀಡಿದರು.

ಜೊತೆಗೆ ನಗರದ ಸರ್ಕಾರಿ ಶಾಲೆಗಳನ್ನು ನವೀಕರಣ ಮಾಡಬೇಕಿದೆ. ವಿದ್ಯಾರ್ಥಿಗಳ ಬಳಕೆಗೆ ಕಂಪ್ಯೂಟರ್ ನೀಡುವುದು ಸೇರಿದಂತೆ ಶಾಲೆಗಳ ನವೀಕರಣಕ್ಕೆ ಖಾಸಗಿ ಕಂಪನಿಗಳು ಮುಂದಾದರೆ ಪಾಲಿಕೆ ಸಿಎಸ್ ಆರ್ ಅನುದಾನ ನೀಡಲಿದೆ ಎಂದು ಆಶ್ವಾಸನೆ ನೀಡಿದರು.

ತರುವಾಯ ಮಾತನಾಡಿದ ಟೊಯೊಟಾ ಕಿರ್ಲೋಸ್ಕರ್ ಆಟೋ ಪಾರ್ಟ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಪ್ರಸಾದ್, ನಗರೀಕರಣ ಹಾಗೂ ಕೈಗಾರಿಕರಣದ ಪರಿಣಾಮ ಜಾಗತಿಕ ತಾಪಮಾನ ಹೆಚ್ಚಾಗುತ್ತಿದೆ. ಇದನ್ನು ತಡೆಯಲು ಅವಶ್ಯಕವಾಗಿ ಗಿಡ, ಮರ ಬೆಳೆಸಿ ಅರಣ್ಯದ ವ್ಯಾಪ್ತಿ ಹೆಚ್ಚು ಮಾಡಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ವಿಜಯನಗರ 3ನೇ ಹಂತದ ಹಿನಕಲ್ ರಸ್ತೆಯ ಉದ್ಯಾನವನದಲ್ಲಿ ಜಪಾನ್‌ನ ಮಿಯಾವಕಿ ಮಾದರಿ ಕಿರು ಅರಣ್ಯ ಯೋಜನೆ ಅನುಷ್ಠಾನಕ್ಕೆ ಶಾಸಕ ಜಿ.ಟಿ.ದೇವೇಗೌಡ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು.

### 10 ವರ್ಷದಲ್ಲಿ 11 ಸಾವಿರ ಮರ ಬೆಳೆಸುವ ಸಂಕಲ್ಪ

ವಿಜಯನಗರ 3ನೇ ಹಂತದ ಹಿನಕಲ್ ರಸ್ತೆಯ 1.2 ಎಕರೆಯಲ್ಲಿ 11 ಸಾವಿರ ಮರ ಬೆಳೆಸುವ ಸಂಕಲ್ಪ ಮಾಡಲಾಯಿತು. ಜಪಾನ್‌ನ ಮಿಯವಾಕಿ ಪದ್ಧತಿಯಲ್ಲಿ ಕೇವಲ 10 ವರ್ಷದಲ್ಲಿ ಈ ಕಿರು ಅರಣ್ಯೀಕರಣ ತಲೆಯೆತ್ತಲಿದೆ. ಉದ್ಯಾನವನದಲ್ಲಿ ಬಾಗೆ, ಬನ್ನಿ, ಹಲಸು, ಬೇವು, ಅಶೋಕ, ಬಸವನಪಾದ, ಬಸರಿ, ಕಕ್ಕೆ ಬಯಾ, ಬೀಟೆ, ನಲ್ಲಿ, ಬೇಲಾ, ಆಲ, ಅರಳಿ, ಹತ್ತಿ, ಗೋನಿ, ಸೀತಾ ಫಲ, ಶಿವಾನಿ, ತಪಸಿ, ಆಕಾಶ ಮಲ್ಲಿಗೆ ಮರಗಳನ್ನು ಬೆಳೆಸಲಾಗುತ್ತಿದೆ. ಇದಲ್ಲದೆ ಹುಚ್ಚ ಬೇವು, ಇಪ್ಪೆ, ಕುಂಕುಮ, ಮಾವು, ಹೊಂಗೆ, ಹೊನ್ನೆ, ಶ್ರೀಗಂಧ, ಸೀಬೆ, ನೇರಳೆ, ಮಹಾ ಘನಿ, ತೋರೆಮತಿ, ತಾರೆ, ತೇಗ, ಹಾಲೆ, ಮಧುಕಾ, ಗೋಡಂಬಿ, ಸಮರೂಬಾ, ಹುಲಚಿ, ಬುಗರಿ, ಬುರ್ಗಾ, ಶಿಶು ಮರಗಳನ್ನು ಕೂಡ ಬೆಳೆಸಲಾಗುತ್ತಿದೆ. ಇಂದು ನೆಟ್ಟ ಗಿಡಗಳು ಬಹಳ ವಿಶಿಷ್ಟವಾಗಿದೆ. ಬರಡಾಗಿರುವ ಉದ್ಯಾನವನ ಇನ್ನು ಮುಂದೆ ಹಸಿರಾಗಲಿದೆ. ಬೇಸಿಗೆ ಸಮಯದಲ್ಲಿ ಬಿಸಿಲಿನ ತಾಪಮಾನ ಕಡಿಮೆಯಾಗಿ ಸುತ್ತಮುತ್ತಲು ಜನರಿಗೆ ತಂಪಾದ ವಾತಾವರಣ ಮುಖ್ಯವಾಗಲಿದೆ.

### ರಾಜಕೀಯದ ಬಗ್ಗೆ ಮಾತನಾಡಲ್ಲ: ಶಾಸಕ ಜಿ.ಟಿ.ದೇವೇಗೌಡ ಸ್ಪಷ್ಟನೆ

ಮೈಸೂರು, ಆ.31(ಬಿಎಲ್‌ಯು)– ಯಾವುದೇ ರಾಜಕೀಯ ವಿಚಾರ ಮಾತನಾಡುವುದಿಲ್ಲ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ. ವಿಜಯನಗರ 3ನೇ ಹಂತದಲ್ಲಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡು, ಪತ್ರಕರ್ತರೊಂದಿಗೆ ಅವರು, ಪ್ರಸ್ತುತ ರಾಜಕೀಯ ವಿದ್ಯಮಾನಗಳನ್ನು ಗಮನಿಸಿದ್ದೇನೆ. ಆದರೆ ಯಾವುದೇ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ಚನ್ನಪಟ್ಟಣ ಉಪ ಚುನಾವಣೆ ಸಂಬಂಧ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಮನೆಯಲ್ಲಿ ಸಭೆ ನಡೆಯುವ ಬಗ್ಗೆ ಕೂಡ ಪ್ರತಿಕ್ರಿಯೆ ನೀಡದ ಜಿ.ಟಿ.ದೇವೇಗೌಡರು, ಇದರ ಬಗ್ಗೆ ನನಗೆ ಯಾವುದೇ ಮಾಹಿತಿ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

# ಸ್ನೇಹಮಯಿ ಕೃಷ್ಣನ ಗಡಿಪಾರು ಮಾಡಿ

## ನಗರ ಪೊಲೀಸ್ ಆಯುಕ್ತರಿಗೆ ಕೆಪಿಸಿಸಿ ವಕ್ತಾರ ಲಕ್ಷ್ಮಣ ಮನವಿ

ಮೈಸೂರು, ಆ.31(ಬಿಎಲ್‌ಯು) ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ರಾಜ್ಯಪಾಲರಿಗೆ ದೂರು ಸಲ್ಲಿಸಿರುವ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣನನ್ನು ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಗಡಿಪಾರು ಮಾಡಬೇಕೆಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರಲ್ಲಿ ಮನವಿ ಮಾಡಿದ್ದಾರೆ.

ರೌಡಿಶೀಟರ್ ಆಗಿರುವ ಸ್ನೇಹಮಯಿ ಕೃಷ್ಣನ ವಿರುದ್ಧ ಮೈಸೂರು ನಗರದಲ್ಲಿ 17 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದೆ. ಜೊತೆಗೆ ರಾಜ್ಯದ ಹಲವು ಭಾಗಗಳಲ್ಲಿ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ತಿಳಿಸಿದ್ದಾರೆ.

ಭೂಮಿಗೆ ಸಂಬಂಧಪಟ್ಟ ವಿಚಾರ ಕೈಗೆತ್ತಿಕೊಂಡು ಭೂ ವಿವಾದ ಸೃಷ್ಟಿಸುವ ಈತ, ದುರ್ಬಲ ವ್ಯಕ್ತಿಗಳನ್ನು ಹೆದರಿಸಿ, ಬೆದರಿಸುತ್ತಾನೆ. ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿ, ಜೀವ ಬೆದರಿಕೆ ಹಾಕುವ ಪ್ರವೃತ್ತಿ ಬೆಳೆಸಿಕೊಂಡಿದ್ದಾನೆ ಎಂದು ಪೊಲೀಸ್ ಇಲಾಖೆಯ ವರದಿಯೇ ಹೇಳುತ್ತದೆ ಎಂದು ಲಕ್ಷ್ಮಣ್ ವಿವರಿಸಿದ್ದಾರೆ.



ಎಂ.ಲಕ್ಷ್ಮಣ

2022–23ನೇ ಸಾಲಿನಲ್ಲಿ ವಿವಿಧ ಇಲಾಖೆಗಳಲ್ಲಿ ಆರ್‌ಟಿಐ ಮೂಲಕ 110 ಅರ್ಜಿ ಸಲ್ಲಿಸಿದ್ದಾನೆ. ಸರ್ಕಾರದ ಕೆಲವು ಇಲಾಖೆಗಳ ನಕಲಿ ಸೀಲ್ ಇಟ್ಟುಕೊಂಡು ನಕಲಿ ದಾಖಲಾತಿ ಸೃಷ್ಟಿಸುತ್ತಾನೆ. ಆರ್‌ಟಿಐ ಮಾಹಿತಿ ಸೀಲ್‌ಗಳನ್ನು ನಕಲಿಯಾಗಿ ಮಾಡಿಸಿಕೊಂಡು ದಾಖಲೆಗಳನ್ನು ತಿರುಚಿ, ಕೆಲವು ಅಕ್ಷರಗಳಿಗೆ ವೈಟ್ನರ್ ಹಾಕಿರು ವುದು ಕೂಡ ಕಂಡು ಬಂದಿದೆ ಎಂದು ಆರೋಪಿಸಿದ್ದಾರೆ.

ಕಳೆದ 10 ವರ್ಷದಿಂದ 17 ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಈತನ ವಿರುದ್ಧ ಪೊಲೀಸ್ ಇಲಾಖೆ ಸೆಕ್ಯೂರಿಟಿ ಕೇಸ್ ಅನ್ನು 6 ತಿಂಗಳಿಗೊಮ್ಮೆ ದಾಖಲಿಸಬೇಕಿತ್ತು. ಆದರೆ ರೌಡಿಶೀಟರ್ ಆಗಿರುವ ಈತ ಬ್ಲ್ಯಾಕ್‌ಮೇಲ್ ಚಟುವಟಿಕೆಯಲ್ಲಿ ಸಕ್ರಿಯನಾಗಿದ್ದರೂ ಸೆಕ್ಯೂರಿಟಿ ಕೇಸ್ ಹಾಕದೆ ಪೊಲೀಸ್ ಇಲಾಖೆ ಜಾಣ ಕುರುಡು ಪ್ರದರ್ಶಿಸುತ್ತಿರುವುದೇಕೇ ಎಂದು ಪ್ರಶ್ನಿಸಿದ್ದಾರೆ.

ಸ್ನೇಹಮಯಿ ಕೃಷ್ಣನ ಹಿಂಸೆಯಿಂದ ಕುವೆಂಪುನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಈತನ ವಿರುದ್ಧ ಪ್ರಕರಣ ಕೂಡ ದಾಖಲಾಗಿದೆ. ಕಳೆದ 15 ದಿನದ ಹಿಂದೆ ಈತನ ಸಹಚರರೆಂದು ಹೇಳಿಕೊಂಡು ಬಂದವರು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಇದಕ್ಕೆ ನಾನು ಒಪ್ಪದಿದ್ದಾಗ ನನ್ನ ವಿರುದ್ಧವೇ ಸುಳ್ಳು ದೂರು ದಾಖಲಿಸಿದ್ದಾರೆ ಎಂದು ಆಪಾದಿಸಿದ್ದಾರೆ.

ನಗರದ ಗಣ್ಯರು ಸೇರಿದಂತೆ ನನಗೂ ಸ್ನೇಹಮಯಿ ಕೃಷ್ಣನಿಂದ ಜೀವ ಬೆದರಿಕೆ ಇದ್ದು, ಈ ಕೂಡಲೇ ಈತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಬೇಕು. ಜೊತೆಗೆ ಗಡಿಪಾರು ಮಾಡಬೇಕು ಎಂದು ಲಕ್ಷ್ಮಣ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಗೆ ಲಿಖಿತ ಮನವಿ ಸಲ್ಲಿಸಿದ್ದಾರೆ.

### ಮೈಮುಲ್ ಅಧ್ಯಕ್ಷ ಚೆಲುವರಾಜ್‌ರಿಗೆ ಸನ್ಮಾನ



ಪಡುವಾರಹಳ್ಳಿಯ ವಿನಾಯಕ ಕನ್ವೆನ್ಷನ್ ಹಾಲ್‌ನಲ್ಲಿ ನೂತನ ಮೈಮುಲ್ ಅಧ್ಯಕ್ಷ ಚೆಲುವರಾಜ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಉಮಾಶಂಕರ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಜೆ.ಯೋಗೇಶ್, ಸಿ.ಡಿ.ಕುಮಾರ್, ಸಿ.ಸಂತೋಷ್, ಕೇಬಲ್ ಕಿಟ್ಟಿ, ಲೋಕೇಶ್ವರ, ರಾಘವ್ ಎಂ.ಗೌಡ ಮತ್ತಿತರರಿದ್ದರು.

## ಕೆನರಾ ಬ್ಯಾಂಕ್‌ನಲ್ಲಿ ಸಾಲ ವಸೂಲಾತಿ ವಿಶೇಷ ಅದಾಲತ್



ಮೈಸೂರಿನ ನಜರ್‌ಬಾದ್‌ನಲ್ಲಿರುವ ಕೆನರಾ ಬ್ಯಾಂಕ್ ಪ್ರಾದೇಶಿಕ ಶಾಖೆಯಲ್ಲಿ ಸಾಲ ವಸೂಲಾತಿ ಸಂಬಂಧ ವಿಶೇಷ ಲೋಕ ಅದಾಲತ್ ನಡೆಯಿತು.

ಮೈಸೂರು, ಆ.31(ಆರ್‌ಕೆ)– ಮೈಸೂರಿನ ನಜರ್‌ಬಾದ್‌ನಲ್ಲಿರುವ ಕೆನರಾ ಬ್ಯಾಂಕ್ ಪ್ರಾದೇಶಿಕ ಶಾಖೆಯಲ್ಲಿ ಇಂದು ಸಾಲ ವಸೂಲಾತಿ ಸಂಬಂಧ ವಿಶೇಷ ಲೋಕ ಅದಾಲತ್ ನಡೆಯಿತು.

ಕೆನರಾ ಬ್ಯಾಂಕ್ ಸಾಲ ವಸೂಲಾತಿ ಟ್ರಿಬ್ಯುನಲ್ (The Debts Recovery Tribunal) ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗದ ಸಹಯೋಗದೊಂದಿಗೆ ಆಯೋಜಿಸಿದ್ದ ವಿಶೇಷ ಲೋಕ ಅದಾಲತ್ ಕಾರ್ಯಕ್ರಮವನ್ನು ಚೆನ್ನೈನ ಡೆಬ್ಟ್ಸ್ ರೆಕವರಿ ಅಪಿಲೇಟ್ ಟ್ರಿಬುನಲ್ ಅಧ್ಯಕ್ಷರಾದ ನ್ಯಾಯಮೂರ್ತಿ ಎಸ್. ರವಿಕುಮಾರ್ ಉದ್ಘಾಟಿಸಿದರು.

ಅದಾಲತ್‌ನಲ್ಲಿ ಸಾಲ ಬಾಕಿ ಉಳಿಸಿಕೊಂಡಿದ್ದ 80 ಬ್ಯಾಂಕ್ ಗ್ರಾಹಕರು ಭಾಗವಹಿಸಿದ್ದು, ಪರಸ್ಪರ ಒಪ್ಪಂದದ ಮೂಲಕ 30 ಪ್ರಕರಣಗಳು ಇತ್ಯರ್ಥವಾಗಿದ್ದು, 24 ಕೋಟಿ ರೂ. ಸಾಲದ ಬಾಕಿ ವಸೂಲಾದಂತಾಗಿದೆ ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದಾರೆ.

ಸೆಪ್ಟೆಂಬರ್ 14ರಂದು ಮೈಸೂರಿನಲ್ಲಿ ರಾಷ್ಟ್ರೀಯ ಮಟ್ಟದ ಅದಾಲತ್ ನಡೆಯಲಿದ್ದು, ಗ್ರಾಹಕರು ತಮ್ಮ ಬ್ಯಾಂಕ್ ಶಾಖೆಗಳಲ್ಲಿ ಭಾಗವಹಿಸುವ ಬಗ್ಗೆ ಮಾಹಿತಿ ನೀಡಿ ಕಾರ್ಯಕ್ರಮದ ಸದುಪಯೋಗ ಪಡೆಯುವಂತೆ ಅವರು ಕೋರಿದ್ದಾರೆ.

ಬೆಂಗಳೂರಿನ ದಿ ಡೆಬ್ಟ್ಸ್ ರೆಕವರಿ ಅಪಿಲೇಟ್ ಟ್ರಿಬ್ಯುನಲ್ ಅಧ್ಯಕ್ಷೀಯ ಅಧಿಕಾರಿ ಇಮ್ತಿಯಾಜ್ ಅಲಿ, ಕೆನರಾ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಮಹೇಶ ಪೈ, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್‌ಗಳಾದ ಪಿ.ಎಸ್. ಉಮೇಶ, ಎಸ್.ರಾಜಶೇಖರ ಹಾಗೂ ಇತರರು ಅದಾಲತ್‌ನಲ್ಲಿ ಭಾಗವಹಿಸಿದ್ದರು.

### ಸಂದೇಶ ಕಲಾರತ್ನ' ಪ್ರಶಸ್ತಿ ಪ್ರದಾನ...



ಸಂದೇಶ ಯುವ ವೇದಿಕೆ ವತಿಯಿಂದ ಮೈಸೂರಿನ ಚಲನಚಿತ್ರ ಕಲಾವಿದ ಜೂನಿಯರ್ ನರಸಿಂಹರಾಜು, ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಯೋಗಗುರು ಪ್ರಕಾಶ ಯೋಗಿ ಗುರೂಜಿ ಹಾಗೂ ಸಾಹಿತಿ ಡಾ.ಚಿಕ್ಕ ಹೆಜ್ಜಾಜಿ ಮಹದೇವ ಅವರಿಗೆ 'ಸಂದೇಶ ಕಲಾರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭ ವೇದಿಕೆ ಅಧ್ಯಕ್ಷ ಕೆ.ಸೋಮಶೇಖರ್, ಡಾ. ಸಿ.ಸೋಮಶೇಖರ್, ಆದಿಚುಂಚನಗಿರಿ ಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ, ಬೇಲಿ ಮಠದ ಶ್ರೀ ಶಿವರುದ್ರ ಸ್ವಾಮೀಜಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವಿ.ಗಿರೀಶ್‌ಚಂದ್ರ, ನಟ ವರದರಾಜು ಹಾಗೂ ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಶ್ರೀ ಡಾ.ಆರೂಢ ಭಾರತೀ ಸ್ವಾಮೀಜಿ ಅವರನ್ನು ಚಿತ್ರದಲ್ಲಿ ಕಾಣಬಹುದು.

# ಸಂವಿಧಾನ, ಪ್ರಜಾಪ್ರಭುತ್ವ ರಕ್ಷಣೆಗೆ ವಿದ್ಯಾರ್ಥಿ ಸಂಘಟನೆಗಳು ಹೋರಾಡಬೇಕು

## ಎಸ್‌ಎಫ್‌ಐನ 12ನೇ ಸಮ್ಮೇಳನದಲ್ಲಿ ರಂಗಕರ್ಮಿ ಸಿ.ಬಸವಲಿಂಗಯ್ಯ ಸಲಹೆ

ಮೈಸೂರು,ಆ.31(ಎಂಟಿವೈ)– ದೇಶದಲ್ಲಿ ಅಪಾಯಕ್ಕೆ ಸಿಲುಕಿರುವ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯ ರಕ್ಷಣೆಯ ಹೋರಾಟದಲ್ಲಿ ವಿದ್ಯಾರ್ಥಿ ಸಂಘಟನೆಗಳು ತೊಡಗಿಸಿಕೊಳ್ಳಬೇಕು ಎಂದು ರಂಗಕರ್ಮಿ ಸಿ.ಬಸವಲಿಂಗಯ್ಯ ಸಲಹೆ ನೀಡಿದ್ದಾರೆ.

ಮೈಸೂರಿನ ಅಶೋಕವೃತ್ತ(ಬಲ್ಲಾಳ್ ವೃತ್ತ)ದ ಸಮೀಪವಿರುವ ಬುದ್ಧ ವಿಹಾರದ ಸಭಾಂಗಣದಲ್ಲಿ ಶನಿವಾರ ನಡೆದ ಭಾರತ ವಿದ್ಯಾರ್ಥಿ ಫೆಡರೇಶನ್‌ನ (ಎಸ್‌ಎಫ್‌ಐ) 12ನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಹಲವು ವಿದ್ಯಾರ್ಥಿ ಸಂಘಟನೆಗಳಿವೆ. ಆದರೆ ಎಬಿವಿಪಿ ಸಂಘಟನೆ ಹಣೆ ಮೇಲೆ ನಾಮ ಇಡುವುದಕ್ಕೆ ಸೀಮಿತವಾಗಿದೆ. ಸಮಾಜವಾದ ಎಂದರೆ ಎಬಿವಿಪಿ ಮೂಗು ಮುರಿಯುತ್ತದೆ ಎಂದರು.

ವಿದ್ಯಾರ್ಥಿಗಳು ಸಾಧನೆ ಮಾಡುವತ್ತ ಗಮನಹರಿಸಬೇಕು. ವಿದ್ಯಾರ್ಥಿದೆಸೆಯಲ್ಲಿಯೇ ಅಧ್ಯಯನದೊಂದಿಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡುವ ಛಲ ಹೊಂದಿರಬೇಕು. 21 ವರ್ಷದೊಳಗೆ ಏನಾದರೂ ಸಾಧಿಸದೇ ಇದ್ದರೆ ಸಮಾಜ ನಿಮ್ಮನ್ನು ಗುರುತಿಸುವುದಿಲ್ಲ. ಇದನ್ನು ಮನವರಿಕೆ ಮಾಡಿಕೊಂಡು ಬದಲಾವಣೆಯತ್ತ ಮನಸ್ಸು ಮಾಡಬೇಕು. ದೇಶದಲ್ಲಿನ ಆಗುಹೋಗುಗಳಿಗೆ ಸ್ಪಂದಿಸಬೇಕು. ತಪ್ಪನ್ನು ವಿರೋಧಿಸುವ ಮನೋಭಾವವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಸಾಮಾಜಿಕ ಹಾಗೂ ರಾಜಕೀಯವಾಗಿ ಬದಲಾವಣೆ ತರಬೇಕು. ಆ ನಿಟ್ಟಿನಲ್ಲಿ ಎಸ್‌ಎಫ್‌ಐನಂತಹ ವಿದ್ಯಾರ್ಥಿ ಸಂಘಟನೆಗಳು ವಿದ್ಯಾರ್ಥಿಗಳಿಗೆ ಪ್ರೇರಣೆ ಮತ್ತು ಮಾರ್ಗದರ್ಶನ ನೀಡಬೇಕು. ವಿದ್ಯಾರ್ಥಿ ಸಂಘಟನೆಗಳು ಸಮಾಜದಲ್ಲಿ ಸ್ವಾಸ್ಥ್ಯ ಹದಗೆಡದಂತೆ ಕಾರ್ಯೋನ್ಮುಖವಾಗಬೇಕು ಎಂದು ಸಲಹೆ ನೀಡಿದರು.





ಮೈಸೂರಿನ ಬುದ್ಧ ವಿಹಾರದ ಸಭಾಂಗಣದಲ್ಲಿ ಶನಿವಾರ ನಡೆದ ಭಾರತ ವಿದ್ಯಾರ್ಥಿ ಫೆಡರೇಶನ್‌ನ (ಎಸ್‌ಎಫ್‌ಐ) 12ನೇ ಜಿಲ್ಲಾ ಸಮ್ಮೇಳನವನ್ನು ರಂಗಕರ್ಮಿ ಸಿ.ಬಸವಲಿಂಗಯ್ಯ ಉದ್ಘಾಟಿಸಿ ಮಾತನಾಡಿದರು.

**ಜಿಲ್ಲಾ ಸಮಿತಿಗೆ ಆಯ್ಕೆ:** ಇದೇ ವೇಳೆ 25 ಸದಸ್ಯರ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಜಿಲ್ಲಾ ಅಧ್ಯಕ್ಷರಾಗಿ ಟಿ.ಎಸ್.ವಿಜಯ್ ಕುಮಾರ್ (ಜಿಲ್ಲಾ ಅಧ್ಯಕ್ಷ) ಟಿ.ಪ್ರಜ್ವಲ್ (ಕಾರ್ಯದರ್ಶಿ) ದೀಕ್ಷಿತಾ, ರಜಿಯಾ ಯಾಸ್ಮಿನ್, ಸಂಜು (ಉಪಾಧ್ಯಕ್ಷರು) ಚಿರಾಗ್, ಸಂತೋಷ್, ಮಂಜುನಾಥ್ (ಜಂಟಿ ಕಾರ್ಯದರ್ಶಿಗಳು) ಆಯ್ಕೆಯಾದರು.

ಅಧ್ಯಕ್ಷತೆಯನ್ನು ಎಸ್‌ಎಫ್‌ಐ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎಸ್.ವಿಜಯ್‌ಕುಮಾರ್ ವಹಿಸಿದ್ದರು. ಸಂಘಟನೆಯ ರಾಜ್ಯ ಕಾರ್ಯದರ್ಶಿ ಭೀಮನಗೌಡ, ವಿದ್ಯಾರ್ಥಿ ಉಪ ಸಮಿತಿ ನಾಯಕಿ ಎಂ.ಎನ್. ದೀಕ್ಷಿತಾ, ಸಂಘಟನೆ ಪದಾಧಿಕಾರಿಗಳಾದ ಡಿ.ಅಭಿ, ಎಸ್.ಕೆ. ಚಿರಾಗ್, ವಿನಾಯಕ್, ಜೀವನ್, ಸಂತೋಷ್ ಭಾಗವಹಿಸಿದ್ದರು. ಇದಕ್ಕೂ ಮುನ್ನ ರಾಮ ಸ್ವಾಮಿ ವೃತ್ತದಿಂದ ಬುದ್ಧವಿಹಾರದವರೆಗೆ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

## ಚಿತ್ರಕಲಾ ಸ್ಪರ್ಧೆಯ ಪೋಸ್ಟರ್ ಬಿಡುಗಡೆ

ಮೈಸೂರು, ಆ.31(ಜಿಎ)–ಮೈಸೂರು ಕಲಾ ಪ್ರತಿಷ್ಠಾನದ ವತಿಯಿಂದ ಕಲಾ ಜಾಗೃತಿ ಅಂಗವಾಗಿ ಶಾಲಾ ಮಕ್ಕಳಿಗಾಗಿ ನಗರದ ಸರಸ್ವತಿಪುರಂ ಹೆರಿಟೇಜ್ ಹೌಸ್‌ನಲ್ಲಿ ಸೆ.14ರಂದು ಹಮ್ಮಿಕೊಂಡಿರುವ ಚಿತ್ರಕಲಾ ಸ್ಪರ್ಧೆಯ ಪೋಸ್ಟರ್ ಅನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಮಕ್ಕಳ ಪ್ರತಿಭೆಗೆ ಅವಕಾಶ ನೀಡುವ ಕೆಲಸ ಸಂಸ್ಥೆ ಮಾಡುತ್ತಿದೆ. ಚಿತ್ರಕಲಾ ಶಿಕ್ಷಕರು ಇಲ್ಲದ ಶಾಲೆಗಳಲ್ಲಿ ಅದಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಸ್ವಾಗತಾರ್ಹ. ಮಕ್ಕಳಲ್ಲಿ ಅಡಗಿರುವ ಸುಪ್ತ ಬುದ್ಧಿವಂತಿಕೆಗೆ ಈ ರೀತಿ ಪ್ರೋತ್ಸಾಹ ಅಗತ್ಯವಾಗಿದೆ ಎಂದರು.

ಈ ವೇಳೆ ಸಂಸ್ಥೆ ಅಧ್ಯಕ್ಷ ಪಿ.ಬಿ. ಅನಿಲ್ ಕುಮಾರ್ ಮಾತನಾಡಿ, ಅಂದು ಬೆಳಗ್ಗೆ 10ಕ್ಕೆ ಸ್ಪರ್ಧೆ ಆರಂಭವಾಗಲಿದ್ದು, ಪ್ರವೇಶ ಶುಲ್ಕ 50 ರೂ., ಅನಾಥಾಶ್ರಮ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ರೇವಣ್ಣ, ಚಾಂದಿನಿ ಗೌರವ್ ಇದ್ದರು.

ಮೈಸೂರು ಮಿತ್ರ



# ಶ್ರೀರಂಗಪಟ್ಟಣ ಬಳಿ ಕಿರು ಜಲವಿದ್ಯುತ್ ಯೋಜನೆ ರದ್ದು

## ಇಂಧನ ಇಲಾಖೆಯ ಆದೇಶ: ಮುಖಂಡರ ಸ್ವಾಗತ

ಶ್ರೀರಂಗಪಟ್ಟಣ, ಆ.31– ತಾಲೂಕಿನ ಬೆಳಗೊಳ–ಮಜ್ಜಿಗೆಪುರ ಗ್ರಾಮದ ಬಳಿಯ ಅಣೆಕಟ್ಟೆಯಲ್ಲಿ ವಿ.ಪಾರಂ ಪವರ್ ಕಂ. (ಪ್ರೈ) ಲಿಮಿಟೆಡ್ ಕಂಪನಿಯ ತೆರೆಯಲು ಹೊರಟಿದ್ದ 0.5 ಮೆ.ವ್ಯಾ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಇಂಧನ ಇಲಾಖೆ ಅಧೀನ ಕಾರ್ಯದರ್ಶಿ ವಿನೋದ್ ಕುಮಾರ್ ರದ್ದುಪಡಿಸಿ ಆದೇಶಿಸಿದ್ದಾರೆ.

ವಿ. ಪಾರಂ ಪವರ್ ಕಂ. (ಪ್ರೈ) ಲಿಮಿಟೆಡ್ ಕಂಪನಿಗೆ ಹಂಚಿಕೆಯಾಗಿದ್ದ 0.5 ಮೆ.ವ್ಯಾ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆ ಇದುವರೆವಿಗೂ ಅನುಷ್ಠಾನಗೊಂಡಿಲ್ಲ ಹಾಗೂ ಕಾಲಾವಕಾಶ ಶುಲ್ಕ ಪಾವತಿಸದ ಕಾರಣ ಕಿರು ಜಲ ವಿದ್ಯುತ್ ಯೋಜನೆಯನ್ನು ಸರ್ಕಾರ ರದ್ದುಪಡಿಸಿ ಆದೇಶಿಸಿದೆ. ಸ್ಥಳೀಯ ಕಾಂಗ್ರೆಸ್ ಮುಖಂಡರು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಹಾಗೂ ಪರಿಸರ ಪ್ರೇಮಿಗಳು ಇದನ್ನು ಸ್ವಾಗತಿಸಿದ್ದಾರೆ.

ಈ ಹಿಂದೆ ಕಾಂಗ್ರೆಸ್ ಮುಖಂಡರುಗಳಾದ ಬೆಳಗೊಳ ಗ್ರಾಪಂ ಅಧ್ಯಕ್ಷ ಬಿ.ವಿ ಸುರೇಶ್, ತಾ.ಪಂ ಮಾಜಿ ಸದಸ್ಯ ಮೇಟಗಳ್ಳಿ ಸ್ವಾಮೀಗೌಡ, ಗ್ರಾ.ಪಂ ಮಾಜಿ ಉಪಾಧ್ಯಕ್ಷ ಬೆಳಗೊಳ ಮಂಜುನಾಥ್, ಭಾರ್ಗವ, ಪುಟ್ಟೇಗೌಡ ಸೇರಿದಂತೆ ಬೆಳಗೊಳ, ಮಜ್ಜಿಗೆಪುರ ಗ್ರಾಮಸ್ಥರು ಕಂಪನಿ ವಿರುದ್ಧ ಪ್ರತಿಭಟನೆ ನಡೆಸಿ, ಕಾವೇರಿ ನದಿಯಲ್ಲಿ ವಿ.ಪಾರಂ ಪವರ್ ಕಂ. (ಪ್ರೈ) ಲಿಮಿಟೆಡ್ ವತಿಯಿಂದ ಅಕ್ರಮವಾಗಿ ಗಡಿ ಗುರುತಿಸದೆ, ಪವರ್ ಪ್ಲಾಂಟ್ ನಿರ್ಮಿಸಲು ತಡೆಗೋಡೆ ನಿರ್ಮಿಸುತ್ತಿದ್ದಾರೆ. ಜೊತೆಗೆ ಎಡಮುರಿ ಪ್ರಸಿದ್ಧ ಪ್ರವಾಸಿ ತಾಣವಾಗಿದ್ದು, ಇಲ್ಲಿ ನೂರಾರು ವರ್ಷಗಳ ಇತಿಹಾಸ ವಿದೆ. ಅನೇಕ ಪ್ರಭೇದದ ಪ್ರಾಣಿ ಪಕ್ಷಿಗಳ ಸಂತತಿ ಇದ್ದು, ಎಕೋ ಜೋನ್ ಎಂದು ಘೋಷಣೆಯಾಗಿದೆ ಈಗಿದ್ದೂ ಏಕಾಏಕಿ ತಡೆಗೋಡೆ ನಿರ್ಮಿಸಲು ಮುಂದಾಗಿರುವುದು ಸರಿಯಲ್ಲ ಎಂದು ತಿಳಿಸಿದ್ದರು.



ಇದನ್ನು ಪ್ರಶ್ನಿಸಿದವರ ವಿರುದ್ಧ ಜಾತಿ ನಿಂದನೆ ಆರೋಪ ಹೊರಿಸಿ ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ನೀಡಲಾಗಿತ್ತು. ಜೊತೆಗೆ ಅರಣ್ಯ ಇಲಾಖೆ ಸಹ ಈ ಸ್ಥಳವನ್ನು ದೇವರಾಜ ದ್ವೀಪಗಳು ಎಂದು ಗುರುತಿಸಿ ಅತಿಕ್ರಮ ಪ್ರವೇಶಿಸದಂತೆ ಎಚ್ಚರಿಕಾ ನಾಮಫಲಕಗಳನ್ನು ಅಳವಡಿಸಿತ್ತು. ಇಂತಹ ಸಂರಕ್ಷಣಾ ಜಾಗದಲ್ಲಿ ಅವೈಜ್ಞಾನಿಕವಾಗಿ ನದಿಯಲ್ಲಿ ಕೆಲಸ ಮಾಡುತ್ತಿರುವುದನ್ನು ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸುವಂತೆ ಆಗ್ರಹಿಸಿದ್ದರು.

# ವಿದ್ಯಾರ್ಥಿಗಳಿಗೆ ಜೀವನದ ಅಂಕ ಬಹಳ ಮುಖ್ಯ




ಹಾಲು ಉತ್ಪಾದಕರ ಮಕ್ಕಳಿಗೆ ಮಂಡ್ಯದಲ್ಲಿ ಶನಿವಾರ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಮಂಡ್ಯ,ಆ.31–ವಿದ್ಯಾರ್ಥಿಗಳು ಪಠ್ಯದಲ್ಲಿ ಗಳಿಸುವ ಅಂಕಗಳಿಗಿಂತ ಜೀವನದಲ್ಲಿ ಗಳಿಸುವ ಅಂಕ ಬಹಳ ಮುಖ್ಯವಾದದ್ದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಹಾಗೂ ಮಂಡ್ಯ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ಮತ್ತು ನೌಕರರ ಕಲ್ಯಾಣ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಹಾಗೂ ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದ ಮಂಡ್ಯ ಜಿಲ್ಲೆಯ ಹಾಲು ಉತ್ಪಾದಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಮಕ್ಕಳ ಪ್ರತಿಭೆಯನ್ನು ಗುರುತಿಸಬೇಕು. ಎಲ್ಲರಲ್ಲೂ ಪ್ರತಿಭೆ ಇದ್ದೆ ಇರುತ್ತದೆ. ವಿದ್ಯಾರ್ಥಿಗಳ ಸಾಧನೆ ಅವರ ತಂದೆ ತಾಯಿಗೆ ಸಲ್ಲಬೇಕು. ಮಕ್ಕಳ ಸಾಧನೆ ಕಂಡು ಅತೀ ಹೆಚ್ಚು ಸಂತೋಷ ಪಡುವುದು ತಂದೆ ತಾಯಿಗಳು. ಆದ್ದರಿಂದ ತಂದೆ ತಾಯಿಗಿಂತ ಮಿಗಿಲಾದ ಶಕ್ತಿ ಬೇರೊಂದಿಲ್ಲ. ದೇವರನ್ನು ನಾವು ಕಂಡಿಲ್ಲ, ನಂಬಿಕೆಯಿಂದ ಪೂಜೆ ಮಾಡುತ್ತೇವೆ. ಮೂರ್ತಿ ರೂಪದಲ್ಲಿ ದೊಡ್ಡ ಶಕ್ತಿ ಅದು ತಂದೆ ತಾಯಿ ಮಾತ್ರ,ತಂದೆ ತಾಯಿಗಳೇ ದೊಡ್ಡ ಶಕ್ತಿ. ವಿದ್ಯಾರ್ಥಿಗಳ ಸಾಧನೆ ಹಿಂದೆ ತಂದೆ ತಾಯಿಗಳ ಪರಿಶ್ರಮ ಇರುತ್ತದೆ ಎಂದು ಹೇಳಿದರು.

ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್ ಮಾತನಾಡಿ, ರಾಜ್ಯದಲ್ಲಿರುವ ಹಾಲು ಒಕ್ಕೂಟಗಳಲ್ಲಿ ಮಂಡ್ಯ ಹಾಲು ಒಕ್ಕೂಟ ಹಾಲಿನ ಗುಣಮಟ್ಟ ಹಾಗೂ ಶೇಖರಣೆಯಲ್ಲಿ ಪ್ರಗತಿಯತ್ತ ಸಾಗುತ್ತಿದೆ. ಇದಕ್ಕೆಲ್ಲ ರೈತ ಬಾಂಧವರ ಸಹಕಾರ ಕಾರಣವಾಗಿದೆ. ಕೋವಿಡ್ ಸಂದರ್ಭದಲ್ಲಿ ಸಹ ಮಂಡ್ಯ ಹಾಲು ಒಕ್ಕೂಟ ಉತ್ಪಾದಕರಿಂದ ಹಾಲು ಖರೀದಿ ಮಾಡಿ ರೈತರ ನೆರವಿಗೆ ನಿಂತಿದ್ದೇವೆ. ರೈತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದ್ದೇವೆ. ಪ್ರತಿಭಾ ಪುರಸ್ಕಾರದಿಂದ ವಿದ್ಯಾರ್ಥಿಗಳು ಇನ್ನು ಉನ್ನತವಾಗಿ ವ್ಯಾಸಂಗ ಮಾಡಿ ಒಳ್ಳೆಯ ಉನ್ನತ ಸ್ಥಾನಕ್ಕೆ ಏರಲಿ ಎಂದರು.

ಮನ್‌ಮುಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಪಿ.ಆರ್.ಮಂಜೇಶ್ ಮಾತನಾಡಿ, ಮಂಡ್ಯ ಹಾಲು ಒಕ್ಕೂಟ ಗುಣಮಟ್ಟ ಹಾಗೂ ಹಾಲು ಉತ್ಪಾದನೆಯಲ್ಲಿ ರಾಜ್ಯದಲ್ಲಿ ಮೊದಲನೇ ಸ್ಥಾನದಲ್ಲಿದೆ. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಉತ್ಪಾದಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡುವ ನಿಟ್ಟಿನಲ್ಲಿ ಮನ್‌ಮುಲ್ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಮಂಡ್ಯ ಹಾಲು ಒಕ್ಕೂಟವನ್ನು ಡಿಜಿಟಲ್ ಮನ್‌ಮುಲ್ ಮಾಡುವ ಧ್ಯೇಯ ಇಟ್ಟುಕೊಂಡು ಕಾಗದ ರಹಿತ ವ್ಯವಹಾರ ಮಾಡುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಜಿಲ್ಲೆಯ ಹಾಲು ಉತ್ಪಾದಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧ್ಯಕ್ಷ ಬಿ.ಬೋರೇಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಮನ್‌ಮುಲ್ ನಿರ್ದೇಶಕರಾದ ಬಿ.ಆರ್.ರಾಮಚಂದ್ರ ಎಸ್.ಪಿ.ಸ್ವಾಮಿ, ಎಂ.ರೂಪ, ಕೆ.ರಾಮಚಂದ್ರ, ಎಸ್.ಎನ್.ಲಕ್ಷ್ಮೀನಾರಾಯಣ, ಕದಲೂರು ರಾಮಕೃಷ್ಣ, ರಾಮಕೃಷ್ಣ, ನೌಕರರ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಶ್ರೀಧರ್, ಮನ್‌ಮುಲ್ ಜಂಟಿ ಕಾರ್ಯನಿರ್ವಹಣಾಧಿಕಾರಿ ಶ್ರೀನಿವಾಸ ರೆಡ್ಡಿ ಸೇರಿದಂತೆ ಇತರರು ಹಾಜರಿದ್ದರು.

# ಬೋಳಾರೆ ರಂಗನಾಥಸ್ವಾಮಿ ದೇವರ ವಿಜೃಂಭಣೆ ಬ್ರಹ್ಮ ರಥೋತ್ಸವ



**ಕೆಆರ್ ಪೇಟೆ:** ಕಡೆಯ ಶ್ರಾವಣ ಮಾಸದ ಶನಿವಾರದ ಅಂಗವಾಗಿ ತಾಲೂಕು ಬೂಕನಕೆರೆ ಹೋಬಳಿ ಬೆಟ್ಟದಹೊಸೂರು ಗ್ರಾಮದ ಬಳಿಯಿರುವ ಉದ್ಭವ ಬೋಳಾರೆ ರಂಗನಾಥ ಸ್ವಾಮಿ ದೇವರ 10ನೇ ಬ್ರಹ್ಮ ರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದಲ್ಲಿ ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು, ತಹಸೀಲ್ದಾರ್ ಆದರ್ಶ, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬೋಳಾರೆ ರಂಗನಾಥಸ್ವಾಮಿ ದೇವಾಲಯ ಟ್ರಸ್ಟ್ ಉಪಾಧ್ಯಕ್ಷ ಬಿ.ಟಿ.ವೆಂಕಟೇಶ್ ನೇತೃತ್ವದಲ್ಲಿ ಕಾರ್ಯಕ್ರಮಗಳು ಜರುಗಿದವು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಉದ್ಭವ ಬೋಳಾರೆ ರಂಗನಾಥಸ್ವಾಮಿ ಟ್ರಸ್ಟ್ ಉಪಾಧ್ಯಕ್ಷ ಬೂಕನಕರೆ ವೆಂಕಟೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಟ್ರಸ್ಟ್ ಗೌರವಾಧ್ಯಕ್ಷರಾದ ಬಿ ಪುಟ್ಟಸ್ವಾಮಿ,ಉಪಾಧ್ಯಕ್ಷ ಬಿ.ಟಿ.ವೆಂಕಟೇಶ್, ರಾಜ್ಯ ಜೆಡಿಎಸ್ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಕುರುಬಹಳ್ಳಿ ನಾಗೇಶ್ ಹಾಜರಿದ್ದರು.

# ಹಳೇಬೀಡು ಗ್ರಾಪಂ ಉಪಾಧ್ಯಕ್ಷರಾಗಿ ಜೆಡಿಎಸ್‌ನ ಗೌರಮ್ಮ ಆಯ್ಕೆ

ಪಾಂಡವಪುರ, ಆ.31– ತಾಲೂಕಿನ ಹಳೇಬೀಡು ಗ್ರಾಪಂನ ನೂತನ ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಗೌರಮ್ಮ ಶನಿವಾರ ಆಯ್ಕೆಯಾದರು.

17 ಮಂದಿ ಸದಸ್ಯರ ಸಂಖ್ಯಾಬಲ ಹೊಂದಿರುವ ಗ್ರಾಪಂನಲ್ಲಿ ಜೆಡಿಎಸ್ ಬೆಂಬಲಿತ–11, ರೈತಸಂಘ–ಕಾಂಗ್ರೆಸ್ ಬೆಂಬಲಿತ–6 ಮಂದಿ ಸದಸ್ಯರಿದ್ದಾರೆ. ಗ್ರಾಪಂನ ಹಿಂದಿನ ಉಪಾಧ್ಯಕ್ಷೆ ಎಂ.ಎ.ಶೋಭಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯೆ ಗೌರಮ್ಮ ರೈತಸಂಘ–ಕಾಂಗ್ರೆಸ್ ಬೆಂಬಲಿತ ಸದಸ್ಯೆ ಸಂಕಲ್ಪ ನಾಮಪತ್ರ ಸಲ್ಲಿಸಿದರು.

ಎರಡು ನಾಮಪತ್ರಗಳು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಗಳಾದ ಕಾವೇರಿ ನೀರಾವರಿ ನಿಗಮದ ಎಇಇ ಜಯರಾಮು ಅವರು ಗುಪ್ತ ಮತದಾನ ಪ್ರಕ್ರಿಯೆಯ ಮೂಲಕ ಚುನಾವಣೆ ನಡೆಸಿದರು. ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಗೌರಮ್ಮಗೆ 11 ಮತ, ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಸಂಕಲ್ಪಗೆ 6 ಮತಗಳು ಬಂದವು. 5 ಮತಗಳ ಅಂತರದಿಂದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಗೌರಮ್ಮ ಗೆಲುವು ಸಾಧಿಸುವ ಮೂಲಕ ಉಪಾಧ್ಯಕ್ಷರಾಗಿ ಆಯ್ಕೆಯಾದರು.



ಹಳೇಬೀಡು ಗ್ರಾಪಂ ಉಪಾಧ್ಯಕ್ಷೆ ಗೌರಮ್ಮ ಅವರನ್ನು ಅಭಿನಂಧಿಸಲಾಯಿತು.

ಜೆಡಿಎಸ್‌ನ ಗೌರಮ್ಮ ಉಪಾಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು, ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಚುನಾವಣಾ ಪ್ರಕ್ರಿಯೆಯಲ್ಲಿ ಗ್ರಾಪಂ ಅಧ್ಯಕ್ಷ ಎಚ್.ಸಿ.ಧನಂಜಯ್, ಸದಸ್ಯರಾದ ಮಂಜುಳ, ಎಚ್.ಪಿ.ಪುಟ್ಟೇಗೌಡ, ಚಿಕ್ಕತಾಯಮ್ಮ, ಸಿ.ಜೆ.ರಾಧಾ, ಸೌಭಾಗ್ಯಮ್ಮ, ಎಚ್.ಪಿ.ಪದ್ಮರಾಜ್, ಎಂ.ಎ.ಶೋಭಾ, ಮಂಗಳಮ್ಮ, ಜಯಲಕ್ಷ್ಮಮ್ಮ, ಸಿ.ಕೆ.ಕರೀಗೌಡ, ಶಂಕರಶೆಟ್ಟಿ, ಶಶಿಕಲಾ, ಕುಮಾರ್, ಬೋರೇಗೌಡ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಹೊಸಕೋಟೆ ಪುಟ್ಟಣ್ಣ, ಹಳೇಬೀಡು ಕುಳ್ಳೇಗೌಡ, ನರಹಳ್ಳಿ ಸಣ್ಣಪ್ಪ ದಾಸಪ್ಪ ಹಾಜರಿದ್ದರು.

# ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ವಿತರಣೆ

ಮಂಡ್ಯ,ಆ.31–ಸಹಕಾರ ಸಂಘಗಳಿಂದ ಶೂನ್ಯ ಬಡ್ಡಿ ದರದಲ್ಲಿ 5 ಲಕ್ಷ ರೂ.ಗಳವರೆಗೆ ಬೆಳೆ ಸಾಲ ಮತ್ತು ಶೇ 3ರ ಬಡ್ಡಿ ದರದಲ್ಲಿ ರೂ 15 ಲಕ್ಷಗಳವರೆಗೆ ವಿತರಿಸಲು ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ಯೋಜನೆಯಲ್ಲಿ ಸಾಲ ವಿತರಿಸುವ ರೈತರ ಪೈಕಿ ಪರಿಶಿಷ್ಟ ಜಾತಿ ಸದಸ್ಯರಿಗೆ ಶೇ.17.15 ಮತ್ತು ಪರಿಶಿಷ್ಟ ವರ್ಗದ ಸದಸ್ಯರಿಗೆ ಶೇ 6.95 ರಷ್ಟು ಸಾಲ ವಿತರಿಸಲು ಯೋಜನೆಯ ವ್ಯಾಪ್ತಿಗೆ ಬರುವ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ (ಪಿಕಾರ್ಡ್ ಬ್ಯಾಂಕ್‌ಗಳು) ಮತ್ತು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿಗೆ (ಕಸ್ಲಾರ್ಡ್) ಕರ್ನಾಟಕ ಸಹಕಾರ ಸಂಘಗಳಿಂದ ಸಾಲ ಪಡೆಯುವ ಬಗ್ಗೆ ಸದರಿ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖಾ ಕಚೇರಿಯ ಸಹಾಯಕ ನಿರ್ದೇಶಕರು ಮತ್ತು ಉಪನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲೆ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿವಣ್ಣ ನಿಧನ



**ಕೆಆರ್.ಪೇಟೆ:** ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಅಂಬೇಡ್ಕರ್ ಕಾಲೋನಿಯ ಹಿರಿಯ ಮುಖಂಡರಾದ ಶಿವಣ್ಣ (70) ಶನಿವಾರ ನಿಧನರಾದರು.

ಮೃತರು ಪತ್ನಿ ನೀಲಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ನಡೆಯಿತು. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

# ಕಾಂಗ್ರೆಸ್ ರಾಜಭವನ ಚಲೋ

ಶಾಸಕಾಂಗ ಪಕ್ಷದ ನಾಯಕರೂ ಆಗಿರುವ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್ ನಾಯತ್ವದಲ್ಲಿ ಕಾಂಗ್ರೆಸ್‌ನ ಸಚಿವರು, ಸಂಸದರು, ಶಾಸಕರು ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಿ ಕೇಂದ್ರ ಮತ್ತು ರಾಜ್ಯಪಾಲರ ವಿರುದ್ಧ ಪ್ರತಿಭಟಿಸಿದರು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಆದೇಶ ನೀಡುತ್ತಾರೆ, ಆದರೆ ಎನ್‌ಡಿಎ ಕೂಟದವರು ಮಾಡಿರುವ ಭ್ರಷ್ಟಾಚಾರ ಆರೋಪಗಳಿಗೆ ಪ್ರಾಸಿಕ್ಯೂಷನ್ ಅನುಮತಿ ನೀಡದೆ ತಾರತಮ್ಯ ಮಾಡುತ್ತಿದ್ದಾರೆ. ಜನತಂತ್ರ ವ್ಯವಸ್ಥೆಯಲ್ಲಿ ಬಹುಮತ ಹೊಂದಿರುವ ಕಾಂಗ್ರೆಸ್ ಸರ್ಕಾರವನ್ನು ಪತನಗೊಳಿಸುವ ಏಕೈಕ ಉದ್ದೇಶದಿಂದ ಕೇಂದ್ರ ಸರ್ಕಾರ ರಾಜಭವನವನ್ನು ಗುರಾಣಿಯಾಗಿ ಬಳಸಿಕೊಳ್ಳುತ್ತಿದೆ ಎಂದು ಟೀಕಿಸಿದರು.

**ಡಿಕೆಶಿ ನೇತೃತ್ವ:** ನಂತರ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ನಾಯಕತ್ವದಲ್ಲಿ ಗಾಂಧಿ ಪ್ರತಿಮೆಯಿಂದ ಸಿದ್ದರಾಮಯ್ಯ ಹೊರತು ಪಡಿಸಿ ಉಳಿದೆಲ್ಲಾ ಕಾಂಗ್ರೆಸ್ ಜನಪ್ರತಿನಿಧಿಗಳು ರಾಜಭವನ ಚಲೋ ನಡೆಸಿದರು.

ರಾಜ್ಯಪಾಲರನ್ನು ಭೇಟಿ ಮಾಡಿ, ಎನ್‌ಡಿಎ ಸದಸ್ಯರ ಮೇಲಿರುವ ಆರೋಪಗಳಿಗೂ ಪ್ರಾಸಿಕ್ಯೂಷನ್‌ಗೆ ಅವಕಾಶ ಕೊಡಿ ಎಂದು ಕೇಳಲು ಹೊರಟವರು, ದಾರಿಯುದ್ದಕ್ಕೂ ರಾಜ್ಯಪಾಲರು ತೊಲಗಲಿ ಎಂದು ಘೋಷಣೆ ಕೂಗಿದರು. ಸಿದ್ದರಾಮಯ್ಯ ನೇತೃತ್ವದ ಬಲಿಷ್ಠ ಸರ್ಕಾರವನ್ನು ಹಿಂಬಾಗಿಲಿನಿಂದ ಅಸ್ಥಿರಗೊಳಿಸಲು ಯತ್ನಿಸುತ್ತಿರು ವುದು ಕುತಂತ್ರ ಎಂದು ಟೀಕಿಸಿದರು. ನಂತರ ರಾಜಭವನಕ್ಕೆ ಧಾವಿಸಿ, ರಾಜ್ಯಪಾಲರನ್ನು ಭೇಟಿ ಮಾಡಿ ಐದು ಪುಟಗಳ ಮನವಿ ಪತ್ರ ಸಲ್ಲಿಸಿ, ಕುಮಾರಸ್ವಾಮಿ ಸೇರಿದಂತೆ ನಾಲ್ವರ ವಿರುದ್ಧವೂ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿ ಎಂದು ಮನವಿ ಮಾಡಿದರು.

**ರಾಜಭವನ ಪಕ್ಷದ ಕಚೇರಿಯಾಗ ಬಾರದು:** ರಾಜ್ಯಪಾಲರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ರಾಜ್ಯಪಾಲರ ಹುದ್ದೆ ಸಂವಿಧಾನ ನೀಡಿರುವ ಪೀಠ. ರಾಜ್ಯಪಾಲರ ಕಚೇರಿ ಒಂದು ರಾಜಕೀಯ ಪಕ್ಷದ ಕಚೇರಿ ಆಗಬಾರದು, ಹುದ್ದೆ ಘನತೆಗೆ ಧಕ್ಕೆ ಬರುವಂತೆ ನಡೆದುಕೊಳ್ಳಬಾರದು ಎಂಬುದು ನಮ್ಮ ಅಭಿಲಾಷೆ.

ರಾಜ್ಯಪಾಲರು ನಮಗೆ ಟೀ, ಕಾಫಿ ಮತ್ತು ಉಪಾಹಾರ ಕೊಟ್ಟು ಉಪಚರಿಸಿದರು, ಎಲ್ಲದಕ್ಕಿಂತ ಮುಖ್ಯವಾಗಿ ನಿಮಗೆ ನ್ಯಾಯ ನೀಡುವ ಭರವಸೆ ನೀಡಿದರು ಎಂದರು. ಲೋಕಾಯುಕ್ತ ಎಸ್‌ಐಟಿ ಅವರು ಮಾಜಿ ಮುಖ್ಯಮಂತ್ರಿ, ಹಾಲಿ ಕೇಂದ್ರ ಮಂತ್ರಿ ಕುಮಾರಸ್ವಾಮಿ ಹಾಗೂ ಮೂರು ಜನ ಮಾಜಿ ಮಂತ್ರಿಗಳ ಅಕ್ರಮಗಳ ವಿರುದ್ಧ ನ್ಯಾಯಾಲಯದ ಸೂಚನೆಯಂತೆ ಸಂಪೂರ್ಣ ತನಿಖೆ ನಡೆಸಿ ವರದಿ ನೀಡಿದ್ದಾರೆ.

ಆದರೂ, ಏನೂ ಕ್ರಮ ತೆಗೆದು ಕೊಂಡಿಲ್ಲ, ನಮ್ಮ ಮುಖ್ಯಮಂತ್ರಿಗಳ ಮೇಲೆ ಕ್ರಮ ಕೈಗೊಳ್ಳಲು ಮುಂದಾಗುವ ರಾಜ್ಯಪಾಲರು, ಅವರ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ, ತಾರತಮ್ಯ ಎಸಗಿ ನಮ್ಮ ವಿರುದ್ಧ ಕೆಲಸ ಮಾಡಿದ್ದಾರಲ್ಲವೇ.

ನಾಲ್ಕು ಜನರ ವಿರುದ್ಧ ಭ್ರಷ್ಟಾಚಾರ ವಿರೋಧಿ ಕಾಯ್ದೆ, 197 ಸಿಪಿಸಿ ಕಾಯ್ದೆ ಯಡಿ ಸೆಕ್ಷನ್ 17ಎ ಪ್ರಕಾರ ಲೋಕಾಯುಕ್ತ ಅನುಮತಿ ಕೇಳಿತ್ತು. ಆದರೂ ರಾಜ್ಯ ಪಾಲರು ಕ್ರಮ ತೆಗೆದುಕೊಳ್ಳಲಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಯಾರೋ ಅರ್ಜಿ ಕೊಟ್ಟರು ಎಂದು ಒಂದೇ ದಿನದಲ್ಲಿ ತೀರ್ಮಾನ ತೆಗೆದು ಕೊಂಡರು. ರಾಜ್ಯಪಾಲರು ಸಂವಿಧಾನದ ಪ್ರತಿನಿಧಿಯಾಗಿ ಕೆಲಸ ಮಾಡಬೇಕಿತ್ತೇ ಹೊರತು ಯಾವುದೇ ಒಂದು ರಾಜಕೀಯ ಪಕ್ಷದ ಪ್ರತಿನಿಧಿಯಾಗಿ ಅಲ್ಲ, ಹುದ್ದೆಯನ್ನು ಸಂವಿಧಾನ ರಕ್ಷಣೆಗೆ ಬಳಸಿ ಕೊಳ್ಳಬೇಕು ಎಂಬುದು ಸಾಮಾನ್ಯ ಜನರ ಅಭಿಪ್ರಾಯ. ಮುಖ್ಯಮಂತ್ರಿಗಳ ವಿರುದ್ಧ ಯಾವುದೇ ಪೂರಕ ದಾಖಲೆ ಗಳಿಲ್ಲ, ಕುಮಾರಸ್ವಾಮಿ ಸೇರಿದಂತೆ ಮೂವರು ಮಂತ್ರಿಗಳ ವಿರುದ್ಧ ದಾಖಲೆ ಇದ್ದರೂ ರಾಜ್ಯಪಾಲರು ಪಕ್ಷಪಾತ ಏಕೆ ಮಾಡಿದರು. ರಾಜ್ಯಪಾಲರ ಕಚೇರಿ ಸಮಾನತೆಗೆ ಹೆಸರಾಗಿರಬೇಕು, ಸಂವಿಧಾನಿಕ ಪೀಠಕ್ಕೆ ಇರುವ ಗೌರವ ಉಳಿಯಬೇಕು, ಅದಕ್ಕಾಗಿಯೇ ನಾವು ರಾಜಭವನ ಚಲೋ ಮಾಡಿದ್ದೇವೆ, ನ್ಯಾಯದ ಪರವಾಗಿ ಧ್ವನಿ ಎತ್ತಲು ನಾವು ಮುಂದಾಗಿದ್ದೇವೆ ಎಂದರು. ನಾವ್ಯಾರೂ ಇಲ್ಲಿ ಶಾಶ್ವತವಲ್ಲ, ರಾಜಭವನ ರಾಜಕೀಯ ಕಚೇರಿ ಆಗಬಾರದು ಎಂಬುದಷ್ಟೇ ನಮ್ಮ ಕಾಳಜಿ. ರಾಜ್ಯಪಾಲರ ಸ್ಥಾನ ಸರ್ಕಾರ ರಚನೆ ಮಾಡುವ ಪೀಠ. ಬಹುಮತದಿಂದ ಆಯ್ಕೆಯಾದ ಕಾಂಗ್ರೆಸ್ ಸರ್ಕಾರವನ್ನು ಬೀಳಿಸಲು ಹುನ್ನಾರ ಮಾಡಲಾಗುತ್ತಿದೆ, ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನ ರಾಜ್ಯಪಾಲರ ಕಚೇರಿಯಿಂದ ಆಗಬಾರದು ಎಂಬು ದಷ್ಟೇ ನಮ್ಮ ಕಾಳಜಿ ಎಂದರು.

# ನಂದಿನಿ ಹಾಲು, ಮೊಸರು ಮಾರಾಟ

ಅಂಕಿ–ಅಂಶಗಳ ಪ್ರಕಾರ, ಮದರ್ ಡೈರಿ ಪ್ರತಿದಿನ ಸುಮಾರು 10 ಲಕ್ಷ ಲೀಟರ್ ಹಸುವಿನ ಹಾಲನ್ನು ಮಾರಾಟ ಮಾಡುತ್ತದೆ. ನಾವು ಹಸುವಿನ ಹಾಲಿನ ಬ್ರಾಂಡ್ ಆಗಿದ್ದು, ದೆಹಲಿಯ ಮಾರುಕಟ್ಟೆ ಯಲ್ಲಿ ನಮಗೆ ಉತ್ತಮ ಅವಕಾಶವಿದೆ. ದಿನಕ್ಕೆ ಸುಮಾರು 25,000 ಲೀಟರ್‌ಗಳಷ್ಟು ಮೊಸರನ್ನು ಮಾರಾಟ ಮಾಡುವ ಗುರಿ ಹೊಂದಿದ್ದೇವೆ. ಚಿಲ್ಲರೆ ವ್ಯಾಪಾರಿ ಗಳ ಮೂಲಕ ಹಾಲು, ಮೊಸರನ್ನು ಮಾರಾಟ ಮಾಡುವ ಗುರಿಯನ್ನು ಹೊಂದಿದ್ದೇವೆ. ಆದರೆ ಹೆಚ್ಚಾಗಿ ಆನ್ ಲೈನ್‌ನಲ್ಲಿ ಮಾರಾಟ ಮಾಡಲಾಗುವುದು ಎಂದು ಅವರು ಹೇಳಿದರು. ಕಳೆದ ವರ್ಷಕ್ಕೆ ಹೋಲಿಸಿದರೆ ಮಾರಾಟದಲ್ಲಿ ಶೇ.20ರಷ್ಟು ಪ್ರಗತಿಯಾಗಿದೆ. ಸದ್ಯಕ್ಕೆ 1 ಕೋಟಿ ಲೀಟರ್ ಹಾಲು ಸಂಗ್ರಹವಾಗಿದ್ದು, ಮಾರಾಟದಲ್ಲಿ ದಿನಕ್ಕೆ 2–2.5 ಲಕ್ಷ ಲೀಟರ್ ಹೆಚ್ಚಳವಾಗಿದೆ. ಕಳೆದ ಕೆಲವು ತಿಂಗಳು ಗಳಿಂದ ಸಿಹಿತಿಂಡಿಗಳು ಮತ್ತು ಇತರ ಡೈರಿ ಉತ್ಪನ್ನಗಳ ಮಾರಾಟದಲ್ಲೂ ಹೆಚ್ಚಳವಾಗಿದೆ ಎಂದು ಅವರು ತಿಳಿಸಿದ್ದಾರೆ.

# ಸಿದ್ದರಾಮಯ್ಯರಿಗೆ ಸದ್ಯ ಸಮಾಧಾನ ವಿಚಾರಣೆ ನಾಳೆಗೆ

ಸುಪ್ರೀಂಕೋರ್ಟ್ ಹೇಳಿದೆ ಎಂದು ತುಷಾರ್ ಮೆಹ್ತಾ ವಾದ ಮಂಡನೆ ಮಾಡಿದರು.

ಈ ವೇಳೆ ಪತ್ನಿಯ ಮೇಲಿನ ಕ್ರಿಮಿನಲ್ ಹೊಣೆಗಾರಿಕೆ ಪತಿ ಮೇಲೆ ವರ್ಗಾಯಿಸಬಾರದು ಎಂದು ಸಿಎಂ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದರು. ಇದಕ್ಕೆ ಪ್ರತಿ ವಾದ ಮಂಡಿಸಿದ ತುಷಾರ್ ಮೆಹ್ತಾ, ಸಿಂಘ್ವಿ ಅವರ ಮಾತನ್ನು ಒಪ್ಪಿದರೆ 17ಎ ಅಡಿ ಅನುಮತಿಯೇ ಬೇಕಿಲ್ಲ ಎಂದರು.

**ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಮುಡಾ ಸಭೆಯಲ್ಲಿ ಭಾಗವಹಿಸಿದ್ದಾರೆ:** ಈ ವೇಳೆ ತುಷಾರ್ ಮೆಹ್ತಾ ಅವರು ಹೈಕೋರ್ಟ್‌ಗೆ ಲಿಖಿತ ಹೇಳಿಕೆ ಹಾಗು ರಾಜ್ಯಪಾಲರ ಕಡತವನ್ನು ಸಲ್ಲಿಸಿದರು. ಕ್ಯಾಬಿನೆಟ್ ನಿರ್ಣಯದ ಬಗ್ಗೆಯೂ ಪ್ರಸ್ತಾಪಿಸಿ ವಾದಿಸಿದರು. ಸಚಿವ ಸಂಪುಟದ ಮಂತ್ರಿಗಳನ್ನು ಸಿಎಂ ಆಯ್ಕೆ ಮಾಡುತ್ತಾರೆ. ಹೀಗಾಗಿ ತಮ್ಮನ್ನು ಆಯ್ಕೆ ಮಾಡಿದ ಸಿಎಂ ವಿರುದ್ಧ ಕ್ಯಾಬಿನೆಟ್ ನಿರ್ಣಯ ಸಾಧ್ಯವಿಲ್ಲ. ಆದ್ದರಿಂದ ಇಂತಹ ಕ್ಯಾಬಿನೆಟ್ ನಿರ್ಣಯವನ್ನು ರಾಜ್ಯಪಾಲರು ಒಪ್ಪಬೇಕಿಲ್ಲ. ಕ್ಯಾಬಿನೆಟ್ ಸೂಚನೆಯನ್ನೂ ಏಕೆ ಪಾಲಿಸಿಲ್ಲವೆಂಬುದನ್ನೂ ರಾಜ್ಯಪಾಲರು ಹೇಳಿದ್ದಾರೆ. ಮುಡಾ ಆರೋಪಗಳ ಬಗ್ಗೆಯೂ ರಾಜ್ಯಪಾಲರು ಪ್ರಸ್ತಾಪಿಸಿದ್ದಾರೆ. 40:60 ಬದಲು 50:50ಕ್ಕೆ ನಿಯಮ ಬದಲಾಯಿಸಲಾಗಿದೆ. ಸಿಎಂ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಮುಡಾ ಸಭೆಯಲ್ಲಿ ಭಾಗವಹಿಸಿದ್ದಾರೆ. ಬಹಳ ಪ್ರತಿಷ್ಠಿತ ಬಡಾವಣೆಯಲ್ಲಿ ಬದಲಿ ನಿವೇಶನ ನೀಡಲಾಗಿದೆ. ಇಷ್ಟೆಲ್ಲಾ ಅಂಶಗಳಿದ್ದರೂ ಕ್ಯಾಬಿನೆಟ್ ತಾರತಮ್ಯದ ನಿರ್ಣಯ ಕೈಗೊಂಡಿದೆ ಎಂದು ಮೆಹ್ತಾ ವಾದಿಸಿದರು.

**ರಾಜ್ಯಪಾಲರು ವಿವೇಚನೆ ಬಳಸಿರುವುದು ತಿಳಿಯುತ್ತದೆ:** ರಾಜ್ಯಪಾಲರ ಕಡತ ಗಮನಿಸಿದರೆ ವಿವೇಚನೆ ಬಳಸಿರುವುದು ತಿಳಿಯುತ್ತದೆ. ಆ.14 ರಂದೇ ಎಲ್ಲಾ ಕಡತಗಳನ್ನು ರಾಜ್ಯಪಾಲರು ಓದಿ ನೋಟ್ಸ್ ಮಾಡಿದ್ದಾರೆ. ಕ್ಯಾಬಿನೆಟ್ ಸಲಹೆಯನ್ನೂ ಪರಿಗಣಿಸಿ ವಿವರವಾದ ಪಟ್ಟಿ ತಯಾರಿಸಿದ್ದಾರೆ. ದೂರಿನ ವಿವರ, ಕ್ಯಾಬಿನೆಟ್ ಸಲಹೆ, ತಮ್ಮ ಅಭಿಪ್ರಾಯ ಎಲ್ಲವನ್ನೂ ದಾಖಲಿಸಿದ್ದಾರೆ. ರಾಜ್ಯಪಾಲರು ಎಲ್ಲವನ್ನೂ ಪರಿಶೀಲಿಸಿ ಆದೇಶಿಸಿದ್ದಾರೆ. ಇದು ತನಿಖೆಗೆ ನೀಡಿರುವ ಅನುಮತಿ ಎಂದಷ್ಟೇ ಪರಿಗಣಿಸಬೇಕು. 17ಎ ಅಡಿ ಅನುಮತಿ ನೀಡುವ ಮುನ್ನ ಇವಷ್ಟೇ ನೋಡಬೇಕು ಎಂದರು.

17ಎ ಅಡಿ ಸಹಜ ನ್ಯಾಯ ಪಾಲಿಸಬೇಕಾದರೆ ಎಫ್‌ಐಆರ್ ದಾಖಲಿಸುವ ಮುನ್ನವೂ ಪಾಲಿಸಬೇಕೇ? ಎಫ್‌ಐಆರ್ ದಾಖಲಿಸುವ ಮುನ್ನವೂ ಆರೋಪಿಯ ಹೇಳಿಕೆ ದಾಖಲಿಸಬೇಕೇ? ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಪ್ರಶ್ನಿಸಿದರು. ಅದಕ್ಕೆ 17ಎ ಮೊದಲು ಪ್ರಾಥಮಿಕ ತನಿಖೆಯೂ ಬೇಕಿಲ್ಲವೆಂಬುದೇ ನನ್ನ ವಾದ. ಎಲ್ಲದರ ವಿಚಾರಣೆ ನಡೆಸಿದರೆ ಸಾಕ್ಷ್ಯ ನಾಶವಾಗಬಹುದು. ಪೊಲೀಸರ ತನಿಖೆ ಮೇಲೆಯೂ ಇದರ ಪರಿಣಾಮವಾಗಬಹುದು ಎಂದು ತುಷಾರ್ ಮೆಹ್ತಾ ಪ್ರತಿಕ್ರಿಯಿಸಿದರು.

ಜತೆಗೆ, ರಾಜ್ಯಪಾಲರ ಒರಿಜಿನಲ್ ಫೈಲ್ ಕೋರ್ಟ್‌ಗೆ ಸಲ್ಲಿಸಿದರು. 91 ಪುಟಗಳ ಕ್ಯಾಬಿನೆಟ್ ನಿರ್ಧಾರವನ್ನು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. ಇತಿಹಾಸದಲ್ಲಿಯೇ ಇಷ್ಟು ಪುಟಗಳ ಕ್ಯಾಬಿನೆಟ್ ನಿರ್ಧಾರವನ್ನು ಯಾರೂ ತೆಗೆದುಕೊಂಡಿಲ್ಲ. ಅಡ್ವೋಕೇಟ್ ಜನರಲ್ ಅಭಿಪ್ರಾಯದ ಕಾಮಾ, ಫುಲ್ ಸ್ಟಾಪ್ ಅನ್ನೂ ಬಿಟ್ಟಿಲ್ಲ. ಕ್ಯಾಬಿನೆಟ್ ಎಲ್ಲವನ್ನೂ ಹಾಗೆಯೇ ನಿರ್ಣಯವಾಗಿ ಅಂಗೀಕರಿಸಿದೆ. ಸಿಎಂ ಪ್ರತಿಕ್ರಿಯೆಯಲ್ಲಿಯೂ ವಿವೇಚನೆ ಬಳಸಿಲ್ಲ ಸಿಎಂ ಸಹ ಎಜಿ ಅಭಿಪ್ರಾಯ, ಕ್ಯಾಬಿನೆಟ್ ನಿರ್ಣಯದ ಭಾಗಗಳನ್ನೇ ತಮ್ಮ ಪ್ರತಿಕ್ರಿಯೆ ಎಂದು ನೀಡಿದ್ದಾರೆ. ಬೆಂಗಳೂರು ಐಟಿಯ ಹೃದಯ, ಆದರೆ ಇವರು ಕಾಪಿಯನ್ನೂ ಸರಿಯಾಗಿ ಮಾಡಿಲ್ಲ. ಇದು 'ಕಲೆಕ್ಟೀವ್ ಸ್ಟುಪಿಡಿಟಿ' ಎಂಬುದು ಮೇಲ್ನೋಟಕ್ಕೇ ಕಾಣುತ್ತಿದೆ. ಭ್ರಷ್ಟಾಚಾರ ತಡೆ ಕಾಯ್ದೆಯ 17ಎ ಅಡಿ ಅನುಮತಿ ತೀರ್ಪಿನಂತಿರಬೇಕಿಲ್ಲ. ಕ್ಯಾಬಿನೆಟ್ ಮತ್ತು ಸಿಎಂ ಅವರ ಪ್ರತಿ ಸ್ಪಷ್ಟನೆಗೂ ಉತ್ತರ ನೀಡಬೇಕಿಲ್ಲ ಎಂದು ತುಷಾರ್ ಮೆಹ್ತಾ ವಾದಿಸಿದರು.

### ಸಂಪುಟದ ಸಲಹೆ ಪರಿಗಣಿಸುವಂತಿಲ್ಲ

ಮುಖ್ಯಮಂತ್ರಿಯ ವಿರುದ್ಧ ತನಿಖೆಗೆ ನಿರ್ಧರಿಸುವಾಗ ಸಚಿವ ಸಂಪುಟದ ಸಲಹೆ ಪರಿಗಣಿಸುವಂತಿಲ್ಲ. ಸಿಎಂ ಆಯ್ಕೆ ಮಾಡುವ ಸಚಿವ ಮುಖ್ಯಮಂತ್ರಿಗೆ ನಿಷ್ಠನಾಗಿರುತ್ತಾನೆ. ಮುಖ್ಯಮಂತ್ರಿಯ ವಿರುದ್ಧವೇ ಆರೋಪ ವಿದ್ದಾಗ ಅವರ ಸಲಹೆ ಪರಿಗಣಿಸಬಾರದು. ಹೀಗಾಗಿ ಕ್ಯಾಬಿನೆಟ್ ಸೂಚನೆಯನ್ನು ಕಣ್ಣೆತ್ತಿಯೂ ನೋಡುವ ಅಗತ್ಯವಿಲ್ಲ. ಆದರೂ ಕ್ಯಾಬಿನೆಟ್ ಸೂಚನೆಯನ್ನು ರಾಜ್ಯಪಾಲರು ಓದಿ, ಪರಿಶೀಲಿಸಿ ಉತ್ತರಿಸಿದ್ದಾರೆ. ಸಿಎಂ ಕ್ಯಾಬಿನೆಟ್ ಸಭೆಯಲ್ಲಿ ಭಾಗವಹಿಸಿಲ್ಲದಿರಬಹುದು. ಆದರೆ ಅವರು ನೇಮಿಸಿದ ವ್ಯಕ್ತಿಯೇ ಸಂಪುಟ ಸಭೆಯ ನೇತೃತ್ವ ವಹಿಸಿದ್ದಾರೆ. ರೂಲ್ 28ರಡಿ ಸಿಎಂ ತಮ್ಮ ಬದಲು ಡಿಸಿಎಂ ಡಿಕೆ ಶಿವಕುಮಾರ್‌ರನ್ನು ನೇಮಿಸಿದ್ದಾರೆ. ಹೀಗಾಗಿ ಅಂತಹ ಸಭೆಯ ನಿರ್ಣಯಕ್ಕೆ ಯಾವುದೇ ಮಹತ್ವವಿಲ್ಲ. ಸಚಿವ ಸಂಪುಟದ ನಿರ್ಣಯ ತಾರತಮ್ಯ ಪೂರಿತವಾಗಿರುವ ಸಾಧ್ಯತೆ ಇರುತ್ತದೆ. ಈ ವೇಳೆ ನಿರ್ಣಯ ಕೈಗೊಳ್ಳಲು ಸಿಎಂ ಅನರ್ಹವಾಗುವಂತೆ ಕ್ಯಾಬಿನೆಟ್ ನಿರ್ಣಯ ಕೂಡಾ ಅನರ್ಹಗೊಳ್ಳುತ್ತದೆ ಎಂದು ಮೆಹ್ತಾ ವಾದ ಮಂಡನೆ ಮಾಡಿದರು.

ಈ ವೇಳೆ ಮುಖ್ಯಮಂತ್ರಿಯ ಪ್ರಾಸಿಕ್ಯೂಷನ್ ವೇಳೆ ಸಚಿವ ಸಂಪುಟದ ನಿರ್ಣಯ ಬೇಕಿಲ್ಲ. ಹೀಗೆಂದು ಹಲವು ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಹೇಳಿದರು.

ಇದಾದ ನಂತರ ವಾದ ಮುಂದುವರಿಸಿದ ತುಷಾರ್ ಮೆಹ್ತಾ, ಸಿಎಂ ಪರ ಅಭಿಷೇಕ್ ಮನುಸಿಂಘ್ವಿ ಉಲ್ಲೇಖಿಸಿದ ತೀರ್ಪುಗಳು ರಾಜ್ಯಪಾಲರ ಪರವಾಗಿಯೇ ಇವೆ ಎಂದರು. ಅಲ್ಲದೇ ರಾಜ್ಯಪಾಲರ ಬಗ್ಗೆ ಕಾಂಗ್ರೆಸ್ ನಾಯಕರು ಬಳಸಿದ್ದ ಪದಗಳನ್ನೂ ಉಲ್ಲೇಖಿಸಿದರು.

ರಾಜ್ಯಪಾಲರು ತರಾತುರಿಯ ತೀರ್ಮಾನ ಕೈಗೊಂಡಿದ್ದಾರೆಂದು ಆರೋಪಿಸಲಾಗಿದೆ. ಅದು ಸುಳ್ಳು ರಾಜ್ಯಪಾಲರ ಬಗ್ಗೆಯೂ ಫ್ರೆಂಡ್ಲಿ, ಕಾಮಿಕಲ್ ಎಂಬ ಪದ ಬಳಸಲಾಗಿದೆ. ನಾನು ಸಿಎಂ ಬಗ್ಗೆ ಅಂತಹ ಪದ ಬಳಸುವುದಿಲ್ಲ. ಸಾಂವಿಧಾನಿಕ ಹುದ್ದೆಯ ಬಗ್ಗೆ ಗೌರವ ಇರಬೇಕು. ಸಾಂವಿಧಾನಿಕ ಕರ್ತವ್ಯದಲ್ಲಿರುವಾಗ ಕೆಲವೊಮ್ಮ ದೂರುಗಳಿಗೆ ಶೀಘ್ರವಾಗಿ ಸ್ಪಂದಿಸಬೇಕು. ಸಿಎಂ ಯಾವುದೇ ನಿರ್ಣಯ ಕೈಗೊಂಡಿಲ್ಲ, ಶಿಫಾರಸ್ಸು ಮಾಡಿಲ್ಲವಾದರೆ ಯಾಕೆ ಚಿಂತೆಗೊಳಗಾಗಿದ್ದಾರೆ ಎಂದು ತುಷಾರ್ ಮೆಹ್ತಾ ವಾದಿಸಿದರು.

**ಪ್ರಭುಲಿಂಗ ನಾವದಗಿ ಪ್ರಬಲ ವಾದ:** ತುಷಾರ್ ಮೆಹ್ತಾ ಮತ್ತು ಸಿಂಗ್ ವಾದ ಮುಕ್ತಾಯಗೊಳಿಸುತ್ತಿದ್ದಂತೆ ಪ್ರಭುಲಿಂಗ ನಾವದಗಿ ಅವರು ದೂರುದಾರ ಪ್ರದೀಪ್ ಕುಮಾರ್ ಪರ ವಾದ ಮಂಡಿಸಿದರು. ಈ ವೇಳೆ ಜಡ್ಜ್ ತುಂಬಾ ಜನ ವಾದ ಮಂಡನೆ ಮಾಡಿದ್ದೀರಿ, ಈ ಕೇಸ್‌ನಲ್ಲಿ ಸಿಎಂ ಪಾತ್ರದ ಬಗ್ಗೆ ಹೇಳಿ ಅವರು ಈ ಪ್ರಕರಣದಲ್ಲಿ ಹೇಗೆ ಇದ್ದಾರೆ? ಅಂತ ಪ್ರಶ್ನೆ ಮಾಡಿದರು. ಈ ವೇಳೆ ಪ್ರಕರಣದಲ್ಲಿ ಸಿಎಂ ಪಾತ್ರವಿಲ್ಲ ಎಂದು ಎಜಿ ಶಶಿಕಿರಣ್ ಶೆಟ್ಟಿ ವಾದಿಸಿದರು.

ಆದಾಗ್ಯೂ ಪ್ರಭುಲಿಂಗ ನಾವದಗಿ ವಾದ ಮುಂದು ವರಿಸಿದರು. ಮುಖ್ಯಮಂತ್ರಿಗಳ ಪಾತ್ರ, ಕ್ಯಾಬಿನೆಟ್ ನಿರ್ಣಯದ ಬಗ್ಗೆ ವಾದ ಮಂಡಿಸುತ್ತೇನೆ ಎಂದರು. ಕೆಲ ಸಂದರ್ಭಗಳಲ್ಲಿ ಕ್ಯಾಬಿನೆಟ್ ರಾಜ್ಯಪಾಲರಿಗೆ ಸಲಹೆ ನೀಡುವ ಅರ್ಹತೆ ಕಳೆದುಕೊಳ್ಳುತ್ತದೆ ಎಂದು ಆರ್.ಎಸ್.ನಾಯಕ್ ಪ್ರಕರಣ ಉಲ್ಲೇಖಿಸಿದರು. ತಮಗಿರುವ ಆಸಕ್ತಿಯ ಕಾರಣಕ್ಕೆ ಸಂಪುಟದ ಸಚಿವರು ಪ್ರಕರಣದಲ್ಲಿ ಪಕ್ಷಪಾತಿಗಳಾಗುವ ಕಾರಣದಿಂದಾಗಿ ರಾಜ್ಯಪಾಲರಿಗೆ ಸಲಹೆ ನೀಡುವ ಅಧಿಕಾರದಿಂದ ವಂಚಿತರಾಗುತ್ತಾರೆ ಎನ್ನುವ ಪೂರ್ವ ತೀರ್ಪೊಂದನ್ನು ಉಲ್ಲೇಖಿಸಿದರು. ರಾಜ್ಯಪಾಲರು ಕ್ಯಾಬಿನೆಟ್ ಸಲಹೆ ಪರಿಗಣಿಸುವ ವಿಚಾರವೇ ಇಲ್ಲ. ಸಿಎಂ ವಿರುದ್ದ ಆರೋಪ ಇದ್ದಾಗ ರಾಜ್ಯಪಾಲರು ಸ್ವತಂತ್ರವಾಗಿ ನಿರ್ಧಾರ ಮಾಡಬಹುದು ಎಂದು ಸುಪ್ರೀಂ ಕೋರ್ಟ್‌ನ ಎರಡು ತೀರ್ಪುಗಳಿವೆ ಎಂದು ಕೋರ್ಟ್ ಗಮನಕ್ಕೆ ತಂದರು.

**ಕ್ಯಾಬಿನೆಟ್ ನಿರ್ಧಾರ ಸಮಂಜಸವಲ್ಲ:** ಸಿಎಂ ಪ್ರಾಸಿಕ್ಯೂಷನ್ ವಿಚಾರದಲ್ಲಿ ಕ್ಯಾಬಿನೆಟ್ ನಿರ್ಧಾರ ಸಮಂಜಸವಲ್ಲ. ಇದರಿಂದ ಮೇಲ್ನೋಟಕ್ಕೆ ಪಕ್ಷಪಾತದ ಭಾವನೆ ಬರಲಿದೆ ಎಂದು ಸುಪ್ರೀಂ ಕೋರ್ಟ್‌ನ ಎ.ಕೆ.ಕ್ರೈಪಾಕ್ ಕೇಸ್ ಉಲ್ಲೇಖಿಸಿ ವಾದಮಂಡನೆ ಮಾಡಿದರು. ಸಂವಿಧಾನದ ವಿಧಿ 163 ಅಡಿಯಲ್ಲಿ ಸಿಎಂ ಕೂಡಾ ಕ್ಯಾಬಿನೆಟ್‌ನ ಭಾಗ. ಹೀಗಾಗಿ ಸಿಎಂ ಹೊರತಾದ ಕ್ಯಾಬಿನೆಟ್ ಇರಲು ಸಾಧ್ಯವಿಲ್ಲ. ಆದ್ದರಿಂದ ಕ್ಯಾಬಿನೆಟ್ ನಿರ್ಣಯವನ್ನು ರಾಜ್ಯಪಾಲರು ಪರಿಗಣಿಸಬೇಕಿಲ್ಲ ಎಂದು ವಾದಿಸಿದರು.

**ರಾಜ್ಯಪಾಲರ ಕ್ರಮ ಪ್ರಶ್ನಿಸಲು ಆರೋಪಿಗೆ ಅವಕಾಶವಿಲ್ಲ:** ಮುಂದುವರಿದು, 2018ರಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 17ಎ ಮತ್ತು 19ಎ ತಿದ್ದುಪಡಿ ಮಾಡಲಾಗಿದೆ. ಆದರೆ 17ಎನಲ್ಲಿ ಆರೋಪಿಗೆ ನೋಟಿಸ್ ನೀಡಲು ಅವಕಾಶವಿಲ್ಲ. 19 ಅಡಿಯಲ್ಲಿ ನೋಟಿಸ್ ನೀಡಲು ಅವಕಾಶವಿದೆ. ಆರೋಪಿಗೆ ನೋಟಿಸ್ ನೀಡಿ ತನಿಖೆಗೆ ಅವಕಾಶ ನೀಡಬಾರದು. ನೋಟಿಸ್ ನೀಡಿದರೆ ತನಿಖೆಯೇ ಪೂರ್ವಾಗ್ರಹಕ್ಕೊಳಗಾಗಲಿದೆ. 17ಎ ಹಂತದಲ್ಲಿ ರಾಜ್ಯಪಾಲರ ಕ್ರಮ ಪ್ರಶ್ನಿಸಲು ಆರೋಪಿಗೆ ಅವಕಾಶವಿಲ್ಲ. ಎಫ್‌ಐಆರ್ ದಾಖಲಾದ ಬಳಿಕಷ್ಟೇ ಆರೋಪಿಗೆ ಅದನ್ನು ಪ್ರಶ್ನಿಸುವ ಹಕ್ಕು ಬರಲಿದೆ ಎಂದು ಪ್ರಬಲ ವಾದ ಮಂಡನೆ ಮಾಡಿದರು.

**ಸರ್ಕಾರಕ್ಕೆ ತನಿಖೆಯ ಅವಶ್ಯಕತೆ ಇದೆ ಅನಿಸಿದೆ:** ತನಿಖೆಗೆ ಕೊಟ್ಟ ಆದೇಶದಲ್ಲೇ ರಾಜ್ಯಪಾಲರು ಉಲ್ಲೇಖ ಮಾಡಿದ್ದಾರೆ. ಮೇಲ್ನೋಟಕ್ಕೆ ಇದರಲ್ಲಿ ಅಕ್ರಮ ನಡೆದಿದೆ ಎಂದು ಆದೇಶ ಪ್ರತಿಯಲ್ಲಿ ಉಲ್ಲೇಖ ಮಾಡಿದ್ದಾರೆ. ಸರ್ಕಾರಕ್ಕೆ ತನಿಖೆಯ ಅವಶ್ಯಕತೆ ಇದೆ ಅನಿಸಿದೆ. ಹೀಗಾಗಿ ನ್ಯಾಯಾಂಗ ತನಿಖೆಗೆ ಆದೇಶವನ್ನು ನೀಡಿದ್ದಾರೆ. ನಿವೃತ್ತ ನ್ಯಾಯಾಧೀಶ ದೇಸಾಯಿ ಅವರ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ ಎಂದರು. ಇದೇ ವೇಳೆ ಮುಡಾ ಅಕ್ರಮ ತನಿಖೆಗಾಗಿ ನೇಮಿಸಲಾಗಿರುವ ಏಕಸದಸ್ಯ ಆಯೋಗ ಮತ್ತು ತನಿಖಾ ತಂಡದ ಕಾರ್ಯವ್ಯಾಪ್ತಿಯಲ್ಲಿ ನಿಯಮ 6,7,8ರ ಬಗ್ಗೆ ಆಕ್ಷೇಪಣೆಗಳ ಬಗ್ಗೆ ನಾವದಗಿ ನ್ಯಾಯಾಲಯದ ಗಮನ ಸೆಳೆದರು. ಮೇಲ್ನೋಟಕ್ಕೆ ಅಕ್ರಮವನ್ನು ಪರಿಗಣಿಸಲಾಗಿದೆ ಎನ್ನುವ ಅಂಶ ಸರ್ಕಾರದ ಆದೇಶಗಳಲ್ಲಿ ಇರುವ ಬಗ್ಗೆಯೂ ನ್ಯಾಯಾಧೀಶರ ಗಮನಕ್ಕೆ ತಂದರು.

ರಾಜ್ಯಪಾಲರು ಕಾರ್ಯವಿಧಾನ ಅನುಸರಿಸಿಲ್ಲ ಎನ್ನುವುದು ಬೇರೆ, ಅದರೆ ವಿವೇಚನೆ ಬಳಸಿಲ್ಲ ಎನ್ನಲಾಗದು. ತನಿಖೆಗೆ ನೇಮಿಸಿರುವ ಸರ್ಕಾರದ ಆದೇಶಗಳನ್ನು ರಾಜ್ಯಪಾಲರು ಗಮನಿಸಿದ್ದಾರೆ, ಹಾಗಾಗಿ ಅವರು ವಿವೇಚನೆ ಬಳಸಿಲ್ಲ ಎನ್ನಲಾಗದು ಎಂದು ವಾದಿಸಿದರು. ನಾವದಗಿ ಅವರ ಬಳಿಕ ದೂರುದಾರ ಟಿ.ಜೆ. ಅಬ್ರಹಾಂ ಪರ ಹಿರಿಯ ವಕೀಲ ರಂಗನಾಥ್ ರೆಡ್ಡಿ ವಾದ ಮಂಡಿಸಿದರು.

### ನ್ಯಾಯಾಧೀಶರು ಗರಂ

ದೂರುದಾರ ಟಿ.ಜೆ.ಅಬ್ರಹಾಂ ಪರ ಹಿರಿಯ ವಕೀಲ ರಂಗನಾಥ್ ರೆಡ್ಡಿ ವಾದ ಮುಗಿಸುತ್ತಿದ್ದಂತೆ ಮತ್ತಷ್ಟು ವಕೀಲರಿಂದ ವಾದ ಮಂಡನೆಗೆ ಮನವಿ ಮಾಡಲಾಯಿತು. ಇದಕ್ಕೆ ಇಡೀ ದಿನ ವಾದ ಮಂಡನೆಗೆ ಅವಕಾಶ ಕೊಟ್ಟಿದ್ದೀನಿ ಎಂದು ನ್ಯಾಯಾಧೀಶರು ಗರಂ ಆದರು. ಈ ವೇಳೆ ಮಧ್ಯಪ್ರವೇಶಿಸಿದ ಅಬ್ರಹಾಂ ಪರ ವಕೀಲರಾದ ರಂಗನಾಥ್ ರೆಡ್ಡಿ, ರಾಜ್ಯಪಾಲರ ಮುಂದೆ ಯಾವುದೇ ಜನಪ್ರತಿನಿಧಿಗಳ ಪ್ರಾಸಿಕ್ಯೂಷನ್ ಅನುಮತಿ ಬಾಕಿ ಇಲ್ಲ ಎಂದು ಹೇಳಿದರು. ಅದಕ್ಕೆ ನಿಮಗೆ ಹೇಗೆ ಗೊತ್ತಾಯ್ತು? ಅಂತ ಜಡ್ಜ್ ಪ್ರಶ್ನೆ ಮಾಡಿದರು. ಇದಕ್ಕೆ ಉತ್ತರಿಸಿದ ರಂಗನಾಥ್ ರೆಡ್ಡಿ ಅವರು ಆರ್‌ಟಿಐ ಮೂಲಕ ಮಾಹಿತಿ ಪಡೆದುಕೊಳ್ಳಲಾಗಿದೆ. ಎಲ್ಲಾ ಅರ್ಜಿಗಳನ್ನ ವಿಲೇವಾರಿ ಮಾಡಲಾಗಿದೆ. ರಾಜ್ಯಪಾಲರ ಮುಂದೆ ಸದ್ಯ ಯಾವುದೇ ಪ್ರಾಸಿಕ್ಯೂಷನ್ ಮನವಿ ಅರ್ಜಿ ಬಾಕಿ ಇಲ್ಲ ಎಂದು ವಾದ ಮಂಡಿಸಿದರು.

# ದಸರಾ ಉದ್ಘಾಟನೆಗೆ ಸುತ್ತೂರು ಶ್ರೀಗಳ ಆಹ್ವಾನಿಸಲು ಮನವಿ



ಸುತ್ತೂರು ಶ್ರೀಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಜನ್ಮದಿನದ ಅಂಗವಾಗಿ 30ಕ್ಕೂ ಹೆಚ್ಚು ಭಕ್ತಾದಿಗಳು ಸ್ವಯಂಪ್ರೇರಿತ ರಕ್ತದಾನ ಮಾಡಿದರು.

ಮೈಸೂರು, ಆ. 31–ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರದಲ್ಲಿ ಶ್ರೀಕ್ಷೇತ್ರ ಸುತ್ತೂರು ಶ್ರೀಮಠದ ಮಹಾಸಂಸ್ಥಾನಾಧೀಶರಾದ ಡಾ. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಜನ್ಮದಿನದ ಅಂಗವಾಗಿ 30ಕ್ಕೂ ಹೆಚ್ಚು ಭಕ್ತಾದಿಗಳು ಸ್ವಯಂಪ್ರೇರಿತ ರಕ್ತದಾನ ಮಾಡುವ ಮೂಲಕ ಶ್ರೀಗಳ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ನಂತರ ಮಾತನಾಡಿದ ಕೇಂದ್ರದ ನಿರ್ದೇಶಕ ಗಿರೀಶ್, ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಈಗಾಗಲೇ ಎರಡು ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ. ಅದರಂತೆ ನಾವು ಸಹ ಈ ಬಾರಿ ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟನೆಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಆಹ್ವಾನಿಸುವಂತೆ ಸರ್ಕಾರಕ್ಕೆ ಮನವಿ ಮಾಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷ ರೇಣುಕಾರಾಜ್, ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್, ಬಿಜೆಪಿ ಯುವ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿ ಲೋಹಿತ್, ಜಿ.ರಾಘವೇಂದ್ರ, ಮಹೇಂದ್ರ ಶೈವ, ಮಧು ಕುಮಾರ್, ಸದಾಶಿವ, ರಶ್ಮಿ, ರಘು, ಜೀವಧಾರ ರಕ್ತನಿಧಿ ಕೇಂದ್ರದ ಸಿಬ್ಬಂದಿ ವರ್ಗ ಹಾಜರಿದ್ದರು.

# ಆರೋಗ್ಯ ಕಾರ್ಯಕ್ರಮ ಅನುಷ್ಠಾನದಲ್ಲಿ ಗರಿಷ್ಠ ಸಾಧನೆ ಆಗಬೇಕು

## ಅಧಿಕಾರಿಗಳಿಗೆ ಮೈಸೂರು ಜಿಪಂ ಸಿಇಒ ಕೆ.ಎಂ.ಗಾಯತ್ರಿ ತಾಕೀತು




ಆರ್‌ಬಿಎಸ್‌ಕೆ ಕಾರ್ಯಕ್ರಮದ ವೈದ್ಯರ ತಂಡಕ್ಕೆ ಸ್ವಾಸ್ಥ್ಯಕಿರಣ ತಂತ್ರಾಂಶದ ನಿರ್ವಹಣೆಗಾಗಿ ಲ್ಯಾಪ್‌ಟಾಪ್ ವಿತರಿಸಲಾಯಿತು.

ಮೈಸೂರು, ಆ.31–ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಜಿಲ್ಲೆಯ ಪ್ರಗತಿ ಉತ್ತಮವಾಗಿದ್ದು, ಸೆಪ್ಟೆಂಬರ್ ಅಂತ್ಯಕ್ಕೆ ಎಲ್ಲಾ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಶೇ.100ರಷ್ಟು ಪ್ರಗತಿ ಸಾಧಿಸುವ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ 2024–25ನೇ ಸಾಲಿನ ಆರ್ಥಿಕ ವರ್ಷದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2024–25ನೇ ಸಾಲಿನ ಜುಲೈ ಅಂತ್ಯಕ್ಕೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಪರಿಶೀಲನೆ ಮಾಡಿದರು.

**ಶೇ.100 ಲಸಿಕಾಕರಣಕ್ಕೆ ಸೂಚನೆ:** ಜಿಲ್ಲಾ ಆರೋಗ್ಯ ಸೊಸೈಟಿಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಡಳಿತಾತ್ಮಕ ವಿಷಯಗಳಿಗೆ ಅನುಮೋದನೆ ನೀಡಿ, ಸಮುದಾಯ ಮಟ್ಟದಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳ ಸವಲತ್ತು ಮತ್ತು ಸೌಲಭ್ಯಗಳ ಬಗ್ಗೆ ಹಾಗೂ ತಾಯಿ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಹೈರಿಸ್ಕ್ ಮತ್ತು ಸಾಮಾನ್ಯ ಗರ್ಭಿಣಿ ಮಹಿಳೆಯರು ಮತ್ತು ಬಾಣಂತಿಯರ ಭೇಟಿ, ಪಿ.ಎಂ.ಎಸ್.ಎಂ.ಎ ಕಾರ್ಯಕ್ರಮ, ಮಕ್ಕಳ ಆರೋಗ್ಯ ಕಾರ್ಯಕ್ರಮಡಡಿಯಲ್ಲಿ ಸಮುದಾಯ ಮಟ್ಟದಲ್ಲಿ ನವಜಾತ ಶಿಶುಗಳ ಆರೈಕೆ, ಸಮುದಾಯ ಮಟ್ಟದಲ್ಲಿ ಮಕ್ಕಳ ಆರೈಕೆ, ರಾಷ್ಟ್ರೀಯ ಲಸಿಕಾ ಕಾರ್ಯಕ್ರಮದಡಿಯಲ್ಲಿ ಲಸಿಕೆಯಿಂದ ವಂಚಿತವಾಗದಂತೆ ಶೇ.100ರಷ್ಟು ಲಸಿಕಾಕರಣ ಮಾಡಬೇಕು ಎಂದು ಹೇಳಿದರು.

**ಕ್ಷಯರೋಗಕ್ಕೆ ಚಿಕಿತ್ಸೆ:** ಬಾಲ್ಯವಿವಾಹ ಕಾಯ್ದೆ, ಭ್ರೂಣಹತ್ಯೆ ಹಾಗೂ ಪೋಕ್ಸೋ ಕಾಯ್ದೆ, ಕುಟುಂಬ ಕಲ್ಯಾಣ ನಿಯಂತ್ರಣ ಕಾರ್ಯಕ್ರಮದಲ್ಲಿ ಸಂತಾನಹರಣ ಚಿಕಿತ್ಸೆ, ಸಮುದಾಯ ಮಟ್ಟದಲ್ಲಿ ಶೀಘ್ರಗತಿಯಲ್ಲಿ ಕ್ಷಯರೋಗ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡಬೇಕು. ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಹಿರಿಯ ನಾಗರಿಕರಿಗೆ ಉಚಿತ ಕನ್ನಡಕ ವಿತರಣೆ, ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ಹರಡುವಿಕೆ ಹಾಗೂ ಮುನ್ನೆಚ್ಚರಿಕೆಯ ಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಫ್ಲೋರೋಸಿಸ್ ಕಾರ್ಯಕ್ರಮಡಡಿಯಲ್ಲಿ ಗ್ರಾಮ ಪಂಚಾಯಿತಿ ಸಮನ್ವಯತೆಯೊಂದಿಗೆ ಫ್ಲೋರೋಸಿಸ್ ಪ್ರಮಾಣದ ಬಗ್ಗೆ ಪರೀಕ್ಷೆ ನಡೆಸುವ ಹಿನ್ನೆಲೆಯಲ್ಲಿ ಎಲ್ಲಾ ಗ್ರಾಮಗಳಲ್ಲಿ ನೀರಿನ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆ ಮಾಡಲು ಸೂಚಿಸಿದರು.

**ಆರೋಗ್ಯ ತಪಾಸಣೆ:** ಜಿಲ್ಲೆಯಲ್ಲಿ ಕಾರ್ಯ ನಿರತವಾಗಿರುವ District early intervention centre ಕಾರ್ಯಕ್ರಮಗಳ ಸಮನ್ವಯ ಹಾಗೂ ಶಾಲೆಗಳಲ್ಲಿ ಕ್ರಮಬದ್ಧವಾಗಿ ಆರೋಗ್ಯ ತಪಾಸಣೆ ನಡೆಸಿ, ಅಂಧತ್ವ ಮಕ್ಕಳನ್ನು ಗುರುತಿಸಿ ಸೂಕ್ತ ಚಿಕಿತ್ಸೆ ನೀಡಲು ಕ್ರಮವಹಿಸಬೇಕು. ಗ್ರಾಪಂಗಳಲ್ಲಿ ಆರೋಗ್ಯ ಕಾರ್ಯಕ್ರಮಗಳಿಗೆ ಮೀಸಲಿರುವ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಗ್ರಾಮ ವ್ಯಾಪ್ತಿಯಲ್ಲಿ ಇತರ ಇಲಾಖೆಗಳ ಸಮನ್ವಯತೆಯಿಂದ ಹಾಗೂ ಎಲ್ಲಾ ಕಂದಾಯ ಗ್ರಾಮಗಳಲ್ಲಿ ರಚನೆಯಾಗಿರುವ ವಿ.ಹೆಚ್.ಎಸ್.ಎನ್.ಸಿ. ಸಮಿತಿಗಳ ಮೂಲಕ ಹೆಚ್ಚಿನ ರೀತಿಯಲ್ಲಿ ಪ್ರಚಾರ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

**ಮಕ್ಕಳಿಗೆ ಶಸ್ತ್ರಚಿಕಿತ್ಸೆ:** ಆರ್.ಬಿ.ಎಸ್.ಕೆ ಕಾರ್ಯಕ್ರಮದ ಸ್ವಾಸ್ಥ್ಯಕಿರಣ ತಂತ್ರಾಂಶದಲ್ಲಿ ಸುಮಾರು 1,21,412 ಮಕ್ಕಳು ನೊಂದಣಿಯಾಗಿದ್ದು, ಈ ಪೈಕಿ 99,628 ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸಲಾಗಿದೆ. 31,624 ಮಕ್ಕಳನ್ನು ವಿವಿಧ ಹಂತ ಆಸ್ಪತ್ರೆಗಳಿಗೆ ಹೆಚ್ಚಿನ ಚಿಕಿತ್ಸೆಗೆ ಶಿಫಾರಸ್ಸು ಮಾಡಲಾಗಿದ್ದು, 710 ಮಕ್ಕಳಿಗೆ ಪ್ರಸ್ತುತ ಚಿಕಿತ್ಸೆ ನೀಡಲಾಗುತ್ತಿದೆ. ಸುಮಾರು 27 ಮಕ್ಕಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದು ವಿವರಿಸಲಾಯಿತು. ಇದೇ ಸಂದರ್ಭದಲ್ಲಿ ಆರ್.ಬಿ.ಎಸ್.ಕೆ ಕಾರ್ಯಕ್ರಮದ ವೈದ್ಯರ ತಂಡಕ್ಕೆ ಸ್ವಾಸ್ಥ್ಯಕಿರಣ ತಂತ್ರಾಂಶದ ನಿರ್ವಹಣೆಗಾಗಿ ಲ್ಯಾಪ್‌ಟಾಪ್ ಗಳನ್ನು ವಿತರಣೆ ಮಾಡಲಾಯಿತು.

ಸಭೆಯಲ್ಲಿ ಡಿಹೆಚ್ಓ ಡಾ.ಪಿ.ಸಿ. ಕುಮಾರಸ್ವಾಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಆರೋಗ್ಯ ಇಲಾಖೆಯ ಎಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ಎಲ್ಲಾ ತಾಲೂಕುಗಳ ತಾಲೂಕು ಆರೋಗ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಮ್ಮು–ಕಾಶ್ಮೀರದಲ್ಲಿ ನೆಮ್ಮದಿ ನೆಲೆಸಿದೆ

## ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಸಂತಸ

**ಹೊಳೆನರಸೀಪುರ:** ಜಮ್ಮು ಕಾಶ್ಮೀರದಲ್ಲಿ 370ನೇ ವಿಧಿ ರದ್ದುಪಡಿಸಿದ ಬಳಿಕ, ಉಗ್ರಗಾಮಿಗಳ ಅಟ್ಟಹಾಸ ಕಡಿಮೆಯಾಗಿದ್ದು, ಜನಸಾಮಾನ್ಯರು ನೆಮ್ಮದಿಯಿಂದ ಓಡಾಡುತ್ತಿದ್ದಾರೆ. ಈಗ ಅಲ್ಲಿ ಚುನಾವಣೆ ನಡೆಯುತ್ತಿದ್ದು, ಜನರು ಯಾರಿಗೆ ಮತ ಹಾಕುತ್ತಾರೆಯೋ ಬಿಡುತ್ತಾರೆಯೋ ಕೇಳಬಾರದು. ಪ್ರಧಾನಿ ಮೋದಿ ಒಳ್ಳೆಯ ಕೆಲಸ ಮಾಡಿದ್ದು, ಜನ ನೆಮ್ಮದಿಯಿಂದಿರಲು ಮತ ಚಲಾಯಿಸುತ್ತಾರೆ ಎಂದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಪ್ರತಿಪಾದಿಸಿದರು.



ಇಲ್ಲಿನ ಮಾವಿನಕೆರೆ ಬೆಟ್ಟದಲ್ಲಿ ರಂಗನಾಥಸ್ವಾಮಿಗೆ ಶನಿವಾರ ವಿಶೇಷ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಈಗ ಜಮ್ಮು ಕಾಶ್ಮೀರಕ್ಕೆ ಹೆಚ್ಚು ಪ್ರವಾಸಿಗರು ಬರುತ್ತಿದ್ದಾರೆ. ಮೋದಿ ಮತ್ತು ಅಮಿತ್ ಶಾ ಹಣ ನೀಡುವುದರೊಂದಿಗೆ ಅಕ್ರಮವನ್ನು ನಿಯಂತ್ರಿಸಿದ್ದಾರೆ ಎಂದರು.

ಕಾಶ್ಮೀರದಲ್ಲಿರುವ ಶಿವನ ದೇವಾಲಯಕ್ಕೆ 230 ಮೆಟ್ಟಿಲು ಇವೆ. ನಾನು 30 ಮೆಟ್ಟಿಲುಗಳನ್ನು ಹತ್ತಿದೆ. ನಂತರ ಸಿಆರ್‌ಪಿಎಫ್ ಯೋಧರು ದೇವಾಲಯಕ್ಕೆ ಕರೆದುಕೊಂಡು ಹೋದರು. ನಾಥ ದ್ವಾರದಲ್ಲಿ ಕೃಷ್ಣನ ದೇವಾಲಯವಿದ್ದು, ಅಲ್ಲಿಗೂ ಹೋಗಿದ್ದೆ. ವಿಶೇಷ ಪೂಜೆ ಸಲ್ಲಿಸಿದೆ ಎಂದರು.

ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ವಿದ್ಯಮಾನಗಳ ಬಗ್ಗೆ ಸಮಯ ಬಂದಾಗ ಮಾತನಾಡುತ್ತೇನೆ. ಹಾಸನಕ್ಕೆ ಬರುತ್ತೇನೆ. ರಾಜ್ಯದಾದ್ಯಂತ ಪ್ರವಾಸ ಮಾಡುತ್ತೇನೆ ಎಂದು ಹೇಳಿದರು.

ಮಂಡಿ ನೋವು ಬಿಟ್ಟರೆ ನನಗೆ ಬೇರೆ ಆರೋಗ್ಯ ಸಮಸ್ಯೆ ಇಲ್ಲ. ರಂಗನಾಥ ಆಶೀರ್ವಾದದಿಂದ ಇನ್ನೂ ನಾಲ್ಕಾರು ವರ್ಷ ರಾಜಕೀಯ ಮಾಡುತ್ತೇನೆ. ಕಾಂಗ್ರೆಸ್‌ನಿಂದ ರಾಜಭವನ ಚಲೋ ವಿಚಾರವಾಗಿ ಈಗ ನಾನು ಮಾತನಾಡುವುದಿಲ್ಲ. ಮುಂದೆ ಮಾತನಾಡುವ ಕಾಲ ಬರುತ್ತದೆ. ನಿಮ್ಮ ಮುಂದೆ ಬರುತ್ತೇನೆ ಎಂದರು.

# ಅಭಿಮನ್ಯುಗೆ ಇಂದಿನಿಂದ ಭಾರ ಹೊರುವ ತಾಲೀಮು



ಮೈಸೂರು, ಆ.31(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಗಜಪಡೆಯ ನಾಯಕ ಅಭಿಮನ್ಯುಗೆ ಭಾನುವಾರ(ಸೆ.1)ದಿಂದ ಭಾರ ಹೊರುವ ತಾಲೀಮು ಆರಂಭಿಸಲಾಗುತ್ತಿದ್ದು, ಹಂತ ಹಂತವಾಗಿ ಚಿನ್ನದ ಅಂಬಾರಿ ಹೊರುವ ಸಾಮರ್ಥ್ಯಕ್ಕೆ ಅನುಗುಣವಾಗಿ ಭಾರ ಹೊರಿಸಿ ತರಬೇತಿ ನೀಡಲಾಗುತ್ತದೆ.

ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯ ಮುಂಭಾಗ ನಾಳೆ ಬೆಳಿಗ್ಗೆ 7.15ಕ್ಕೆ ಗಂಡು, ನಮ್ಮೂ ಹಾಗೂ ತೊಟ್ಟಿಲಿಗೆ ಪೂಜೆ ಸಲ್ಲಿಸಿ ಅಂಬಾರಿ ಆನೆ ಅಭಿಮನ್ಯು ಕುಮ್ಕಿ ಆನೆಗಳಾದ ಲಕ್ಷ್ಮೀ ಹಾಗೂ ವರಲಕ್ಷ್ಮೀ ಆನೆಗೆ ಪೂಜೆ ಸಲ್ಲಿಸಲಾಗುತ್ತದೆ. ಅರ್ಚಕ ಎಸ್.ವಿ.ಪ್ರಹ್ಲಾದ್ ರಾವ್ ಅವರ ನೇತೃತ್ವದಲ್ಲಿ ಅಭಿಮನ್ಯುಗೆ ಪೂಜೆ ಸಲ್ಲಿಸಿ ತೂಕದ ತಾಲೀಮಿಗೆ ಚಾಲನೆ ನೀಡಲಾಗುತ್ತದೆ. ನಾಳೆ ಕೇವಲ ತೊಟ್ಟಿಲನ್ನು ಹೊತ್ತುಕೊಂಡು ತಾಲೀಮಿನಲ್ಲಿ ಅಭಿಮನ್ಯು ನೇತೃತ್ವದ ಗಜಪಡೆ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಹೆಜ್ಜೆ ಹಾಕಲಿದೆ. ಮೂರ್ನಾಲ್ಕು ದಿನದ ನಂತರ ಮರಳಿನ ಮೂಟೆ ಹೊರಿಸಿ ತಾಲೀಮು ನಡೆಸಲಾಗುತ್ತದೆ.

ಸೆ.10ರ ನಂತರ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಗುತ್ತದೆ. ತಿಂಗಳಾಂತ್ಯದ ವೇಳೆಗೆ ಮರದ ಅಂಬಾರಿ, ಗಾದಿ, ನಮ್ದಾ ಸೇರಿ ಸಾವಿರ ಕೆಜಿ ತೂಕ ಹೊರುವ ಸಾಮರ್ಥ್ಯದೊಂದಿಗೆ ತಾಲೀಮು ನಡೆಸಿ ಜಂಬೂಸವಾರಿಗೆ ಗಜಪಡೆಯನ್ನು ಸಜ್ಜುಗೊಳಿಸಲಾಗುತ್ತದೆ.

## 'ಇಂಡಿಯಾ ಟ್ರೋಫಿ' ಪ್ರದಾನ...



ಜಪಾನ್‌ನ ಸಪ್ಪೋರೋ ರೇಸ್ ಕೋರ್ಸ್‌ನಲ್ಲಿ ನಡೆದ 40ನೇ ಏಷಿಯನ್ ರೇಸಿಂಗ್ ಕಾನ್ಫರೆನ್ಸ್‌ನಲ್ಲಿ ಟರ್ಫ್ ಅಥಾರಿಟೀಸ್ ಆಫ್ ಇಂಡಿಯಾ ಮತ್ತು ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ಕೆ.ಎಂ.ಚಂದ್ರೇಗೌಡ 'ಇಂಡಿಯಾ ಟ್ರೋಫಿ' ಪ್ರದಾನ ಮಾಡಿದರು. ಈ ವೇಳೆ ಮೈಸೂರು ರೇಸ್ ಕ್ಲಬ್ ಸ್ಟೀವರ್ಡ್ ಹೆಚ್.ಕೆ. ರಮೇಶ್, ಮೈಸೂರು ರೇಸ್ ಕ್ಲಬ್ ಚೀಫ್ ವೆಟರಿನರಿ ಆಫೀಸರ್ ಡಾ. ಸಿ.ವಿ.ನಿರಂಜನ್, ಟರ್ಫ್ ಅಥಾರಿಟೀಸ್ ಆಫ್ ಇಂಡಿಯಾ ಪ್ರಧಾನ ಕಾರ್ಯದರ್ಶಿ ಮತ್ತು ಹ್ಯಾಂಡಿಕ್ಯಾಪರ್ ಆಫ್ ಮೈಸೂರು ರೇಸ್ ಕ್ಲಬ್ ಡಾ.ಎಂ.ಆರ್. ಜಗನ್ನಾಥ್ ಅವರನ್ನು ಚಿತ್ರದಲ್ಲಿ ಕಾಣಬಹುದು.

# 17 ಸ್ವ–ಸಹಾಯ ಗುಂಪುಗಳಿಗೆ 1.60 ಕೋಟಿ ರೂ. ಕ್ರೆಡಿಟ್ ಸಂಪರ್ಕ



ಕೆನರಾ ಬ್ಯಾಂಕ್ ಚಾಮುಂಡಿಪುರಂ ಶಾಖೆಯಿಂದ ಸ್ವ–ಸಹಾಯ ಗುಂಪುಗಳಿಗೆ ಚೆಕ್ ವಿತರಿಸಲಾಯಿತು.

ಮೈಸೂರು,ಆ.31(ಎಂಕೆ)–ನಗರಪಾಲಿಕೆ ಡೇ–ನಲ್ಮ್ ವಿಭಾಗದ ವತಿಯಿಂದ ಕೆನರಾ ಬ್ಯಾಂಕ್ ಚಾಮುಂಡಿಪುರಂ ಶಾಖೆ ಸಹಯೋಗದೊಂದಿಗೆ 17 ಸ್ವ–ಸಹಾಯ ಗುಂಪುಗಳಿಗೆ 1.60 ಕೋಟಿ ರೂ.ಗಳ ಕ್ರೆಡಿಟ್ ಸಂಪರ್ಕ ಕಲ್ಪಿಸಿಕೊಡಲಾಯಿತು.

ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ ಉಪ ಘಟಕದಡಿ ರಚಿಸಲ್ಪಟ್ಟ ಸ್ವ–ಸಹಾಯ ಗುಂಪುಗಳಿಗೆ ಬ್ಯಾಂಕ್ ಕ್ರೆಡಿಟ್ ಸಂಪರ್ಕ ಕಲ್ಪಿಸುವ ಕಾರ್ಯಕ್ರಮದಲ್ಲಿ ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಕುಸುಮ ಕುಮಾರಿ ಚೆಕ್ ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ನಗರಪಾಲಿಕೆಯ ಡೇ–ನಲ್ಮ್ ಅಭಿಯಾನದ ಕಾರ್ಯಕ್ರಮದಡಿ ರಚನೆಗೊಂಡಿರುವ ಸ್ವ–ಸಹಾಯ ಗುಂಪುಗಳಿಗೆ ಬ್ಯಾಂಕ್‌ಗಳ ಸಹಯೋಗದಲ್ಲಿ ಸಾಲ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. ಈ ಪ್ರಯೋಜನವನ್ನು ಗುಂಪುಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಕೆನರಾ ಬ್ಯಾಂಕ್ ಆರ್.ಓ ಸಂದೀಪ್ ಪಾಂಡೆ, ಡೇ–ನಲ್ಮ್ ಅಭಿಯಾನ ವ್ಯವಸ್ಥಾಪಕ ಡಾ.ಜೆ.ಎಸ್. ಬೈರಲಿಂಗಯ್ಯ, ಡಾ.ಕಾಂತರಾಜು ಇದ್ದರು.

# ಮಹಾ ರುದ್ರಾಕ್ಷ ಪ್ರದರ್ಶನ, ಮಾರಾಟ



ಮೈಸೂರು, ಆ.31(ಜಿಎಲ್‌ಎಯ್)– ನಗರದ ಹೋಟೆಲ್ ಸಿಪಾಯಿ ಗ್ರಾಂಡ್‌ಯಲ್ಲಿ ಶ್ರಾವಣ ಮಾಸದ ಪ್ರಯುಕ್ತ ಮಹಾ ರುದ್ರಾಕ್ಷ ಪ್ರದರ್ಶನ ಮತ್ತು ಮಾರಾಟ ಆಯೋಜಿಸಲಾಗಿದೆ. ಆಗಸ್ಟ್ 25ರಿಂದ ಆರಂಭವಾಗಿರುವ ಮಹಾ ರುದ್ರಾಕ್ಷ ಪ್ರದರ್ಶನ ಮತ್ತು ಮಾರಾಟ ನಾಳೆ (ಸೆಪ್ಟೆಂಬರ್ 1)ವರೆಗೆ ಇದೆ. ಜಗತ್ತಿನ ಅತ್ಯಂತ ಅಪರೂಪದ ದುಂಡುಮುಖದ ಒಂದು ಮುಖಿ ರುದ್ರಾಕ್ಷಿ ಸೇರಿದಂತೆ ಹಲವು ರೀತಿಯ ರತ್ನದ ಹರಳುಗಳು ದೊರೆಯಲಿವೆ. ಶ್ರಾವಣ ಮಾಸದಲ್ಲಿ ರುದ್ರಾಕ್ಷಿ ಧರಿಸುವುದು ಶುಭದಾಯಕವಾಗಿರುವ ಕಾರಣ ಪ್ರದರ್ಶನ ಮತ್ತು ಮಾರಾಟ ಆಯೋಜಿಸಲಾಗಿದೆ. ಯಾರು, ಯಾವಾಗ ಧರಿಸಬೇಕು ಎಂಬ ಬಗ್ಗೆ ಪಂಚಾಂಗ ಹಾಗೂ ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮ ರಾಶಿ ಮತ್ತು ಜನ್ಮ ನಕ್ಷತ್ರದ ಆಧಾರದ ಮೇಲೆ ಇಂಡಿಕ್–ನೇಪಾಳ ಸಂಸ್ಥೆ ನಿರ್ದೇಶಕ ನರೇಂದ್ರ ಕಾಶಿ ರೆಡ್ಡಿ ತಿಳಿಸುತ್ತಾರೆ.

# ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಶಂಕಿತ ಉಗ್ರ ಅರೆಸ್ಟ್

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶಂಕಿತ ಉಗ್ರನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ.

ಬಂಧಿತ ಶಂಕಿತನನ್ನು ಅಜೀಜ್ ಅಹ್ಮದ್ ಎಂದು ಗುರುತಿಸಲಾಗಿದೆ. ಶಂಕಿತ ಉಗ್ರ ಕುಕ್ಕರ್ ಬಾಂಬ್ ಪ್ರಕರಣದ ಆರೋಪಿ ಎಂದು ಶಂಕಿಸಲಾಗಿದೆ. ಬೆಂಗಳೂರು ವಿಮಾನ ನಿಲ್ದಾಣದಿಂದ ಸೌದಿಯ ಜೆದ್ದಾಗೆ ಹೋಗಬೇಕಿದ್ದ ವೇಳೆ ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ. ಇಮಿಗ್ರೇಷನ್ ಅಧಿಕಾರಿಗಳು ನೀಡಿದ ಮಾಹಿತಿ ಮೇರೆಗೆ ಎನ್‌ಐಎ ಅಧಿಕಾರಿಗಳು ಶಂಕಿತನನ್ನು ಬಂಧಿಸಿದ್ದಾರೆ. ಈತ ತಮಿಳುನಾಡಿನ ಹಿಜ್ಬ್–ಉತ್–ತಹ್ರೀರ್ ಪ್ರಕರಣದ ಆರೋಪಿ ಎನ್ನಲಾಗಿದೆ.

## ಅಂಬ ತಾಯಿ ಮಟ್ಟಿ ಪೂಜೆ...



ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ಪೈಲ್ವಾನ್ ವಸ್ತಾದ್ ನಿಂಗೇಗೌಡರು 10 ಜನ ಗರಡಿ ಪೈಲ್ವಾನ್ ಹುಚ್ಚಯ್ಯನವರ ಗರಡಿಯಲ್ಲಿ ಅಂಬ ತಾಯಿ ಮಟ್ಟಿ ಪೂಜೆ ನೆರವೇರಿಸಲಾಯಿತು. ಬಾಲು, ಶಿವಕುಮಾರ್, ಪೈಲ್ವಾನ್ ರಾಜಣ್ಣ, ಪೈಲ್ವಾನ್ ಪ್ರಕಾಶ್, ಪೈಲ್ವಾನ್ ಕುಮಾರ್, ರಾಜಕುಮಾರ್, ದತ್ತು, ಪೈಲ್ವಾನ್ ದೇವರಾಜ್, ಗ್ರಾಮದ ಯಜಮಾನರು, ಯುವಕರು ಪೂಜೆಯಲ್ಲಿ ಭಾಗವಹಿಸಿದ್ದರು.

# ಬಿಜೆಪಿಯಲ್ಲಿ ಮಹಿಳಾ ಸದಸ್ಯತ್ವ ಹೆಚ್ಚಳಕ್ಕೆ ಅಭಿಯಾನದಲ್ಲಿ ಆದ್ಯತೆ


## ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸಲಹೆ

ಮೈಸೂರು, ಆ.31(ಎಸ್‌ಬಿಡಿ)– ಬಿಜೆಪಿಯಲ್ಲಿ ಮಹಿಳಾ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮಹಿಳಾ ಮೋರ್ಚಾ ಜವಾಬ್ದಾರಿ ಪ್ರಮುಖವಾಗಿದೆ ಎಂದು ಪಕ್ಷದ ಮೈಸೂರು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಹೇಳಿದರು.

ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನದ ಹಿನ್ನೆಲೆಯಲ್ಲಿ ಮೈಸೂರು ಗ್ರಾಮಾಂತರ ಮಹಿಳಾ ಮೋರ್ಚಾ ವತಿಯಿಂದ ಪಕ್ಷದ ಕಚೇರಿಯಲ್ಲಿ ಏರ್ಪಡಿಸಿದ್ದ ಮಹಿಳಾ ಮುಖಂಡರ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಕ್ಷ ಸಂಘಟನೆಯಲ್ಲಿ ಮಹಿಳಾ ಸದಸ್ಯರ ಪಾತ್ರ ಮಹತ್ವದ್ದಾಗಿದೆ ಎಂದರು.

ಸದಸ್ಯತ್ವ ಅಭಿಯಾನ ಯಶಸ್ವಿಗೆ ಪ್ರತಿಯೊಬ್ಬರ ಸಹಕಾರ ಬಹಳ ಮುಖ್ಯ. ಅದರಲ್ಲೂ ಮಹಿಳಾ ಮೋರ್ಚಾ ವಿಶೇಷ ಆಸಕ್ತಿಯಿಂದ ಕಾರ್ಯ ನಿರ್ವಹಿಸಬೇಕಿದೆ. ಮೋರ್ಚಾದ ಪದಾಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಬೂತ್ ಅಧ್ಯಕ್ಷರ ಸಹಕಾರದೊಂದಿಗೆ ಹೆಚ್ಚಿನ ಸಂಖ್ಯೆಯ ಮಹಿಳೆಯರನ್ನು ಬಿಜೆಪಿ ಸದಸ್ಯರನ್ನಾಗಿ ನೋಂದಣಿ ಮಾಡಿಸಬೇಕು. ಈ ಮೂಲಕ ಪಕ್ಷದಲ್ಲಿ ಮಹಿಳಾ ಸಂಘಟನೆಯ ಬಲ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ದೇಶದ ಮಹಿಳೆಯರ ಅಭಿವೃದ್ಧಿ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಹಲವು ಮಹತ್ವದ ಯೋಜನೆ ಹಾಗೂ ಕಾರ್ಯಕ್ರಮಗಳ ಬಗ್ಗೆ ಮಹಿಳೆಯರಿಗೆ ಮನದಟ್ಟು ಮಾಡಬೇಕು. ಮಹಿಳೆಯರ ಸ್ವಾವಲಂಬಿ ಜೀವನಕ್ಕೆ ಪೂರಕವಾದ ಯೋಜನೆಗಳ ಯಶಸ್ವಿಗೆ ಕೈಜೋಡಿಸುವಂತೆ ಮನವಿ ಮಾಡಬೇಕು. ರಾಜಕೀಯ ಕ್ಷೇತ್ರದಲ್ಲೂ ಸೇವೆ ಸಲ್ಲಿಸಲು ಬಿಜೆಪಿಯಲ್ಲಿರುವ ಅವಕಾಶಗಳ ಬಗ್ಗೆ ತಿಳಿಸಿಕೊಡಬೇಕು. 88800002024 ಸಂಖ್ಯೆಗೆ ಮಿಸ್ ಕಾಲ್ ನೀಡುವ ಮೂಲಕ ಬಿಜೆಪಿ ಸದಸ್ಯತ್ವ ನೋಂದಣಿ ಮಾಡಿಕೊಳ್ಳುವಂತೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗ್ರಾಮಾಂತರ ಮಹಿಳಾ ಮೋರ್ಚಾ ವತಿಯಿಂದ ನಡೆದ ಮಹಿಳಾ ಸದಸ್ಯತ್ವ ಕಾರ್ಯಾಗಾರದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ಹಾಗೂ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸದಸ್ಯತ್ವ ನೋಂದಣಿ ಅರ್ಜಿ ವಿತರಿಸಿದರು.

**ಹಗರಣಗಳ ಸರಮಾಲೆ:** ರಾಜ್ಯದ ಕಾಂಗ್ರೆಸ್ ಸರ್ಕಾರದ ಹಗರಣಗಳ ಸರಮಾಲೆಯಿಂದ ಜನ ತತ್ತರಿಸುತ್ತಿದ್ದಾರೆ. ದಿನಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಬೇಸತ್ತಿದ್ದಾರೆ. ಯಾವುದೇ ಅಭಿವೃದ್ಧಿ ಕೆಲಸಗಳಾಗದೆ ಹಿಡಿಶಾಪ ಹಾಕುತ್ತಿದ್ದಾರೆ. ಮುಡಾ ಹಗರಣ, ರಾಜ್ಯ ಸರ್ಕಾರದ ಕಾರ್ಯವೈಖರಿ ಕುರಿತು ಉದ್ಭವವಾಗಿರುವ ಇದ್ದಾಗಲೂ ಸರ್ಕಾರದ ಸಾಧನೆ ಕುರಿತು ರಾಗಿರುವ ಕಾಂಗ್ರೆಸ್ ನಾಯಕರು ಬಿಜೆಪಿಯವರ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಇದೇ ವೇಳೆ ವಾಗ್ದಾಳಿ ನಡೆಸಿದರು.

**ಯೋಜನೆಗಳ ಮಾಹಿತಿಗೆ ಅನುಕೂಲ:** ರಾಜ್ಯ ಬಿಜೆಪಿ ಕಚೇರಿ ಕಾರ್ಯದರ್ಶಿ ಲೋಕೇಶ್ ಅಂಬೆಕಲ್ ಮಾತನಾಡಿ, ಬಿಜೆಪಿ ಮಹಿಳಾ ಮೋರ್ಚಾ ಉತ್ಸಾಹದಿಂದ ಪಕ್ಷದ ಸಂಘಟನೆಯಲ್ಲಿ ತೊಡಗಿದೆ. ಈ ನಿಟ್ಟಿನಲ್ಲಿ ಮಹಿಳಾ ಸದಸ್ಯತ್ವ ನೊಂದಣಿ ಪ್ರಮುಖವಾಗಿದೆ. ಮಹಿಳೆಯರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ನೀಡಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿ, ಸದಸ್ಯತ್ವ ಪಡೆಯಲು ಮನವಿ ಮಾಡಬೇಕು. ಸದಸ್ಯತ್ವ ಪಡೆಯುವುದರಿಂದ ಸರ್ಕಾರಗಳ ಕಾರ್ಯಕ್ರಮಗಳ ಬಗ್ಗೆ ವಿಶಾಲವಾದ ಮಾಹಿತಿ ನೀಡಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಈ ವೇಳೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್, ಮಹಿಳಾ ಮೋರ್ಚಾ ಪ್ರಮುಖರಿಗೆ ಸದಸ್ಯತ್ವ ನೊಂದಣಿ ಅರ್ಜಿಯನ್ನು ನೀಡಿದರು. ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನಳಿನಿ ಗೌಡ, ಪ್ರಧಾನ ಕಾರ್ಯದರ್ಶಿ ನಂದಿನಿ, ರೇಖಾ ಸೇರಿದಂತೆ ಮಂಡಲ ಅಧ್ಯಕ್ಷರು, ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ದೇಶ – ವಿದೇಶ

## ಪಾಕಿಸ್ತಾನದಲ್ಲಿ ಸೇನಾ ಕಾರ್ಯಾಚರಣೆ: 10 ದಿನಗಳಲ್ಲಿ 37 ಉಗ್ರರ ಹತ್ಯೆ



**ಇಸ್ಲಾಮಾಬಾದ್:** ಪಾಕಿಸ್ತಾನದ ವಾಯುವ್ಯ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಖೈಬರ್ ಜಿಲ್ಲೆಯಲ್ಲಿ ನಡೆಯುತ್ತಿರುವ ಸೇನಾ ಕಾರ್ಯಾಚರಣೆಯಲ್ಲಿ 10 ದಿನಗಳಲ್ಲಿ ಕನಿಷ್ಠ 37 ಉಗ್ರರು ಹತರಾಗಿದ್ದಾರೆ ಮತ್ತು 14 ಮಂದಿ ಗಾಯಗೊಂಡಿದ್ದಾರೆ ಎಂದು ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನ ಸೇನೆಯ ಮಾಧ್ಯಮ ವಿಭಾಗವಾದ ಇಂಟರ್–ಸರ್ವಿಸಸ್ ಪಬ್ಲಿಕ್ ರಿಲೇಷನ್ಸ್ (ISPR) ಈ ಕುರಿತು ಹೇಳಿಕೆ ಬಿಡುಗಡೆ ಮಾಡಿದ್ದು, ಆಗಸ್ಟ್ 20ರಿಂದ ಉಗ್ರರ ಪತ್ತೆ ವರದಿ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳು ಖೈಬರ್‌ನ ತಿರ್ಹಾ ಪ್ರದೇಶದಲ್ಲಿ ಗುಪ್ತಚರ ಆಧಾರಿತ ಕಾರ್ಯಾಚರಣೆ ನಡೆಸುತ್ತಿರುವುದಾಗಿ ಹೇಳಿದೆ. ಬುಧವಾರ ಮತ್ತು ಗುರುವಾರ ನಡೆಸಿದ ಕಾರ್ಯಾಚರಣೆಗಳ ವಿವರಗಳನ್ನು ISPR ನೀಡಿದೆ. ಸೇನಾಪಡೆಗಳು ಉಗ್ರಗಾಮಿಗಳಿರುವ ಸ್ಥಳಗಳನ್ನು ಪರಿಣಾಮಕಾರಿಯಾಗಿ ಆವರಿಸಿಕೊಂಡಿದ್ದು, 12 ಉಗ್ರರನ್ನು ಹತ್ಯೆ ಮಾಡಿದೆ ಎಂದು ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

## ಮತ್ತೆ ಕೋವಿಡ್ ಮಹಾಮಾರಿ ಅಟ್ಟಹಾಸ; ಭಾರತಕ್ಕೆ ವಾರ್ನಿಂಗ್



**ನವದೆಹಲಿ:** ಇದೀಗ ಮತ್ತೆ ಕೊರೊನಾ ತೀವ್ರತೆ ಹೆಚ್ಚಾಗುವ ಸಾಧ್ಯತೆಗಳಿವೆ. ಯುಎಸ್ ಮತ್ತು ದಕ್ಷಿಣ ಕೊರಿಯಾ ಸೇರಿದಂತೆ ಹಲವು ದೇಶಗಳಲ್ಲಿ ಪ್ರಕರಣಗಳು ಹೆಚ್ಚಾಗುತ್ತಿದ್ದು, ಮತ್ತೊಮ್ಮೆ ಕೋವಿಡ್–19 ಎದುರಿಸಲು ಸಿದ್ಧರಾಗಿ ಎಂದು ವಿಶ್ವ ಆರೋಗ್ಯ ಸಂಸ್ಥೆ ಭಾರತಕ್ಕೆ ಸೂಚಿಸಿದೆ. ಕಳೆದ ಡಿಸೆಂಬರ್‌ನಲ್ಲಿ ಕೋವಿಡ್ ಹೆಚ್ಚಳದ ಬಗ್ಗೆ ವರದಿಯಾಗಿತ್ತು. ಯುಎಸ್ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ (ಸಿಡಿಸಿ) ಪ್ರಕಾರ, ಯುಎಸ್‌ನ 25 ರಾಜ್ಯಗಳು ಕೋವಿಡ್–19 ಸೋಂಕಿನ ಹೆಚ್ಚಳದಿಂದ ಸಮಸ್ಯೆಗಳನ್ನು ಎದುರಿಸುತ್ತಿವೆ. ದಕ್ಷಿಣ ಕೊರಿಯಾದಲ್ಲೂ ಇದೇ ರೀತಿಯ ಪರಿಸ್ಥಿತಿ ಎದುರಾಗಿದ್ದು, ವೈರಸ್‌ನಿಂದಾಗಿ ಅನೇಕ ಜನರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಹೇಳಲಾಗಿದೆ. ಭಾರತದಲ್ಲಿ ಪರಿಸ್ಥಿತಿ ಇತರ ದೇಶಗಳಿಗೆ ಹೋಲಿಸಿದರೆ ಗಂಭೀರವಾಗಿಲ್ಲದಿದ್ದರೂ, ದೇಶವು ಜಾಗರೂಕರಾಗಿರಬೇಕು ಎಂದು ನೋಯ್ಡಾದ ಶಿವ ನಾಡಾರ್ ವಿಶ್ವವಿದ್ಯಾಲಯದ ವೈರಾಲಜಿಸ್ಟ್ ಪ್ರೊಫೆಸರ್ ದೀಪಕ್ ಸೆಹಗಲ್ ಸಲಹೆ ನೀಡಿದ್ದಾರೆ.

## ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯಿಂದ ಸಹ ಪ್ರಯಾಣಿಕರ ಮೇಲೆ ಚಾಕು ಇರಿತ



**ಬರ್ಲಿನ್:** ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರು ಐದು ಸಹ ಪ್ರಯಾಣಿಕರಿಗೆ ಚಾಕುವಿನಿಂದ ಇರಿದ ಘಟನೆ ಜರ್ಮನಿಯ ನಾರ್ತ್ ರೈನ್–ವೆಸ್ಟ್‌ಫಾಲಿಯಾದ ಸಿಗೆನ್‌ನಲ್ಲಿ ನಡೆದಿದೆ. ಐವರು ಗಾಯಗೊಂಡಿದ್ದು, ಅವರಲ್ಲಿ ಮೂವರ ಸ್ಥಿತಿ ಗಂಭೀರವಾಗಿದೆ. ಮಹಿಳೆಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆ ವೇಳೆ ಬಸ್‌ನಲ್ಲಿ ಸುಮಾರು 40 ಪ್ರಯಾಣಿಕರಿದ್ದರು, ಉಳಿದ ಪ್ರಯಾಣಿಕರಿಗೆ ಹೆಚ್ಚಿನ ಅಪಾಯವಾಗಿಲ್ಲ. ದಾಳಿ ಮಾಡಿದ ಮಹಿಳೆ ಜರ್ಮನ್ ಪ್ರಜೆಯಾಗಿದ್ದು, ಆಕೆ ಮಾನಸಿಕ ಆರೋಗ್ಯ ಸಮಸ್ಯೆ ಹಾಗೂ ಮಾದಕವಸ್ತುಗಳ ಪ್ರಭಾವಕ್ಕೆ ಸಿಲುಕಿದ್ದಾರೆ ಎಂದು ಮೇಲ್ನೋಟಕ್ಕೆ ತಿಳಿದುಬಂದಿದೆ. ಭಯೋತ್ಪಾದನೆಯನ್ನು ಪ್ರೇರೇಪಿಸುವಂತಹ ಅಂಶದ ಬಗ್ಗೆ ಯಾವುದೇ ಅನುಮಾನ ಇಲ್ಲ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಕುಶ್ವಾರಾ ಪಶ್ಚಿಮ ಜರ್ಮನಿಯ ಸೋಲಿಂಗೆನ್‌ನಲ್ಲಿ ನಡೆದ ಉತ್ಸವವೊಂದರಲ್ಲಿ ಸಿರಿಯನ್ ವ್ಯಕ್ತಿಯೊಬ್ಬ ಮೂರು ಜನರನ್ನು ಇರಿದು ಕೊಂದು, ಹಲವರ ಮೇಲೆ ದಾಳಿ ಮಾಡಿರುವುದಾಗಿ ಒಪ್ಪಿಕೊಂಡ ಕೆಲವು ದಿನಗಳ ನಂತರ ಈ ಘಟನೆ ನಡೆದಿದೆ ಎಂದು ಪೊಲೀಸರು ಉಲ್ಲೇಖಿಸಿದ್ದಾರೆ.

## ನಾಲ್ಕನೇ ಮಗುವೂ ಹೆಣ್ಣು; ನವಜಾತ ಶಿಶು ಕೊಂದ ತಾಯಿ



**ನವದೆಹಲಿ:** ನಾಲ್ಕನೇ ಮಗುವೂ ಹೆಣ್ಣಾಯಿತು ಎಂದು ಹೆತ್ತ ತಾಯಿಯೇ ತನ್ನ 6 ದಿನದ ಹೆಣ್ಣು ಮಗುವನ್ನು ಕೊಂದು ಶವವನ್ನು ಪಕ್ಕದ ಮನೆಯ ಚಾವಣಿಯ ಮೇಲೆ ಎಸೆದಿರುವ ಘಟನೆ ಪಶ್ಚಿಮ ದೆಹಲಿಯ ಖಯಾಲಾ ಪ್ರದೇಶದಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪಿಸಿಆರ್ ಕರೆ ಮಾಡಿದ ಮಹಿಳೆ, ತನ್ನ ಆರು ದಿನದ ಹೆಣ್ಣು ಮಗು ನಾಪತ್ತೆಯಾಗಿದೆ ಎಂದು ದೂರಿದ್ದಾಳೆ. ಸ್ಥಳೀಯ ಪೊಲೀಸ್ ಠಾಣೆ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಹೋಗಿದ್ದಾರೆ.

ಅಕ್ಕ ಪಕ್ಕದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ ಪೊಲೀಸರು, ಹತ್ತಿರದ ಮನೆಗಳಲ್ಲಿ ಶೋಧ ನಡೆಸಲು ತಂಡವನ್ನು ರಚಿಸಿದ್ದಾರೆ. ಪೊಲೀಸರು ಮಗುವಿಗೆ ಹುಡುಕಾಟ ನಡೆಸುವಾಗ ತಾಯಿ ಶಿವಾನಿ, ಶಸ್ತ್ರಚಿಕಿತ್ಸೆಯ ಹೊಲಿಗೆ ಬಿಚ್ಚಿಕೊಳ್ಳಲು ಆಸ್ಪತ್ರೆಗೆ ಹೋಗಬೇಕಿದೆ ಎಂದು ಪೊಲೀಸರಿಗೆ ತಿಳಿಸಿದ್ದಾರೆ.

ಆಕೆ ನಡೆ ಪೊಲೀಸರಿಗೆ ಅನುಮಾನ ಮೂಡಿಸಿದ್ದರೂ ವೈದ್ಯಕೀಯ ಕಾರಣದಿಂದ ಆಕೆಗೆ ಹೋಗಲು ಅನುಮತಿ ನೀಡಿದ್ದರು. ಶೋಧದ ವೇಳೆ ಪಕ್ಕದ ಮನೆಯ ಚಾವಣಿ ಮೇಲೆ ಬ್ಯಾಗ್ ವೊಂದು ಪತ್ತೆಯಾಗಿದ್ದು, ಅದರಲ್ಲಿ ಮಗು ಇರುವುದು ಕಂಡು ಬಂದಿತ್ತು. ತಕ್ಷಣ ಮಗುವನ್ನು ಆಸ್ಪತ್ರೆಗೆ ಕರೆದಾಗ, ಅದರೆ, ಆಸ್ಪತ್ರೆಗೆ ತಲುಪುವ ಮುನ್ನವೇ ಮಗು ಅಸುನೀಗಿತ್ತು ಎಂದು ವೀರ್ ತಿಳಿಸಿದ್ದಾರೆ.

## ಮದುವೆಯಾಗುವ ಬ್ಯಾಚುಲರ್‌ಗಳಿಗೆ ಸರ್ಕಾರ 31 ಲಕ್ಷ ಪ್ರೋತ್ಸಾಹ ಧನ!



**ದಕ್ಷಿಣ ಕೊರಿಯಾ:** ದಕ್ಷಿಣ ಕೊರಿಯಾದಲ್ಲಿ ವಿವಾಹವಾಗುವ ಜೋಡಿಗಳಿಗೆ ಅಲ್ಲಿನ ಸರ್ಕಾರ 31 ಲಕ್ಷ ರೂ. ಪ್ರೋತ್ಸಾಹ ಧನ ಕೊಡಲು ಮುಂದಾಗಿದೆ. ಮದುವೆಗಳನ್ನು ಪ್ರೋತ್ಸಾಹಿಸುವುದಕ್ಕೆ ಸರ್ಕಾರ ಕಂಕಣಬದ್ಧವಾಗಿದೆ. ಇನ್ನು ಮಕ್ಕಳಾದ ಮೇಲೆ ಅವರ ವಿದ್ಯಾಭ್ಯಾಸಕ್ಕೆ ಸಹ ಹೆಚ್ಚು ಖರ್ಚು ಮಾಡಲು ಸರ್ಕಾರ ಬದ್ಧವಾಗಿದೆ. ದಕ್ಷಿಣ ಕೊರಿಯಾದಲ್ಲಿ ಜನನ ಪ್ರಮಾಣ ಗಣನೀಯವಾಗಿ ತಗ್ಗಿದೆ. ಇದರಿಂದಾಗಿ ನವ ಜೋಡಿಗಳು ಮದುವೆಯಾಗಲು ಮತ್ತು ಹೆಚ್ಚು ಮಕ್ಕಳನ್ನು ಹೊಂದುವುದನ್ನು ಪ್ರೋತ್ಸಾಹಿಸಲು ಸರ್ಕಾರ ಈ ಯೋಜನೆಯನ್ನು ಪರಿಚಯಿಸಿದೆ.

ಇದನ್ನು ಸಾಕ್ಷೀಕರಿಸಲು ದಕ್ಷಿಣ ಕೊರಿಯಾದ ಬುಸಾನ್ ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಾಹಿತ ದಂಪತಿಗಳಿಗೆ 38,000 ಡಾಲರ್ (31 ಲಕ್ಷ ರೂ.) ನೀಡುವುದಾಗಿ ಸರ್ಕಾರ ಘೋಷಿಸಿದೆ.

# ಕಾಡಾನೆ-ಮಾನವ ಸಂಘರ್ಷ ತಡೆಗೆ ಶಾಶ್ವತ ಪರಿಹಾರ ಅಗತ್ಯ

## 'ವಿಶ್ವ ಆನೆ ದಿನ' ಕಾರ್ಯಕ್ರಮದಲ್ಲಿ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಪ್ರತಿಪಾದನೆ

ಮಡಿಕೇರಿ, ಆ.31– ಕಾಡಾನೆ ಹಾಗೂ ಮಾನವ ಸಂಘರ್ಷ ತಡೆಯಲು ಶಾಶ್ವತ ಪರಿಹಾರೋಪಾಯಗಳನ್ನು ಕಂಡು ಹಿಡಿಯುವ ಅಗತ್ಯವಿದೆ ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಪ್ರತಿಪಾದಿಸಿದರು. ಕೊಡಗು ವೃತ್ತದ ಮಡಿಕೇರಿ ವನ್ಯಜೀವಿ ವಿಭಾಗದಿಂದ ಹಾರಂಗಿಯ ಸಾಕಾನೆ ಶಿಬಿರದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಆನೆ ದಿನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾಕಾನೆಗಳಿಗೆ ಸಂಕೇತ್ ಪೂವಯ್ಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಹಣ್ಣು ಹಂಪಲುಗಳನ್ನು ತಿನ್ನಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕೂಡು ಮಂಗಳೂರು ಶಾಲೆಯ ಮಕ್ಕಳೊಂದಿಗೆ ಸಂಕೇತ್ ಪೂವಯ್ಯ

ಈ ಸಂದರ್ಭದಲ್ಲಿ ಮಾತನಾಡಿದ ಸಂಕೇತ್ ಪೂವಯ್ಯ ಕಾಡಾನೆಗಳ ರಕ್ಷಣೆ ಕೇವಲ ಇಲಾಖೆ ಅಥವಾ ಸರ್ಕಾರದ್ದಲ್ಲ. ಇಲ್ಲಿ ಕಾಡಂಚಿನ ಜನರು, ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ ತುರ್ತು ಅಗತ್ಯವಿದೆ ಎಂದು ಹೇಳಿದ ಸಂಕೇತ್ ಪೂವಯ್ಯ, ಕೊಡಗು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಕಾಡಾನೆಗಳ ನಿಯಂತ್ರಣ ಹಾಗೂ ಸೂಕ್ತ ನಿರ್ವಹಣೆಗೆ ನೆರೆಯ ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಅರಣ್ಯ ಮಂತ್ರಿಗಳು ಹಾಗೂ ಅರಣ್ಯ ಅಧಿಕಾರಿಗಳ ಜೊತೆ ಸಮಾಲೋಚನಾ ಸಭೆ ನಡೆಸುವ ಮೂಲಕ ಕಾಡಾನೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಗಂಭೀರ ಚಿಂತನೆ ನಡೆದಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರೂ ಆಗಿರುವ ವಿರಾಜಪೇಟೆ ಶಾಸಕ ಪೊನ್ನಣ್ಣ ಅವರು ಸರ್ಕಾರದ ಮಟ್ಟದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಸಂಕೇತ್ ಪೂವಯ್ಯ ಹೇಳಿದರು.

ದುಬಾರೆ ಆನೆ ಶಿಬಿರದ ಪಶುವೈದ್ಯ ಡಾ. ಚೆಟ್ಟಿಯಪ್ಪ ಆನೆಗಳ ಕುಟುಂಬದ ಮಾದರಿ ಹಾಗೂ ಆವಾಸ ಸ್ಥಾನಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಇದೇ ವೇಳೆ ಆನೆಗಳ ಬಗೆಗಿನ ವಿದ್ಯಾರ್ಥಿಗಳ ಕೆಲವು ಕೌತುಕ ಪ್ರಶ್ನೆಗಳಿಗೆ ಉತ್ತರಿಸಿದರು. ಮಡಿಕೇರಿ ಪ್ರಾದೇಶಿಕ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್ ವಿಶ್ವ ಆನೆ ದಿನಾಚರಣೆಯ ಮಹತ್ವದ ಕುರಿತು ಮಾತನಾಡಿದರು.

ಆನೆ ದಿನದ ಅಂಗವಾಗಿ ಶಿಬಿರದ ಸಾಕಾನೆಗಳಾದ ಲಕ್ಷ್ಮಣ, ಈಶ್ವರ, ಏಕದಂತ, ವಿಕ್ರಮ, ರಾಮ ಹಾಗೂ ಕರ್ಣ ಎಂಬ ಆನೆಗಳಿಗೆ ಸ್ನಾನ ಮಾಡಿಸಿ ಹರಳೆಣ್ಣೆ ಹಚ್ಚಿ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ಈ ವೇಳೆ ಆನೆಗಳ ಮಾವುತರಾದ ಪುಟ್ಟ, ಮಂಜು, ವಿಶ್ವನಾಥ, ನಾಗರಾಜ, ಸಂಜು ಹಾಗೂ ಮಂಜ ಅವರುಗಳು ತಮ್ಮ ಅಲಂಕೃತ ಸಾಕಾನೆಗಳನ್ನು ಏರಿ ಕಾರ್ಯಕ್ರಮದ ಅತಿಥಿಗಳಿಗೆ ಆನೆಗಳಿಂದ ಸೊಂಡಿಲೆತ್ತಿ ನಮಸ್ಕರಿಸುವ ಮೂಲಕ ಧನ್ಯವಾದ ಸಲ್ಲಿಸಿದರು.

ಕೊಡಗು ಆನೆ ಕಾರ್ಯಪಡೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಅನುಷಾ, ವಿರಾಜಪೇಟೆ ಉಪವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಹೆಚ್.ಜಗನ್ನಾಥ್, ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಯ್ಯದ್ ಅಹಮದ್ ಶಾ ಹುಸೇನ್, ಮಡಿಕೇರಿ ವನ್ಯ ಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎ. ನೆಹರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀನಿವಾಸ್, ಅರಣ್ಯಾಧಿಕಾರಿ ಎನ್.ಸಿ. ಶಮನ್, ಮರಿಸ್ವಾಮಿ, ವಲಯ ಅರಣ್ಯಾಧಿಕಾರಿಗಳಾದ ರತನ್ ಕುಮಾರ್, ಕೊಟ್ರೇಶ್, ಅರವಿಂದ್, ರವೀಂದ್ರ ಸೇರಿದಂತೆ ಉಪವಲಯ ಅರಣ್ಯಾಧಿಕಾರಿಗಳು, ಸಿಬ್ಬಂದಿ ಇದ್ದರು.

> ಇಲಾಖೆಯ ಮಾಹಿತಿಯ ಪ್ರಕಾರ ಕಳೆದ ವರ್ಷಗಳಲ್ಲಿ 283 ಆನೆಗಳು ಸಹಜವಾಗಿ ಸಾವನ್ನಪ್ಪಿವೆ. 30 ಆನೆಗಳು ವಿದ್ಯುತ್ ಪ್ರವಹಿಸಿ ಜೀವ ತೆತ್ತಿದ್ದರೆ, 6 ಆನೆಗಳು ಹತ್ಯೆಗೊಳಗಾಗಿವೆ. ಆದ್ದರಿಂದ ಅಮಾಯಕ ಆನೆಗಳ ಸಂರಕ್ಷಣೆಗೆ ವೈಜ್ಞಾನಿಕವಾದ ಕ್ರಮವಾಗಬೇಕಿದೆ. ಕಾಡಾನೆ ಹಾಗೂ ಮಾನವ ಸಂಘರ್ಷಕ್ಕೆ ಶಾಶ್ವತವಾದ ಪರಿಹಾರೋಪಾಯಗಳನ್ನು ಕಂಡು ಹಿಡಿಯುವ ಅಗತ್ಯವಿದೆ.
> – ಸಂಕೇತ್ ಪೂವಯ್ಯ.

## ಕಾಡಾನೆ ದಾಳಿ; ಹಸುವಿಗೆ ಗಾಯ

ಸುಂಟಿಕೊಪ್ಪ,ಆ.31– ಗದ್ದೆಯಲ್ಲಿ ಮೇಯುತ್ತಿದ್ದ ಗಬ್ಬದ ಹಸುವಿನ ಮೇಲೆ ಕಾಡಾನೆಯೊಂದು ದಾಳಿ ನಡೆಸಿ ಗಾಯಗೊಳಿಸಿದ ಘಟನೆ ಕೆದಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊರೂರು ಗ್ರಾಮದಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.

ಹೊರೂರು ಗ್ರಾಮದ ಕಾಫಿ ಬೆಳೆಗಾರರಾದ ದೇವಿ ಪ್ರಸಾದ್ ಕಾಯರ್ ಮಾರ್ ಎಂಬುವರಿಗೆ ಸೇರಿದ ಹಸುವನ್ನು ಗದ್ದೆಯಲ್ಲಿ ಮೇಯಲು ಬಿಟ್ಟಿದ್ದರು. ಈ ಸಂದರ್ಭ ದಿಢೀರನೆ ದಾಳಿ ನಡೆಸಿದ ಕಾಡಾನೆ ಗಂಭೀರವಾಗಿ ಗಾಯಗೊಳಿಸಿದೆ. ಗಾಯಗೊಂಡಿದ್ದ ಹಸುವಿನ ರೋಧನ ಕೇಳಿ ಮಾಲೀಕರು ನೋಡಿದಾಗ ಕಾಡಾನೆ ದಾಳಿಯಿಂದ ಹಸುವಿನ ಹೊಟ್ಟೆಯ ಭಾಗಕ್ಕೆ ಗಂಭೀರ ಗಾಯಗೊಂಡು ಕೆಳಗೆ ಬಿದ್ದು ಒದ್ದಾಡುತ್ತಿರುವುದು ಕಂಡು ಬಂದಿದೆ.


ಕಾಡಾನೆ ದಾಳಿಗೆ ಗಾಯಗೊಂಡಿರುವ ಹಸು.

ತಮ್ಮ ಗದ್ದೆಯ ಬಳಿ ಬಂದ ಕಾಡಾನೆಯ ವಿಚಾರ ತಿಳಿದ ಮಾಲೀಕರು ಮತ್ತು ಗ್ರಾಮಸ್ಥರು ಆತಂಕಗೊಂಡಿದ್ದಾರೆ. ವಿಚಾರ ತಿಳಿದು ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಶಾಸಕ ಪೊನ್ನಣ್ಣರನ್ನು ಭೇಟಿ ಮಾಡಿದ ಪದವಿ ಪೂರ್ವ ಸಂಘದ ಪದಾಧಿಕಾರಿಗಳು

### ವಿವಿಧ ಬೇಡಿಕೆ ಈಡೇರಿಕೆಗೆ ಮನವಿ ಸಲ್ಲಿಕೆ


ಕೊಡಗು ಜಿಲ್ಲಾ ಪದವಿ ಪೂರ್ವ ಅನುದಾನಿತ ನೌಕರರ ಸಂಘದ ಪದಾಧಿಕಾರಿಗಳು ಶಾಸಕ ಪೊನ್ನಣ್ಣ ಅವರನ್ನು ಭೇಟಿ ಮಾಡಿ, ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮನವಿ ಸಲ್ಲಿಸಿದರು.

ಮಡಿಕೇರಿ,ಆ.31– ಕೊಡಗು ಜಿಲ್ಲಾ ಪದವಿ ಪೂರ್ವ ಅನುದಾನಿತ ನೌಕರರ ಸಂಘದ ಪದಾಧಿಕಾರಿಗಳು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮನವಿ ಸಲ್ಲಿಸಿದರು.

ಪದವಿ ಪೂರ್ವ ಅನುದಾನಿತ ಕಾಲೇಜುಗಳಲ್ಲಿ ತರಗತಿವಾರು ವಿದ್ಯಾರ್ಥಿಗಳ ಸಂಖ್ಯೆಯನ್ನು ಕನಿಷ್ಠ 40ಕ್ಕೆ ನಿಗದಿಪಡಿಸಿದ್ದು, ಕೊಡಗು ಜಿಲ್ಲೆ ಗುಡ್ಡಗಾಡು ಪ್ರದೇಶವಾಗಿರುವುದರಿಂದ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು 40ರಿಂದ 20ಕ್ಕೆ ಇಳಿಸಬೇಕು. ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಉಪನ್ಯಾಸಕರ ವೇತನವನ್ನು ತಡೆಹಿಡಿಯಬಾರದು. ಪ್ರಜಾ ಪ್ರತಿನಿಧಿ ಕಾಯ್ದೆಯ ತಿದ್ದುಪಡಿ ಅನ್ವಯ ಮಲೆನಾಡು ಜಿಲ್ಲೆಗಳಿಗೆ ರಿಯಾಯಿತಿಯನ್ನು ನೀಡಲಾಗಿದೆ. ಆದ್ದರಿಂದ ಕೊಡಗು ಸೇರಿದಂತೆ ಇತರ ಮಲೆನಾಡಿನ ಜಿಲ್ಲೆಗಳನ್ನು ವಿಶೇಷವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಕಾರ್ಯಭಾರವಿಲ್ಲದ ಅನುದಾನಿತ ಕಾಲೇಜುಗಳ ಉಪನ್ಯಾಸಕರನ್ನು ನಿಯೋಜನೆ ಮಾಡುವುದಾದಲ್ಲಿ ಸಮೀಪದ ಸರ್ಕಾರಿ ಕಾಲೇಜುಗಳಿಗೂ ನಿಯೋಜನೆ ಮಾಡಬೇಕು. ಈ ಬೇಡಿಕೆಗಳನ್ನು ಇಲಾಖೆ ಮತ್ತು ಸರ್ಕಾರದ ಮಟ್ಟದಲ್ಲಿ ಈಡೇರಿಸಲು ಸಹಕಾರ ನೀಡಬೇಕೆಂದು ಸಂಘದ ಪ್ರಮುಖರು ಮನವಿ ಮಾಡಿದರು.

ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಎ.ಎಸ್.ಪೊನ್ನಣ್ಣ ಶಿಕ್ಷಣ ಸಚಿವರು, ಸಂಬಂಧಿಸಿದ ಅಧಿಕಾರಿಗಳು ಹಾಗೂ ಸಂಘದ ಪದಾಧಿಕಾರಿಗಳ ಸಭೆಯನ್ನು ಶೀಘ್ರದಲ್ಲಿ ನಡೆಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭ ಸಂಘದ ಅಧ್ಯಕ್ಷ ಸಿದ್ದರಾಜು, ಉಪಾಧ್ಯಕ್ಷ ಹೇಮಂತ್ ಕುಮಾರ್, ಸಂಘಟನಾ ಕಾರ್ಯದರ್ಶಿ ಮಂದಪ್ಪ, ಖಜಾಂಚಿ ಡಾ. ಹೇಮಂತ್ ಕುಮಾರ್ ಹಾಗೂ ಕೊಡ್ಲಿಪೇಟೆ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಚಂದ್ರಮೌಳಿ ಉಪಸ್ಥಿತರಿದ್ದರು.

## ಇಬ್ಬರು ಕಳ್ಳರ ಬಂಧನ : 11 ಪ್ರಕರಣಗಳು ಬಯಲಿಗೆ


ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಿರಾಜಪೇಟೆ, ಆ.31–ಕೊಡಗು, ಮೈಸೂರು ಹಾಗೂ ಕೇರಳದ ಕಣ್ಣನೂರು ಜಿಲ್ಲೆಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಬ್ಬರು ಕಳ್ಳರನ್ನು ಇಲ್ಲಿನ ಪೊಲೀಸರು ಬಂಧಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಗ್ರಾಮಾಂತರ ಠಾಣೆಯಲ್ಲಿ ಕರೆದಿದ್ದ ಸುದ್ದಿ ಗೋಷ್ಠಿಯಲ್ಲಿ ಈ ವಿಷಯ ತಿಳಿಸಿ ಆ.28 ರಂದು ವಿರಾಜಪೇಟೆ ಸಮೀಪದ ಭೇತ್ರಿ ಗ್ರಾಮದಲ್ಲಿ ನಾಸರ್ ಎಂಬುವರಿಗೆ ಸೇರಿದ ಸೂಪರ್ ಮಾರ್ಕೆಟ್‌ನ ಬೀಗ ಮುರಿದು 25 ಸಾವಿರ ರೂ. ನಗದು ಹಾಗೂ ಕೆಲ ವಸ್ತುಗಳ ಕಳ್ಳತನವಾಗಿತ್ತು. ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಕೇರಳದ ಕಣ್ಣೂರಿನ ಇರಟ್ಟಿಯ ಉಳಿಕಲ್ ಟಿ.ಎ.ಸಲಿಂ ಹಾಗೂ ಸೋಮವಾರಪೇಟೆ ಚೌಡ್ಲು ಗ್ರಾಮದ ಎಂ.ಎ.ಸಂಜಯ್‌ಕುಮಾರ್ ಇಬ್ಬರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದರು.

ಭೇತ್ರಿ ಸೂಪರ್ ಮಾರ್ಕೆಟ್ ಕಳವು ಪ್ರಕರಣವನ್ನೊಳಗೊಂಡಂತೆ ಜಿಲ್ಲೆಯಲ್ಲಿ ನಡೆದ 5, ಮೈಸೂರಿನಲ್ಲಿ ನಡೆದ 2 ಹಾಗೂ ಕೇರಳದಲ್ಲಿ ನಡೆದ 4 ಪ್ರಕರಣ ಸೇರಿದಂತೆ ಒಟ್ಟು 11 ಪ್ರಕರಣಗಳು ವಿಚಾರಣೆ ವೇಳೆ ಬಯಲಿಗೆ ಬಂದಿದೆ ಎಂದು ಅವರು ತಿಳಿಸಿದರು.

ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ್ದ 1,50 ಲಕ್ಷ ರೂ. ಬೆಲೆ ಬಾಳುವ 3 ದ್ವಿಚಕ್ರ ವಾಹನ ಹಾಗೂ 9050 ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ ಆರೋಪಿ ಸಲೀಂ ಕೊಡಗು, ಮೈಸೂರು ಹಾಗೂ ಕೇರಳದಲ್ಲಿ ಕಳ್ಳತನ ಮಾಡುತ್ತಿದ್ದು ಈ ಹಿಂದೆ ಮಡಿಕೇರಿಯ ಗ್ರಾಮಾಂತರ ಠಾಣೆಯಲ್ಲಿ ನಡೆದ ಕಳ್ಳತನ ಹಾಗೂ ವಿರಾಜಪೇಟೆ ನಗರದ ಪೆಟ್ರೋಲ್ ಬಂಕ್‌ವೊಂದರ ಕಳ್ಳತನದಲ್ಲಿ ಜೈಲು ಶಿಕ್ಷೆ ಅನುಭವಿಸಿ ಜಾಮೀನಿನ ಮೇಲೆ ಹೊರ ಬಂದು ಕಳ್ಳತನಕ್ಕೆ ಇಳಿದಿದ್ದ ಎಂದರು.

## ಐವರು ಗಾಂಜಾ ಆರೋಪಿಗಳ ಬಂಧನ


ಬಂಧಿತ ಗಾಂಜಾ ವ್ಯಾಪಾರಿಗಳಿಂದ ವಶಪಡಿಸಿಕೊಳ್ಳಲಾದ ದ್ವಿಚಕ್ರ ವಾಹನಗಳು, ಕಾರುಗಳು.

**ವಿರಾಜಪೇಟೆ:** ನಗರ ಠಾಣೆಯ ವ್ಯಾಪ್ತಿಯಲ್ಲಿ ಗಾಂಜಾ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಗಾಂಜಾ ವ್ಯಾಪಾರಿಗಳನ್ನು ಬಂಧಿಸಿ ಅವರಿಂದ 10 ದ್ವಿಚಕ್ರ ವಾಹನ ಸೇರಿದಂತೆ 12 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಮೀಪದ ಆರ್ಜಿ ಗ್ರಾಮದ ಪೆರುಂಬಾಡಿಯ ಶಫೀಕ್, ಸಮೀರ್, ಮುನೀರ್, ಎಸ್.ದರ್ಶನ್ ಹಾಗೂ ವಿರಾಜಪೇಟೆಯ ಚಿಕ್ಕಪೇಟೆಯ ಮೊಹಮ್ಮದ್ ಆಸೀಂ, ಎಂಬುವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆರೋಪಿಗಳಿಂದ 1.83 ಕೆ.ಜಿ. ಗಾಂಜಾ, 10 ದ್ವಿಚಕ್ರ ವಾಹನ ಹಾಗೂ 2 ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ. ವಶಕ್ಕೆ ಪಡೆದ ಸ್ವತ್ತುಗಳ ಮೌಲ್ಯ 4 ಲಕ್ಷ ರೂ. ಗಳಾಗಿದೆ. ವಾಹನ ಕಳುವಿಗೆ ಸಂಬಂಧಿಸಿ ಪಿರಿಯಾಪಟ್ಟಣ, ಹುಣಸೂರು ಹಾಗೂ ಬಿಳಿಕೆರೆ ಠಾಣೆಗಳಲ್ಲಿ ಪ್ರಕರಣ ದಾಖಲಾಗಿರುವುದಾಗಿ ತಿಳಿಸಿದರಲ್ಲದೆ, ಯಾವುದೇ ಪ್ರಕರಣವಾದರೂ ಪತ್ತೆ ಹಚ್ಚಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸುವಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳು ಸಮರ್ಥರಿದ್ದಾರೆ. ಜಿಲ್ಲೆಯಲ್ಲಿ ಸಣ್ಣಮಟ್ಟ ಕಳ್ಳತನ–ಅಪರಾಧವಾದರೂ ಸಾರ್ವಜನಿಕರು ಪ್ರಕರಣ ದಾಖಲಿಸಿ, ಪೊಲೀಸರಿಗೆ ಮಾಹಿತಿ ನೀಡುವ ಮೂಲಕ ಅಪರಾಧಿಗಳ ಪತ್ತೆಗೆ ಸಹಕಾರ ನೀಡಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು. ವಿವಿಧ ಕಳವು ಪ್ರಕರಣಗಳ ಪತ್ತೆ ಕಾರ್ಯಚರಣೆಯಲ್ಲಿ ಪಾಲ್ಗೊಂಡ ಹೆಚ್ಚುವರಿ ಎಸ್‌ಪಿ ಸುಂದರ್‌ರಾಜ್, ಡಿವೈಎಸ್ಪಿ ಮೋಹನ್‌ಕುಮಾರ್, ವೃತ್ತನಿರೀಕ್ಷಕ ಶಿವರುದ್ರ, ಠಾಣಾಧಿಕಾರಿಗಳಾದ ರವೀಂದ್ರ, ಪ್ರಮೋದ್, ಮಂಜುನಾಥ್, ಬಿ.ಎಸ್. ವಾಣಿಶ್ರೀ ಟಿ.ಪಿ.ಮಂಜುನಾಥ್, ಸೇರಿದಂತೆ ಎಲ್ಲ ಸಿಬ್ಬಂದಿಗಳ ಕಾರ್ಯವನ್ನು ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಈ ಸಂದರ್ಭ ಶ್ಲಾಘಿಸಿದರು. ಈ ವೇಳೆ ಪೊಲೀಸ್ ಸಿಬ್ಬಂದಿ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಕಾರ್ಯಕ್ರಮಕ್ಕೆ ಚಾಲನೆ


ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಸಭಾಂಗಣದಲ್ಲಿ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಕಾರ್ಯಕ್ರಮವನ್ನು ಡಾ. ಮಂಜುನಾಥ್ ಉದ್ಘಾಟಿಸಿ, ಮಾತನಾಡಿದರು.

ಚಾಮರಾಜನಗರ, ಆ.31– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಇತ್ತೀಚೆಗೆ 39ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಭಾಂಗಣದಲ್ಲಿ ಸೆಪ್ಟೆಂಬರ್ 8ರವರೆಗೆ ನಡೆಸಲಾಗುವ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಕಾರ್ಯಕ್ರಮವನ್ನು ಸಂಸ್ಥೆ ಡೀನ್ ಮತ್ತು ನಿರ್ದೇಶಕ ಡಾ. ಮಂಜುನಾಥ್ ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಡಾ. ಮಂಜುನಾಥ್, ವೈದ್ಯಕೀಯ ಕಾಲೇಜಿನಲ್ಲಿ ನೇತ್ರ ಸಂಗ್ರಹಣೆಗೆ ಈಗಾಗಲೇ ನೋಂದಣಿ ಮಾಡಿಸಲಾಗಿದ್ದು, ಶೀಘ್ರದಲ್ಲೇ ಇದಕ್ಕೆ ಬೇಕಾಗಿರುವ ಉಪಕರಣಗಳನ್ನು ಖರೀದಿಸಿ ನೇತ್ರ ಸಂಗ್ರಹಣೆಯನ್ನು ಪ್ರಾರಂಭಿಸಲಾಗುವುದು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಚಿದಂಬರ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಜನರು ನೇತ್ರದಾನಕ್ಕೆ ನೋಂದಣಿ ಮಾಡುತ್ತಿದ್ದು, ಇದು ಕುಟುಂಬದ ಸಂಪ್ರದಾಯವಾದಲ್ಲಿ ಕಾರ್ನಿಯಾ ಅಂಧರಿಗೂ ಸಹ ದೃಷ್ಟಿ ನೀಡಬಹುದಾಗಿದೆ. ಮನುಷ್ಯ ಸತ್ತ ನಂತರ ಅವರ ನೇತ್ರಗಳನ್ನು ದಾನ ಮಾಡಿದರೆ ನೇತ್ರಗಳು ಸದಾ ಜೀವಂತವಾಗಿರಲಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ವೈದ್ಯಕೀಯ ಕಾಲೇಜಿನ ನೇತ್ರ ವಿಭಾಗದ ಮುಖ್ಯಸ್ಥರು, ಸ್ನಾತಕೋತ್ತರ ವಿದ್ಯಾರ್ಥಿಗಳು ಪಿ.ಪಿ.ಟಿ ಮೂಲಕ ನೇತ್ರದಾನ, ನೇತ್ರದಾನದ ಮಹತ್ವ, ನೇತ್ರ ಸಂಗ್ರಹಿಸುವ ವಿಧಾನ, ನೇತ್ರದಾನದ ಬಗ್ಗೆ ಇರುವ ತಪ್ಪು ನಂಬಿಕೆಗಳ ಬಗ್ಗೆ ವಿವರಿಸಿದರು.

ಜಿಲ್ಲಾ ಸರ್ಜನ್ ಡಾ. ಕೃಷ್ಣಪ್ರಸಾದ್, ಸ್ಥಾನಿಕ ವೈದ್ಯಾಧಿಕಾರಿ ಡಾ.ಮಹೇಶ್, ಡಾ.ಚಂದ್ರಶೇಖರ್, ಡಾ.ಮಹೇಶ್ವರ್, ಡಾ.ಬಾಲಸುಬ್ರಮಣ್ಯ, ಡಾ.ಗಿರೀಶ್ ಪಾಟೀಲ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಬಿಆರ್‌ಟಿ ಅರಣ್ಯದಲ್ಲಿ ಮತ್ತೊಂದು ಆನೆ ಸಾವು

ಚಾಮರಾಜನಗರ, ಆ.31– ಜಿಲ್ಲಾ ವ್ಯಾಪ್ತಿ ಬಿಆರ್‌ಟಿ ಅರಣ್ಯ ವ್ಯಾಪ್ತಿಯಲ್ಲಿ ಆನೆಗಳ ಅಸಹಜ ಸಾವಿನ ಸಂಖ್ಯೆ ಹೆಚ್ಚುತ್ತಿರುವುದರಿಂದ ಗಡಿ ಜಿಲ್ಲೆಯ ಅರಣ್ಯ ಪ್ರದೇಶಗಳಲ್ಲಿ ಆತಂಕ ಮೂಡಿಸಿದೆ. ವಾರದಿಂದ ಮೂರು ಆನೆಗಳು ಸಾವನ್ನಪ್ಪಿವೆ.

ಜಿಲ್ಲೆಯಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನವನ, ಮಲೆ ಮಹದೇಶ್ವಸ್ವಾಮಿ ವನ್ಯಜೀವಿಧಾಮ, ಬಿಳಿಗಿರಿರಂಗನಬೆಟ್ಟದ ಅರಣ್ಯ ಸೇರಿದಂತೆ ಹಲವು ಸಣ್ಣ–ಮಟ್ಟ ಅರಣ್ಯ ಪ್ರದೇಶಗಳು ಆನೆಗಳ ಆವಾಸ ಸ್ಥಾನವಾಗಿದೆ.

ಈಗಾಗಲೇ ಜಿಲ್ಲೆಯ ಅರಣ್ಯದಂಚಿನ ಕೆಲವೊಂದು ಗ್ರಾಮಗಳ ಜಮೀನಿನಲ್ಲಿ ವಿದ್ಯುತ್ ತಂತಿಗಳನ್ನು ಅಕ್ರಮವಾಗಿ ಅಳವಡಿಸಿಕೊಂಡಿದ್ದು, ಆಹಾರ ಅರಸಿಕೊಂಡು ನಾಡಿನತ್ತ ಬರುವ ಆನೆಗಳ ಜೀವಕ್ಕೆ ಕಂಟಕವಾಗಿದೆ. ಇದರಿಂದ ವರ್ಷಕ್ಕೆ ಅಂದಾಜು 6ರಿಂದ 7 ಆನೆಗಳು ಜಿಲ್ಲೆಯ ಹಲವು ಅರಣ್ಯ ಪ್ರದೇಶಗಳಲ್ಲಿ ಬಲಿಯಾಗುತ್ತಿವೆ.

ಜಿಲ್ಲೆಯ ಹನೂರು ವ್ಯಾಪ್ತಿಗೆ ಒಳಪಡುವ ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಅರಣ್ಯ ವ್ಯಾಪ್ತಿಯ ಬೈಲೂರು ವನ್ಯಜೀವಿ ವಲಯದಲ್ಲಿ ಶನಿವಾರ ಮತ್ತೊಂದು ಆನೆಯ ಮೃತದೇಹ ಪತ್ತೆಯಾಗಿದೆ.


ಬಿಆರ್‌ಟಿ ಅರಣ್ಯ ವ್ಯಾಪ್ತಿಯಲ್ಲಿ ಆನೆ ಸಾವು.

ಕೆಲವು ದಿನಗಳ ಹಿಂದಷ್ಟೆ ಬೈಲೂರು ಮತ್ತು ಯಳಂದೂರು ವ್ಯಾಪ್ತಿಯಲ್ಲಿ ಎರಡು ಆನೆಗಳ ಶವ ಪತ್ತೆಯಾಗಿತ್ತು. ನಿರಂತರವಾಗಿ ಆನೆಗಳ ಶವ ಪತ್ತೆಯಾದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಗಸ್ತು ಕಾರ್ಯಾಚರಣೆ ಚುರುಕುಗೊಳಿಸಿದಾಗ ಮುಳ್ಳಿನ ಪೊದೆಯೊಳಗೆ ಕೊಳೆತ ಸ್ಥಿತಿಯಲ್ಲಿ ಆನೆಯ ಕಳೇಬರ ಪತ್ತೆಯಾಗಿದೆ.

ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ. ಆನೆಯ ಶವ ಪರೀಕ್ಷೆ ನಡೆಸಲಾಗಿದ್ದು, ವರದಿ ಬಂದ ಬಳಿಕ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಅರಣ್ಯ ವ್ಯಾಪ್ತಿಯಲ್ಲಿ ವಾರದಲ್ಲಿ ಮೂರು ಆನೆಗಳ ಮೃತದೇಹ ಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಕಾಡಿನಲ್ಲಿ ಸ್ವಚ್ಛಂದ ಜೀವನ ನಡೆಸುವ ಆನೆಗಳಿಗೆ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಿದೆಯೇ ಅಥವಾ ಆನೆಗಳಿಗೆ ವಿಷ ಇಕ್ಕಲಾಗುತ್ತಿದೆಯೇ ಎಂಬ ಅನುಮಾನಗಳು ಮೂಡಿಸಿವೆ. ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನ ತನಿಖೆಯನ್ನು ನಡೆಸಿದಾಗ ಮಾತ್ರ ಆನೆಗಳ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ವನ್ಯಜೀವಿ ಪ್ರೇಮಿಗಳು ಒತ್ತಾಯಿಸಿದ್ದಾರೆ.

> ಶನಿವಾರ ಪತ್ತೆಯಾಗಿರುವ ಆನೆ ಸುಮಾರು 60ರಿಂದ 65 ವಯೋಮಾನದ ಹೆಣ್ಣಾನೆಯಾಗಿದ್ದು, ಮೇಲ್ನೋಟಕ್ಕೆ 7ರಿಂದ 8 ದಿನಗಳ ಹಿಂದೆ ಸ್ವಾಭಾವಿಕವಾಗಿ ಮೃತಪಟ್ಟಿದೆ ಎಂದು ಅಂದಾಜಿಸಲಾಗಿದೆ. ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗಿದೆ.
> –ಕೆ. ಸುರೇಶ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ಉಪ ವಿಭಾಗ, ಯಳಂದೂರು.

## ಕಡೇ ಶ್ರಾವಣ ಶನಿವಾರ; ಶನೇಶ್ವರ ದೇಗುಲದಲ್ಲಿ ವಿಶೇಷ ಪೂಜೆ


ಟಗರಪುರ ಗ್ರಾಮದಲ್ಲಿ ಶನೇಶ್ವರ ಸ್ವಾಮಿ ದೇಗುಲದಲ್ಲಿ ವಾರ್ಷಿಕೋತ್ಸವ ಹಿನ್ನೆಲೆ ಹೋಮ, ವಿಶೇಷ ಪೂಜೆ ಜರುಗಿತು

ಕೊಳ್ಳೇಗಾಲ, ಆ.31– ತಾಲೂಕಿನ ಟಗರಪುರ ಗ್ರಾಮದಲ್ಲಿ ಕಡೇ ಶ್ರಾವಣ ಶನಿವಾರ ಹಿನ್ನೆಲೆ ವಿಶೇಷ ಪೂಜೆ, ಹೋಮ, ಹವನಾದಿಗಳು ಮೃತ್ಯುಂಜಯ ಶಾಸ್ತ್ರಿಗಳವರ ನೇತೃತ್ವದಲ್ಲಿ, ಪ್ರಧಾನ ಅರ್ಚಕರಾದ ಮೂರ್ತಿ ಅವರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ಶನೇಶ್ವರ ಸ್ವಾಮಿಯ ಪ್ರತಿಷ್ಠಾಪನೆಯ 58ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಎರಡು ದಿನಗಳ ಕಾಲ ವಿಶೇಷ ಪೂಜಾ ಕಾರ್ಯಕ್ರಮ ಜರುಗಿತು.

30ರಂದು ಗಂಗೆ ಪೂಜೆ, ಗಣಪತಿ ಪೂಜೆ, ಪುಣ್ಯಾಹ, ಪ್ರಧಾನ ಕಳಸ ಪ್ರತಿಷ್ಠಾಪನೆ, ವಾಸ್ತು ಹೋಮ, ಗಣಪತಿ ಹೋಮ, ಶನೇಶ್ವರಸ್ವಾಮಿಗೆ ಕ್ಷೀರಾಭಿಷೇಕದ ಬಳಿಕ ಮಹಾ ಮಂಗಳಾರತಿ ಜರುಗಿತು.

31ರ ಬೆಳಗ್ಗೆ ಶನೇಶ್ವರಸ್ವಾಮಿಗೆ ರುದ್ರಾಭಿಷೇಕ, ನವಗ್ರಹ ಪೂಜೆ, ಗಾಯಿತ್ರಿ ಹೋಮ, ಪೂರ್ಣಾಹುತಿ ಬಳಿಕ ಮಹಾಮಂಗಳಾರತಿ ನೆರವೇರಿಸಲಾಯಿತು.

ವಾರ್ಷಿಕೋತ್ಸವದ ಹಿನ್ನೆಲೆ ಶನಿವಾರ ಶನೇಶ್ವರ ಸ್ವಾಮಿಗೆ ವಿಶೇಷವಾಗಿ ಹಲವು ಬಗೆಯ ಹೂಗಳಿಂದ ಅಲಂಕಾರ ಮಾಡಲಾಗಿತ್ತು. ಸಂಜೆ ತಾಯೂರು ರಘು ಅವರಿಂದ ವಾದ್ಯಗೋಷ್ಠಿ, ಸಂಜೆ ವೀರಗಾಸೆ ಕುಣಿತ ಸಮೇತ ಪಲ್ಲಕ್ಕಿ ಉತ್ಸವ ಅದ್ಧೂರಿಯಾಗಿ ಜರುಗಿತು. ರಾತ್ರಿ ಅರಳಿಕಟ್ಟೆ ಮಲ್ಲಾರಾಧ್ಯ ಅವರಿಂದ ರಾಜವಿಕ್ರಮ ಹರಿಕಥೆ ಆಯೋಜಿಸಲಾಗಿತ್ತು.

## ಜೂಜುಕೋರರ ಬಂಧನ

### 8,750 ರೂ. ನಗದು ವಶ

**ಚಾಮರಾಜನಗರ:** ಅಗರ ಮಾಂಬಳ್ಳಿ ಪೊಲೀಸ್ ಠಾಣೆಯ ಸರಹದ್ದಿನ ಕುಂತೂರು ಗ್ರಾಮದಲ್ಲಿ ಅಂದರ್–ಬಾಹರ್ ಇಸ್ಪೀಟ್ ಜೂಜಾಟ ಆಡುತ್ತಿದ್ದ 8 ಮಂದಿಯನ್ನು ಬಂಧಿಸಿ, 8,750 ರೂ. ಗಳನ್ನು ಅಗರ ಮಾಂಬಳ್ಳಿ ಪೊಲೀಸ್ ಠಾಣೆಯ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಅಕ್ರಮ ಮದ್ಯ ಸಾಗಣೆ : ಪ್ರಕರಣ ದಾಖಲು

**ಚಾಮರಾಜನಗರ:** ತಾಲೂಕಿನ ಸಂತೇಮರಹಳ್ಳಿಯ ಹೋಬಳಿ ಕೇಂದ್ರದ ಸಂತೇಮರಹಳ್ಳಿ– ಚಾಮರಾಜನಗರ ರಸ್ತೆಯ ಶ್ರೀ ರೇವಮ್ಮ ಪುಟ್ಟಬಸಪ್ಪ ಕಲ್ಯಾಣ ಮಂಟಪದ ಬಳಿ ಆಗಸ್ಟ್ 30ರಂದು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ 2,518 ರೂ. ಮೌಲ್ಯದ ಮದ್ಯವನ್ನು ಪೊಲೀಸರು ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದಾರೆ.

ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದ ಬಿ.ಲಿಂಗರಾಜುನಾಯಕ ಎಂಬುವವರನ್ನು ವಶಕ್ಕೆ ಪಡೆಯಲಾಗಿದೆ. ಸಂತೇಮರಹಳ್ಳಿ ಗ್ರಾಮದ ಶ್ರೀ ರಾಘವೇಂದ್ರ ವೈನ್ಸ್ ಸ್ಟೋರ್ ಕ್ಯಾಷಿಯರ್ ರಘು ಹಾಗೂ ಬಿ. ಲಿಂಗರಾಜು ನಾಯಕ ವಿರುದ್ಧ ಸಂತೇಮರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಬೇಗೂರಲ್ಲಿ ಶ್ರೀ ನಾರಾಯಣ ಗುರು ಜಯಂತಿ


ಬ್ರಹ್ಮಶ್ರೀ ನಾರಾಯಣ ಗುರುಗಳ 170ನೇ ಜಯಂತ್ಯುತ್ಸವವನ್ನು ಆಚರಿಸಿದರು.

ಬೇಗೂರು,ಆ.31– ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಬ್ರಹ್ಮಶ್ರೀ ನಾರಾಯಣ ಗುರುಗಳ ಬಗ್ಗೆ ಅಧ್ಯಯನ ಅವಶ್ಯಕ ಎಂದು ಮೈಸೂರು ಯುವ ವೇದಿಕೆ ಅಧ್ಯಕ್ಷ ಡಾ.ಎಸ್.ಟಿ.ರಾಜು ತಿಳಿಸಿದರು.

ತಾಲೂಕು ರಾಷ್ಟ್ರೀಯ ಹಬ್ಬಗಳ ಸಮಿತಿ ವತಿಯಿಂದ ಆಯೋಜಿಸಲಾದ ಬ್ರಹ್ಮಶ್ರೀ ನಾರಾಯಣ ಗುರುಗಳ 170ನೇ ಜಯಂತ್ಯುತ್ಸವದಲ್ಲಿ ಕಾರ್ಯಕ್ರಮವನ್ನು ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ವಿದ್ಯೆಯಿಂದ ಸ್ವತಂತ್ರರಾಗಿ ಸಂಘಟನೆಯಿಂದ ಬಲಯುತರಾಗಿ ಎಂಬ ಶ್ರೀ ನಾರಾಯಣಗುರುಗಳ ಸಂದೇಶವನ್ನು ನಾವೆಲ್ಲರು ಅನುಸರಿಸಬೇಕಿದೆ. ಬುದ್ಧ, ಬಸವಣ್ಣ, ಅಂಬೇಡ್ಕರ್ ಚಿಂತನೆಗಳ ಕ್ರೋಢೀಕರಣವೇ ಶ್ರೀ ನಾರಾಯಣಗುರು ಎಂದರೆ ತಪ್ಪಾಗಲಾರದು. ಅಂದಿನ ಕಾಲದಲ್ಲಿ ಇದ್ದ ಜಾತಿ ವ್ಯವಸ್ಥೆ ಹೋಗಲಾಡಿಸಲು ವಿದ್ಯೆ ಹಾಗೂ ಸಂಘಟನೆಯಿಂದಲೆ ಸಾಧ್ಯ ಎಂಬುದನ್ನು ತಮ್ಮ ಅಧ್ಯಯನದಿಂದ ಜಗತ್ತಿಗೆ ಸಂದೇಶ ನೀಡಿದವರು ನಾರಾಯಣ ಗುರು ಎಂದರು.

ತಾಲೂಕು ಆರ್ಯ ಈಡಿಗರ ಅಧ್ಯಕ್ಷ ಗೋಪಾಲಸ್ವಾಮಿ ಮಾತನಾಡಿದರು. ಇದೇ ಸಂದರ್ಭದಲ್ಲಿ ತಹಸೀಲ್ದಾರ್ ರಮೇಶ್ ಬಾಬು, ನಾರಾಯಣಗುರು ಜಯಂತಿ ಆಚರಣಾ ಸಮಿತಿ ಉಪಾಧ್ಯಕ್ಷ ಎನ್.ಆರ್. ಮೊಹಲ್ಲಾ ಶ್ರೀನಿವಾಸ್, ಉಪಾಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಪಿ.ಚಂದ್ರು, ಖಜಾಂಚಿ ಎಚ್.ಜಿ. ನಾರಾಯಣಸ್ವಾಮಿ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಮೋಹನ್, ಕಾರ್ಯದರ್ಶಿ ರಿಯಾಜ್ ಪಾಷ, ಕರುನಾಡು ಸಂಘಟನೆಯ ಅಧ್ಯಕ್ಷ ಮುನಿರ್‌ಪಾಷ, ಮುಖಂಡರಾದ ಸುರೇಶ್, ಮಂಜು, ರಾಜೇಶ್, ಕೃಷ್ಣಣ್ಣ, ಸಿದ್ದರಾಜು, ಶ್ರೀನಿವಾಸ್, ಸಿಂಧುವಳ್ಳಿ ಆನಂದ್, ಮಹದೇವು ಆರ್ಯ ಮುಂತಾದವರಿದ್ದರು.

## ಸಂಸದ ಸುನಿಲ್ ಬೋಸ್ ಹುಟ್ಟುಹಬ್ಬಕ್ಕೆ ಶುಭ ಕೋರಿದ ಗಣ್ಯರು



ಚಾಮರಾಜನಗರ ಸಂಸದ ಸುನಿಲ್ ಬೋಸ್ ಹುಟ್ಟುಹಬ್ಬಕ್ಕೆ ಶುಭ ಕೋರಿದ ಗಣ್ಯರು. ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ಮುಖಂಡ ಜಿ.ಶ್ರೀನಾಥ್ ಬಾಬು, ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಜಿ. ರಾಘವೇಂದ್ರ, ಶ್ರೀಪಾಲ್, ರವಿ, ಮಾದೇಶ್ ಹಾಗೂ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

## ಖೋ ಖೋ ಪಂದ್ಯದಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆ


ಆಲೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳು ಸಂತೇಮರಳ್ಳಿ ನಡೆದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಖೋ ಖೋ ಪಂದ್ಯದಲ್ಲಿ ಜಯಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

# ಈಸಬೇಕು ಇದ್ದು ಜೈಸಬೇಕು...


■ ವಿದ್ವಾನ್ ಚಂದ್ರಶೇಖರ್
ಮೊ.9448167521


ಅಗಾಧವಾದ ಜನಸಂಖ್ಯೆಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ನಮ್ಮ ದೇಶದ ಪ್ರತಿಯೊಬ್ಬ ನಾಗರಿಕರಿಗೂ ಈ ಶೀರ್ಷಿಕೆ ಅನ್ವಯವಾಗುತ್ತದೆ. ಹೌದು ! ಜನಸಂಖ್ಯೆ ಶಕ್ತಿಯೂ ಹೌದು.. ಸಮಸ್ಯೆಯೂ ಹೌದು. ಸುಖ ಜೀವನದ ಕನಸು ಕಾಣುವುದು ಸಹಜವೆನಿಸಿದರೂ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅದು ಅಷ್ಟೊಂದು ಸುಲಭವಲ್ಲ.ವ್ಯವಸ್ಥೆಯ ಮಧ್ಯದಲ್ಲಿಯೇ ನಮಗೊಂದು ದಾರಿ ಮಾಡಿಕೊಳ್ಳುವುದಿದೆಯಲ್ಲ ಅದು ನಮ್ಮ ಮನೋಭಾವ ಮತ್ತು ಇಚ್ಛಾಶಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ವಿಷಮ ಪರಿಸ್ಥಿತಿಯನ್ನು ಎದುರಿಸುವವನು ಮಾತ್ರ ಪರಿಹಾರದ ಬಗ್ಗೆ ಯೋಚಿಸಬಲ್ಲ ಪಲಾಯನವಾದಿಗಳಿಗೆ ಈ ಪ್ರಪಂಚದಲ್ಲಿ ಸ್ಥಾನವಿಲ್ಲ.

ನಮ್ಮ ಹೋರಾಟ ಆರಂಭವಾಗುವುದು ಹುಟ್ಟುವ ಮೊದಲೇ ಅಲ್ಲವೇ! ಸಾವಿರಾರು ಅಂಡಾಣುಗಳ ಸ್ಪರ್ಧೆಯಲ್ಲಿ ನಾವೊಂದು ಪಿಂಡವಾಗಿ ಬ್ರಹ್ಮಾಂಡ ತಲುಪಿದ್ದೇವೆ. ಇಲ್ಲಿಗೆ ಬಂದ ಮೇಲೆ ಅಸ್ತಿತ್ವಕ್ಕಾಗಿ ಹೋರಾಡುತ್ತೇವೆ ಎಷ್ಟು ಜನರಿಗೆ ಹೂವಿನ ಹಾಸಿಗೆಯ ಸ್ವಾಗತ ಸಿಗುತ್ತದೆ ಈ ಸಮಾಜದಲ್ಲಿ? ಬೆರಳೆಣಿಕೆಯ ಮಂದಿಗಷ್ಟೇ ಅಲ್ಲವೇ? ಕೆಲವರು ಪ್ರವಾಹದ ಜೊತೆಗೇ ಈಜಿದರೆ ಕೆಲವರು ಪ್ರವಾಹದ ವಿರುದ್ಧವಾಗಿ ಈಜುತ್ತಾರೆ. ಒಟ್ಟಿನಲ್ಲಿ ಜೈಸಬೇಕು ಎನ್ನುವ ಆಕಾಂಕ್ಷೆ ಇದೆಯಲ್ಲ ಅದು ಈಜುವುದನ್ನು ಕಲಿಸುತ್ತದೆ. ಆದ್ದರಿಂದಲೇ ಹಿರಿಯರು ಹೇಳಿದ್ದು **'ಅವಶ್ಯಕತೆಯೇ ಆವಿಷ್ಕಾರದ ತಾಯಿ'** ಎಂದು. ಎಲ್ಲ ಸಮಸ್ಯೆಗಳಿಗೂ ಪರಿಹಾರ ಇದ್ದೇ ಇದೆ ಎನ್ನುವುದು ಬಲ್ಲವರ ಮಾತು. ಅದು ನಮಗೆ ಒಂದು ಭರವಸೆಯನ್ನು ನೀಡುತ್ತದೆ. ಸಮಸ್ಯೆ ಇಲ್ಲದವರು ಎಲ್ಲಿದ್ದಾರೆ ಹೇಳಿ? ಚಿನ್ನದ ಚಮಚವನ್ನು ಬಾಯಿಯಲ್ಲಿ ಇಟ್ಟುಕೊಂಡು ಹುಟ್ಟಿದವರಿಗೆ ಸಂಪತ್ತೇ ಒಂದು ಸಮಸ್ಯೆಯಾದರೆ, ದಿನದ ಹೊಟ್ಟೆ ತುಂಬಿಸಲು ಬೆವರಿಳಿಸುವ ಸಾಮಾನ್ಯ ವ್ಯಕ್ತಿಗೆ ತನ್ನ ಸಣ್ಣಪುಟ್ಟ ಆಸೆಗಳನ್ನು ಈಡೇರಿಸಿಕೊಳ್ಳಲಾಗದ ಇನ್ನೊಂದು ಸಮಸ್ಯೆ ಗೃಹಸ್ಥರಿಗೆ ಸಂಸಾರದ ನಿರ್ವಹಣೆಯೇ ಒಂದು ಸಮಸ್ಯೆಯಾದರೆ, ಮಕ್ಕಳಿಗೆ ಓದುವುದೇ ಒಂದು ಚಿಂತೆ.

### ಹಾಗಾದರೆ ಇದರ ನಿರ್ವಹಣೆ ಹೇಗೆ?

ಭರವಸೆಯನ್ನು ಕಳೆದುಕೊಳ್ಳದೆ ಉತ್ಸಾಹದಿಂದ ಮುನ್ನುಗ್ಗಿದರೆ ಅದೊಂದು ಸಮಸ್ಯೆ ಎನ್ನಿಸುವುದೇ ಇಲ್ಲ. ಆತ್ಮ ಗೌರವದೊಂದಿಗೆ ಜೀವಿಸಬೇಕು ಎನ್ನುವ ಛಲವೊಂದಿದ್ದರೆ ಪ್ರವಾಹದ ನಡುವೆಯೇ ಈಜಿ ದಡ ಸೇರುತ್ತಾನೆ. **'ಎಲ್ಲರೊಳಗೊಂದಾಗು ಮಂಕುತಿಮ್ಮ'** ಡಿವಿಜಿಯವರ ಈ ಮಾತು ಸಾರ್ವಕಾಲಿಕ ಸತ್ಯವಲ್ಲವೇ ? ಈ ಸಮಾಜ ಮತ್ತು ವ್ಯವಸ್ಥೆ ಬದಲಾಗುತ್ತದೆ ಎಂದು ನಿರೀಕ್ಷೆ ಮಾಡುವುದಕ್ಕಿಂತ ನೂರಾರು ಜನರಲ್ಲಿ ನಾವೂ ಒಬ್ಬರಾಗಿ ಗುರಿ ಮುಟ್ಟುವ ಬಗೆಗೆ ಯೋಚಿಸಬೇಕು. ಆಗ ಮಾತ್ರ ಯಾವುದೇ ಪರಿಸ್ಥಿತಿಯನ್ನು ಎದುರಿಸುವ ಮತ್ತು ಜಯಿಸುವ ವಿಶ್ವಾಸ ಬರುತ್ತದೆ. ಆಕಾಂಕ್ಷೆ ಮತ್ತು ಮಹತ್ವಾಕಾಂಕ್ಷೆಯನ್ನು ನಾವು ಸರಿಯಾಗಿ ಗುರುತಿಸಬೇಕು. ಆಕಾಂಕ್ಷೆ ಸಹಜವಾದ ಗುಣ. ಆದರೆ ಮಹತ್ವಾಕಾಂಕ್ಷೆ ಒತ್ತಡಕ್ಕೆ ಕಾರಣವಾಗುತ್ತದೆ. ಅದು ನಮ್ಮ ಜೀವನದಲ್ಲಿ ಒಂದು ಅಸಹಜತೆಯನ್ನು ಸೃಷ್ಟಿ ಮಾಡುತ್ತದೆ.

ಮೊದಲು ನಮ್ಮ ಮಿತಿಯನ್ನು ಅರಿತುಕೊಳ್ಳುವ ಕೆಲಸವಾಗಬೇಕು. ಮನೆ ಮನೆಯನ್ನು ತಿರುಗಿ ಹೂವನ್ನು ಮಾರುವವಳೋ, ಸೂರ್ಯ ಎತ್ತರಕ್ಕೆ ಏರುವ ಮೊದಲು ಹತ್ತಾರು ಮನೆಗಳಿಗೆ ದಿನಪತ್ರಿಕೆಗಳನ್ನು ಹಾಕಿ ತನ್ನ ಶಾಲೆಯ ಕಡೆ ಮುಖ ಮಾಡುವ ಹುಡುಗನೋ ತಮ್ಮ ಮಿತಿಯನ್ನು ಅರಿತು ಕೆಲಸ ಮಾಡುತ್ತಾರೆ. ಆದ್ದರಿಂದಲೇ ಪ್ರತಿ ದಿನವನ್ನೂ ನೆಮ್ಮದಿಯಿಂದಲೇ ಕಳೆಯುತ್ತಾರೆ. ಮಿತಿಯನ್ನು ಅರಿಯದೆ ಮಹತ್ವಾಕಾಂಕ್ಷೆಯ ಮೆಟ್ಟಿಲೇರಿದವನು ವಾತಾನುಕೂಲಿತ ಕೋಣೆಯಲ್ಲಿ ಇದ್ದರೂ ಬೆವರುತ್ತಿರುತ್ತಾನೆ. ಪ್ರತಿಯೊಂದು ಬಲೂನಿಗೂ ಅದರದ್ದೇ ಆದ ಸಾಮರ್ಥ್ಯ ಇರುತ್ತದೆ ಅಲ್ಲವೇ? ಸಾಮರ್ಥ್ಯಕ್ಕಿಂತ ಹೆಚ್ಚು ಗಾಳಿ ತುಂಬಿದಾಗ ಒಡೆಯುವುದು ಸ್ವಾಭಾವಿಕ.

* * * *

ನಾವಿಂದು ಮಕ್ಕಳಿಗೆ ಬದುಕುವ ಕಲೆಯನ್ನು ಕಲಿಸುತ್ತಿಲ್ಲ. ಅದು ಈಗಿನ ಪಠ್ಯ ಪುಸ್ತಕದಿಂದಲೋ ಅಥವಾ ವೈಭವೋಪೇತ ವ್ಯವಸ್ಥೆಗಳಿರುವ ಶಾಲೆಗೆ ಸೇರಿಸುವುದರಿಂದಲೋ ಬರಲಾರದು. ಯಾಕೆಂದರೆ ಇಂದಿನ ಪಠ್ಯ ಪುಸ್ತಕಗಳು ಪಟ್ಟಭದ್ರ ಹಿತಾಸಕ್ತಿಗಳ ಮನೋಭಾವವನ್ನು ಪ್ರತಿಬಿಂಬಿಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಸರಕುಗಳಾಗಿವೆಯೇ ಹೊರತು ಬದುಕನ್ನು ಕಟ್ಟಿಕೊಳ್ಳುವ ಕಲೆಯನ್ನು ಕಲಿಸುವುದಿಲ್ಲ.

ಪೂಜ್ಯ ಶ್ರೀ ಜಗದಾತ್ಮಾನಂದಜೀಯವರ 'ಬದುಕಲು ಕಲಿಯಿರಿ' ಎನ್ನುವ ಪುಸ್ತಕ ಮಕ್ಕಳ ಓದುವ ಕೋಣೆಯಲ್ಲಿ ಇರುವಂತೆ ನಾವು ನೋಡಿಕೊಳ್ಳಬೇಕು. ಸಮಸ್ಯೆಯನ್ನು ಎದುರಿಸುವ ಅವಕಾಶವನ್ನು ಮಕ್ಕಳಿಗೆ ನೀಡಬೇಕು. ನಾವಿಂದು ಹಾಗೆ ಮಾಡುತ್ತಿದ್ದೇವೆಯೇ ? ಇಲ್ಲ. ಮಕ್ಕಳಲ್ಲಿ ಕಲ್ಪನಾ ಶಕ್ತಿಗಿಂತ ಅನುಕರಣಾ ಶಕ್ತಿ ಅಧಿಕವಾಗಿರುತ್ತದೆ ಎನ್ನುವುದು ಸರ್ವವಿದಿತ. ಸಾಮಾನ್ಯವಾಗಿ ಮಕ್ಕಳು ನಾವು ಹೇಳಿದ್ದನ್ನು ಮಾಡುವುದಿಲ್ಲ. ನಾವು ಮಾಡಿದ್ದನ್ನು ಮಾಡುತ್ತವೆ ಎನ್ನುವುದು ಪ್ರಚಲಿತದಲ್ಲಿ ಇರುವ ಮಾತು. ನಮ್ಮ ನಡತೆ ಮಕ್ಕಳಲ್ಲಿ ಅಗಾಧವಾದ ಪರಿಣಾಮವನ್ನು ಬೀರುತ್ತದೆ.

* * * *


ಒಂದು ಕಾಲವಿತ್ತು. ಕೂಡು ಕುಟುಂಬ. ಹತ್ತಿಪ್ಪತ್ತು ಸದಸ್ಯರು.. ಒಟ್ಟೊಟ್ಟಿಗೆ ಊಟ, ನಿದ್ದೆ. ಮಕ್ಕಳನ್ನು ತೀರ ಮುಚ್ಚಟೆಯಾಗಿ ಬೆಳೆಸುತ್ತಿರಲಿಲ್ಲ. ಹೆಜ್ಜೆ ಹೆಜ್ಜೆಗೂ ನಿಗಾ ವಹಿಸುತ್ತಿರಲಿಲ್ಲ. ಅದು ಸಾಧ್ಯವೂ ಇರುತ್ತಿರಲಿಲ್ಲ. ಮಕ್ಕಳಿಗೆ ಸ್ವತಂತ್ರವಾದ ವಾತಾವರಣ ಸಹಜವಾಗಿತ್ತು ಸಂದರ್ಭಕ್ಕೆ ಸರಿಯಾಗಿ ಪ್ರತಿಕ್ರಿಯಿಸುವ ಮನೋಭಾವ ಸ್ವಾಭಾವಿಕವಾಗಿ ಬರುತ್ತಿತ್ತು ಆದರೆ ಇಂದು ದೊಡ್ಡ ಬಂಗಲೆ.. ಇರುವವರು ಮೂರು ಮತ್ತೊಂದು ಸದಸ್ಯರು. ಅಪ್ಪ ಅಮ್ಮರಿಗೆ ಅವರದೇ ಧಾವಂತ. ಮಗುವಿನೊಂದಿಗೆ ಸಮಯ ಕಳೆಯುವವರ್‍ಯಾರು? ಅದೇ ಟಿವಿ, ಅದೇ ಮೊಬೈಲು. ಮಗುವಿಗೆ ಮಾತನಾಡುವ ಅವಕಾಶವೆಲ್ಲಿ? ನಾಗರಿಕ ಪ್ರಪಂಚದಲ್ಲಿ ಮನುಷ್ಯರೊಟ್ಟಿಗೆ ಮಾತನಾಡುವುದೇ ಮಹಾಪರಾಧವೆನ್ನುವ ಈ ಕಾಲದಲ್ಲಿ ಮಗು ಸಮಾಜವನ್ನು ಹೇಗೆ ಎದುರಿಸಬೇಕು? 'ಅತಿಥಿ ದೇವೋಭವ' ಎನ್ನುವುದು ನಮ್ಮ ಸನಾತನ ಪರಂಪರೆಯ ಘೋಷವಾಕ್ಯ. ಆದರೆ ಇಂದು ನಾವು ಅದನ್ನು ಒಂದು ವ್ಯವಹಾರಿಕ ಚೌಕಟ್ಟಿನಲ್ಲಿ ಬಂಧಿಸಿದ್ದೇವೆ. ಯಾವುದೇ ಅತಿಥಿಯು ಕೂಡ ಪೂರ್ವ ಸೂಚನೆ ಇಲ್ಲದೆ ಯಾರ ಮನೆಗೂ ಹೋಗುವ ವಾತಾವರಣವೇ ಇಲ್ಲ. ಇದು ನಮ್ಮೆಲ್ಲರ ಅನುಭವಕ್ಕೆ ಬಂದಿರುತ್ತದೆ. ಮೊದಲೇ ತಿಳಿಸಬೇಕು, ಸಮಯ ನಿಗದಿಯಾಗಬೇಕು, ಬಂದ ಕೆಲಸ ಮುಗಿಸಿ ತಕ್ಷಣ ಹೊರಡಬೇಕು. ಎಲ್ಲವೂ ಯಾಂತ್ರಿಕವಾಗಿ ನಡೆದು ಹೋಗುತ್ತಿದೆ. ಮಕ್ಕಳು ಅತಿಥಿಗಳೊಂದಿಗೆ ಬೆರೆಯುವ, ಮನ ಬಿಚ್ಚಿ ಮಾತನಾಡುವ, ಅವಕಾಶವೇ ಇಲ್ಲ. ಯಾಕೆಂದರೆ ನಾವು ಮಕ್ಕಳಿಗೋಸ್ಕರವೇ ಕೋಣೆ ಕಟ್ಟಿಸಿದ್ದೇವೆ. ಸಕಲ ಸೌಭಾಗ್ಯಗಳೂ ಅಲ್ಲಿವೆ. ಊಟ, ನಿದ್ದೆ ಎಲ್ಲವೂ ಅಲ್ಲಿಯೇ. ಇನ್ನೇನು ಬೇಕು ಮಗುವಿನ ಮನಸ್ಸು ಮುದುಡಲು? ಹೌದು, ಔಪಚಾರಿಕ ಶಿಕ್ಷಣ ಮಕ್ಕಳ ಬುದ್ಧಿ ಶಕ್ತಿಯನ್ನು ಪ್ರಖರಗೊಳಿಸುತ್ತದೆ. ಆದರೆ ಅನೌಪಚಾರಿಕ ಶಿಕ್ಷಣ ವ್ಯಕ್ತಿತ್ವದ ಬೆಳವಣಿಗೆಯನ್ನು ನಿರ್ದೇಶಿಸುತ್ತದೆ. ನಾವಿಂದು ಅನೌಪಚಾರಿಕ ಶಿಕ್ಷಣವನ್ನು ನೀಡಲಾಗದ ಸ್ಥಿತಿಯಲ್ಲಿದ್ದೇವೆ. ಬೆಳಗಾದರೆ ಮನೆಪಾಠ. ಸಂಜೆಯಾದರೆ ಗೃಹಪಾಠ. ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚು ಗಮನಕೊಡದ ವ್ಯಾವಹಾರಿಕ ಶಾಲಾ ಶಿಕ್ಷಣ. ಆದ್ದರಿಂದಲೇ ಇಂದಿನ ಮಕ್ಕಳು ಸಂವಹನದಲ್ಲಿ ಸೋಲುವುದು.

* * * *


ಕೌಶಲದ ಕೊರತೆಯೇ ಇಂದಿನ ಯುವಕರ ಹಿನ್ನಡೆಗೆ ಕಾರಣ. ಯಾವುದೋ ಒಂದು ಡಿಗ್ರಿ ಪಡೆದರೆ ಕೆಲಸ ಸಿಗುವ ಕಾಲ ಇದಲ್ಲ. ಒಂದು ಸಮೀಕ್ಷೆಯ ಪ್ರಕಾರ ವೃತ್ತಿಪರ ಶಿಕ್ಷಣ ಪಡೆದವರಲ್ಲಿ ಕೇವಲ ಶೇಕಡ 20ರಷ್ಟು ಯುವಕರಿಗೆ ಕೆಲಸ ಮಾಡುವ ಸಾಮರ್ಥ್ಯವಿರುವುದು ಕಂಡು ಬಂದಿದೆ. ಉಳಿದ ಶೇಕಡ 80ರಷ್ಟು ಯುವಕರು ನಮಗೆ ಕೆಲಸವಿಲ್ಲವೆಂದು ಬೊಬ್ಬೆ ಹೊಡೆದರೆ ಪ್ರಯೋಜನವಿಲ್ಲ. ಅದು ಕೇವಲ ರಾಜಕೀಯ ವ್ಯಕ್ತಿಗಳಿಗೊಂದು ಅಸ್ತ್ರವಷ್ಟೇ. ಮನಸ್ಸಿದ್ದಲ್ಲಿ ಮಾರ್ಗ ಇದ್ದೇ ಇದೆ. ನಾವು ಆ ಮಾರ್ಗವನ್ನು ಹುಡುಕಬೇಕು. ಸೃಜನಶೀಲ ಮನಸ್ಸಿಗೆ ಕೊರಗಲು ಸಮಯವಿರುವುದಿಲ್ಲ. ಹೊಸದನ್ನು ಯೋಚಿಸಬೇಕು, ಹೊಸದನ್ನು ಸೃಜಿಸಬೇಕು. ಪದವಿಯ ಪ್ರಮಾಣ ಪತ್ರವು ಅರ್ಹತೆಯನ್ನು ಮಾತ್ರ ಕೊಡುತ್ತದೆ. ಆದರೆ ಕೌಶಲ ಯೋಗ್ಯತೆಯನ್ನು ಕೊಡುತ್ತದೆ. ಇತ್ತೀಚಿನ ದಿನಗಳಲ್ಲಿ ಒಂದು ವಿಚಿತ್ರವಾದ ಚರ್ಚೆಯನ್ನು ನಾವು ಗಮನಿಸುತ್ತಿದ್ದೇವೆ. ಕೆಲಸ ಮಾಡಲು ಜನರೇ ಸಿಗುತ್ತಿಲ್ಲ ಎನ್ನುವವರು ಒಂದು ಕಡೆಯಾದರೆ, ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ ಎನ್ನುವ ಆಪಾದನೆ ಇನ್ನೊಂದು ಕಡೆ. ಹಾಗಾದರೆ ಈ ತಾಳಮೇಳ ತಪ್ಪಿದ್ದೆಲ್ಲಿ ? ನಮ್ಮಲ್ಲಿಯೇ ಪರಿಹಾರವಿದೆ. ಪರಂಪರಾಗತವಾಗಿ ಬಂದಿರುವ ಕುಲಕಸುಬುಗಳನ್ನು ನಾವಿಂದು ಬಿಟ್ಟಿದ್ದೇವೆ. ಮಾಡುವ ಕೆಲಸಕ್ಕೆ ಗೌರವ ಕೊಟ್ಟರೆ ನಮ್ಮ ಗೌರವ ಸ್ವಾಭಾವಿಕವಾಗಿಯೇ ವೃದ್ಧಿಯಾಗುತ್ತದೆ ಎನ್ನುವುದಕ್ಕೆ ನಮ್ಮವರೇ ಆದ ಶ್ರೀ ಯೋಗಿರಾಜ ಅವರಿಗಿಂತ ಬೇರೆ ಉದಾಹರಣೆ ಬೇಕೆ? ನೀತಿ, ನಿಯಮಬದ್ಧವಾದ ಯಾವುದೇ ಕೆಲಸವನ್ನು ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ನಮ್ಮಲ್ಲಿ ಒಂದು ಕೊರತೆ ಎದ್ದು ಕಾಣುತ್ತದೆ. ಬಹುಶಃ ಅದೇ ನಮ್ಮ ಜೀವನೋತ್ಸಾಹವನ್ನು ಕುಗ್ಗಿಸುತ್ತದೆ. ಯಾವುದದು? ನಮ್ಮ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯವನ್ನು ನಾವು ಗುರುತಿಸುವಲ್ಲಿ ವಿಫಲರಾಗುತ್ತಿರುವುದೇ ನಮ್ಮ ವಿಫಲತೆಗೆ ಕಾರಣ.

* * * *

ಈಗಿನ ಶಿಕ್ಷಣ ಪದ್ಧತಿಯಂತೂ ಮುಂದಿನ ಹಂತಕ್ಕೆ ಹೋಗುವ ಮೆಟ್ಟಿಲುಗಳಾಗಿವೆ ಅಷ್ಟೇ. ಅಲ್ಲಿ ನಮ್ಮ ಸಾಮರ್ಥ್ಯವನ್ನು ಗುರುತಿಸುವ ಅಥವಾ ಅದಕ್ಕೊಂದು ದಿಕ್ಕು ತೋರಿಸುವ ಕೆಲಸವಾಗುತ್ತಿಲ್ಲ. ಪದವಿ ಹಂತದವರೆಗೂ ನಿರ್ದಿಷ್ಟ ಪಠ್ಯದ ಅನಿವಾರ್ಯತೆಯನ್ನು ನಾವೇ ಸೃಷ್ಟಿಸಿಕೊಂಡಿದ್ದೇವೆ. ಆದ್ದರಿಂದಲೇ ಪಠ್ಯದಾಚೆಗೆ ಇಣುಕುವ ಮನೋಭಾವವೇ ನಮ್ಮಲ್ಲಿಲ್ಲ. ಯಾಕೆಂದರೆ ಅದಕ್ಕೆ ಪೂರಕವಾದ ವಾತಾವರಣವಿಲ್ಲ. ಬೆಳೆಯುವ ಹಂತದಲ್ಲಿರುವ ಮಕ್ಕಳನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಆಗ ಅವರ ಸಾಮರ್ಥ್ಯ ನಮ್ಮ ಅಂದರೆ ಹಿರಿಯರ ಅರಿವಿಗೆ ಬರುತ್ತದೆ, ಬರಬೇಕು. ಇತ್ತೀಚಿನ ದಿನಗಳಲ್ಲಿ ಹದಿಹರೆಯದ ವಿದ್ಯಾರ್ಥಿಗಳ ಆತ್ಮಹತ್ಯೆಗಳ ಸರಣಿಯನ್ನು ಗಮನಿಸಿದರೆ ಅದರ ಹಿಂದಿರುವ ಕಾರಣ ಮಾನಸಿಕ ಒತ್ತಡವೇ. ಇಂದಿನ ಮಕ್ಕಳಲ್ಲಿ ನಾವು ಸಮಸ್ಯೆಯನ್ನು ಎದುರಿಸುವ ಅಥವಾ ನಿವಾರಿಸುವ ಕಲೆಯನ್ನು ಕಲಿಸುತ್ತಿಲ್ಲ ಬದಲಾಗಿ ಅವರ ಸಾಮರ್ಥ್ಯಕ್ಕೆ ಮೀರಿದ ಏನನ್ನೋ ನಿರೀಕ್ಷಿಸುತ್ತಿದ್ದೇವೆ. ನಿರೀಕ್ಷೆಗೆ ಸ್ಪಂದಿಸಲು ಸಾಧ್ಯವಾಗದ ಮಕ್ಕಳು ಆತ್ಮಹತ್ಯೆಯಂತಹ ದಾರಿಯನ್ನು ತುಳಿಯುತ್ತಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಮಾತ್ರ ಈ ಸಮಾಜದಲ್ಲಿ ಅತ್ಯುತ್ತಮ ಗುಣಮಟ್ಟದ ಜೀವನವನ್ನು ನಡೆಸಬಲ್ಲರು, ನಿರ್ದಿಷ್ಟ ವೃತ್ತಿಯವರು ಮಾತ್ರ ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸಬಲ್ಲರು ಎನ್ನುವ ಮನೋಭಾವವನ್ನು ನಾವು ಮೊದಲು ಬಿಡಬೇಕು. ಸಾಮಾನ್ಯ ಜನರು ಕೂಡ ಹಸನಾದ ಬದುಕನ್ನು ಕಟ್ಟಿಕೊಂಡಿದ್ದಾರೆ ಎನ್ನುವ ಕಟುಸತ್ಯವನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಬೇಕು. ಮುಂಬೈನ ಲೋಕಲ್ ಟ್ರೈನಿನಲ್ಲಿ ಒಮ್ಮೆ ಪ್ರಯಾಣದ ಅನುಭವವನ್ನು ಪಡೆದರೆ ಬಹುಶಃ ಜೀವನದರ್ಶನಕ್ಕೆ ಬೇರೆ ಉದಾಹರಣೆ ಬೇಡ. ನಿರಾಯಾಸವಾಗಿ ಕೆಲಸ ಮಾಡುವ ಸ್ಥಳವನ್ನು ತಲುಪುತ್ತೇನೆ ಎನ್ನುವ ಮನೋಭಾವದವರು ಟ್ರೈನ್ ಹತ್ತಲಿಕ್ಕೇ ಸಾಧ್ಯವಾಗುವುದಿಲ್ಲ. ಸಮುದ್ರದಲ್ಲಿ ಅಲೆಗಳು ನಿಂತ ಮೇಲೆ ಸ್ನಾನ ಮಾಡುತ್ತೇನೆ ಎನ್ನುವವನು ತನ್ನ ಜೀವನದಲ್ಲಿ ಏನನ್ನು ಸಾಧಿಸಬಲ್ಲ ? ಸಾವಿರಾರು ಜನರಲ್ಲಿ ನಾನೊಬ್ಬನಾಗಬೇಕು, ಅವರ ಮಧ್ಯದಲ್ಲಿಯೇ ನನಗೊಂದಿಷ್ಟು ಜಾಗ ಮಾಡಿಕೊಳ್ಳಬೇಕು, ನನ್ನ ಗುರಿ ತಲುಪಬೇಕು ಎನ್ನುವುದೇ ಮೂಲ ಮಂತ್ರವಾದರೆ ಈ ಜೀವನದಲ್ಲಿ ಯಾವುದು ಅಸಾಧ್ಯ? ಈಸಬೇಕು ಇದ್ದು ಜಯಿಸಬೇಕು ಎಂದಾದರೆ ನಾವು ರಬ್ಬರಿನ ತುಂಡಾಗಬೇಕು ಮರದ ದಿಮ್ಮಿಯಾಗಬಾರದು. ಯಾಕೆಂದರೆ ರಬ್ಬರು ಯಾವುದೇ ಜಾಗದಲ್ಲಿಯೂ ತನ್ನತನವನ್ನು, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ.



# ವಾರಭವಿಷ್ಯ



**1.9.2024 ರಿಂದ 7.9.2024**

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಸಿಂಹ, ಚಂದ್ರ–ಕಟಕ, ಸಿಂಹ–ಕನ್ಯಾ ತುಲಾ, ಕುಜ–ಮಿಥುನ, ಬುಧ–ಕಟಕ, ಗುರು–ವೃಷಭ, ಶುಕ್ರ–ಕನ್ಯಾ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.


**ವಿ.ಕೇಶವಮೂರ್ತಿ**
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720




### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರದಲ್ಲಿ ಆದಾಯ ಚೆನ್ನಾಗಿರುತ್ತದೆ. ಅರಸಿ ಬಂದದ್ದನ್ನು ತಿರಸ್ಕರಿಸಿದರೆ ಪಶ್ಚಾತ್ತಾಪಪಡಬೇಕಾದೀತು. ಆದಾಯಕ್ಕೆ ತಕ್ಕಂತೆ ಖರ್ಚುಗಳೂ ಎದುರಾಗಲಿದೆ. ಯಾವುದೇ ಆಸ್ತಿ ಖರೀದಿಗೆ ಮುನ್ನ ದಾಖಲೆಗಳನ್ನು ನುರಿತವರಿಂದ ಪರಿಶೀಲನೆ ಮಾಡಿಸಿ ಮುಂದುವರೆಯಿರಿ. ಮುಖ್ಯ ವಿಷಯಗಳಲ್ಲಿ ಪತ್ನಿ–ಪುತ್ರರ ಸಹಕಾರ ದೊರೆಯುವುದು. ಸ್ತ್ರೀಯರಿಗೆ ರಕ್ತ ದೋಷದಿಂದ ಆರೋಗ್ಯ ಕೆಡಬಹುದು.

ಶ್ರೀ ಗಣಪತಿ ಆರಾಧನೆ. ಶುಭ ಸಂಖ್ಯೆ–1.

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದ ಪೂರ್ವಾರ್ಧಕ್ಕೆ ಎಲ್ಲವೂ ಚೆನ್ನಾಗಿಯೇ ಇದೆ. ಧನ, ಕನಕ, ದುಬಾರಿ ವಸ್ತು, ವಾಹನ ಹೊಂದುವ ಅವಕಾಶವಿದೆ. ಚಂದ್ರ ಕೃಪೆಯಿಂದ ಸುಖ, ಸಂಪತ್ತುಗಳನ್ನೂ ಸನ್ಮಿತ್ರರನ್ನೂ ಪಡೆಯುವಿರಿ. ವಿದ್ಯಾರ್ಜನೆಯಲ್ಲಿ ಮನಸ್ಸಾಗುವುದು. ವಾರದ ಉತ್ತರಾರ್ಧಕ್ಕೆ ರಾಹು–ಕೇತು ಪ್ರಭಾವದಿಂದ ಯೋಜಿತ ಮಹತ್ವದ ಕೆಲಸಗಳು ಬಿಗಡಾಯಿಸಬಹುದು. ಆನ್‌ಲೈನ್ ಮೋಸ ಹೋಗುವ ಸಾಧ್ಯತೆ ಇರುತ್ತದೆ. ಎಚ್ಚರವಾಗಿರಿ.

ಶ್ರೀ ಲಕ್ಷ್ಮೀಅಷ್ಟಕ ಪಠಿಸಿ. ಶುಭ ಸಂಖ್ಯೆ–4

### ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ದೀರ್ಘ ಕಾಲಿಕವಾಗಿ ನಿಂತು ಹೋಗಿದ್ದ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಿ. ಸಫಲರಾಗುತ್ತೀರಿ. ಹೊಸ ಮಿತ್ರರ ಮಾರ್ಗದರ್ಶನವೂ ದೊರೆಯುತ್ತದೆ. ಫ್ಯಾನ್ಸಿ ಅಂಗಡಿ, ಗಿಫ್ಟ್ ಪದಾರ್ಥ ಅಂಗಡಿಯವರಿಗೆ ಹೆಚ್ಚಿನ ವ್ಯಾಪಾರವಾಗುವುದು. ಆಸ್ತಿ ವಿಷಯದಲ್ಲಿ ಸಹೋದರರಲ್ಲಿ ಉಂಟಾಗಿದ್ದ ಸಮಸ್ಯೆಗಳು ಪರಿಹಾರ ಕಾಣದು.ಕಫ ಸಂಬಂಧಿ ಕಾಯಿಲೆಯಿಂದ ಆರೋಗ್ಯ ಕಳವಳಕಾರಿಯಾಗಿದೆ.

ಶ್ರೀ ರಾಮ ರಕ್ಷಾಸ್ತೋತ್ರ ಪಠಿಸಿ. ಶುಭ ಸಂಖ್ಯೆ–3

### ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಗುರುಕೃಪೆಯಿಂದ ಹಣಕಾಸಿನ ಕೊರತೆಯೇನಿಲ್ಲ. ಗೃಹಬಳಕೆ ಹಾಗೂ ಬೆಲೆ ಬಾಳುವ ವಸ್ತುಗಳನ್ನು ಖರೀದಿಸುವಿರಿ. ನಿಮ್ಮ ರಾಶಿಗೆ ಬರುವ ನಿಮ್ಮ ರಾಶ್ಯಾಧಿಪತಿ ಚಂದ್ರನಿಂದ ಸ್ಥಾನ ಲಾಭ. ಆಪ್ತೇಷ್ಟರ ಮಿಲನ, ಮಾತೃಶ್ರೀಯವರ ಸಹಾಯ, ಆಶೀರ್ವಾದಗಳಿಂದ ಮಹತ್ತರ ಕಾರ್ಯ ಸಾಧನೆ. ಸಾರ್ವಜನಿಕ ಕ್ಷೇತ್ರದಲ್ಲಿರುವ ವ್ಯಕ್ತಿಗಳಿಗೆ ಹೆಚ್ಚಿನ ಚಟುವಟಿಕೆಗಳು ಉಂಟಾಗಲಿದೆ. ವಾರದ ಕಡೆಗೆ ಪುಣ್ಯ ನದಿ ಸ್ನಾನ.

ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–9

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಗುರು–ಹಿರಿಯರನ್ನು ಭೇಟಿ ಮಾಡುವುದರಿಂದ ನಿಮ್ಮ ಶ್ರೇಯೋಭಿವೃದ್ಧಿಗೆ ಪೂರಕವಾಗುವುದು. ಪತ್ನಿ–ಪುತ್ರರ ಸಹಕಾರವೂ ಇದಕ್ಕೆ ಪೂರಕವಾಗಿದೆ. ಆದರೆ ನ್ಯಾಯಾಲಯ ವಿಚಾರಗಳು ನಿಮಗೆ ಪ್ರತಿಕೂಲಕರವಾಗಿರುವುದು. ಕೃಷಿಕರಿಗೆ ನಿರೀಕ್ಷಿತ ಫಸಲು ಬರದೆ ನಿರಾಸೆ ಉಂಟಾಗುವುದು. ನಿಮ್ಮ ಚತುರತೆಗಿಂತ ವಿಧಿಯಾಟ ಮೇಲೆನಿಸುವುದು. ಸ್ವಯಂಕೃತಾಪರಾಧಗಳಿಂದ ಚಿಂತೆಗೀಡಾಗುವಿರಿ.

ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ–6

### ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನಿಮ್ಮ ಸಾಹಸ ಹಾಗೂ ಬುದ್ಧಿವಂತಿಕೆಯ ಪ್ರವೃತ್ತಿಗೆ ಬೆಂಬಲವಾಗಿದ್ದಾರೆ. ಗುರು–ಶನಿ ಗ್ರಹಗಳು. ಆತ್ಮೀಯರ ಸಮಾಗಮದಿಂದ ಮನಸ್ಸಿಗೆ ಹರ್ಷವೆನಿಸುವುದು. ವಿವಾಹ ಯೋಗ್ಯರಿಗೆ ಸೂಕ್ತ ವಧು–ವರ ದೊರೆಯುವ ಸಾಧ್ಯತೆ ಇರುತ್ತದೆ. ಕಟ್ಟಡ ಗುತ್ತಿಗೆದಾರರಿಗೆ ಹೆಚ್ಚಿನ ಧನಾದಾಯವಾಗುವುದು. ಐಷಾರಾಮಿ ಮರ–ಮುಟ್ಟು ಪದಾರ್ಥಗಳನ್ನು ಖರೀದಿಸುವಿರಿ. ವಾಯು ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ವಿಷ್ಣುನಾಮ ಸ್ತುತಿ. ಶುಭ ಸಂಖ್ಯೆ–7

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ದೂರ ಸರಿದಿದ್ದವರು ಹತ್ತಿರ ಬರುವರು. ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ನ್ಯಾಯಾಲಯ ವ್ಯವಹಾರಗಳಲ್ಲಿ ಜಯವನ್ನು ನಿರೀಕ್ಷಿಸಬಹುದು. ಮುಖ್ಯ ಕೆಲಸಗಳನ್ನು ಆದ್ಯತೆಯ ಮೇಲೆ ಪೂರೈಸಿಕೊಳ್ಳಿ. ಸುಖ ಸಾಧನಗಳನ್ನು ಪಡೆದುಕೊಂಡರೂ ಮಾನಸಿಕವಾಗಿ ತೊಳಲಾಡುವಿರಿ. ಗುರುಬಲವಿಲ್ಲದ ಕಾರಣ ಯಾವುದೇ ತೀರ್ಮಾನವನ್ನು ಎರಡು ಬಾರಿ ಪರಾಮರ್ಶಿಸಿ ಕೈಗೊಳ್ಳಿ. ವಾರದ ಕಡೆಗೆ ದೈವ ಸನ್ನಿಧಿಗೆ ತೆರಳಿ.

ಶ್ರೀ ಶನಿಮೂಲಮಂತ್ರ ಜಪಿಸಿ. ಶುಭ ಸಂಖ್ಯೆ–5

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ವಾರದ ಆದಿಗೆ ಹಣಕಾಸಿನ ತಾಪತ್ರಯಗಳು ನಿವಾರಣೆ ಆಗುವುದು. ಕಾಣದ ವ್ಯಕ್ತಿಗಳ ವಂಚನೆಗೆ ಗುರಿಯಾಗುವುದರಿಂದ ಬಚಾವ್ ಆಗುವಿರಿ. ಸಾಮಾಜಿಕವಾಗಿ ಗೌರವಾದರಗಳಿಗೆ ಪಾತ್ರರಾಗುವಿರಿ. ಭೂಮಿ ಸಂಬಂಧಿ ಖರೀದಿಯ ಮಾತುಗಳು ಫಲಪ್ರದವಾಗಲು ಇನ್ನಷ್ಟು ದಿನ ಕಾಯಬೇಕಾಗುವುದು. ಪುತ್ರ–ಪುತ್ರಿಯರ ಸಾಧನೆಯಿಂದ ಸಂತೋಷ. ನಿಮ್ಮ ಆರೋಗ್ಯದಲ್ಲಿ ವ್ಯತ್ಯಯ ಉಂಟಾದೀತು.

ಶ್ರೀ ಸುಬ್ರಮಣ್ಯ ಅರ್ಚನೆ. ಶುಭ ಸಂಖ್ಯೆ–2

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ಮನೆಯಲ್ಲಿ ಕಷ್ಟ, ಆತಂಕಗಳ ನಿವಾರಣೆ. ಮಿತ್ರರ ಸಹಾಯದಿಂದ ಸಂಪತ್ತು ಗಳಿಕೆಯ ಪ್ರಯತ್ನ. ಶತ್ರುಗಳ ಪ್ರಾಬಲ್ಯ ಕುಂಠಿತವಾಗುವುದು. ದೂರ ಪ್ರಯಾಣಗಳಲ್ಲಿ ಎಚ್ಚರವಾಗಿರಬೇಕು. ಸತಿ–ಪತಿಯರಲ್ಲಿ ಸಾಮರಸ್ಯದ ಕೊರತೆಯಿಂದ ಮನಸ್ಸಿಗೆ ಮುದವಿರದು. ರಾಜಕೀಯ ವ್ಯಕ್ತಿಗಳಿಗೆ ಅಗ್ನಿಪರೀಕ್ಷೆಯ ಸಮಯ. ವಾರದ ಕಡೆಗೆ ಲಘು ಪ್ರವಾಸಗಳು. ನೀರಿನ ಹತ್ತಿರ ಹುಡುಗಾಟ ಕೂಡದು.

ಶ್ರೀರಾಘವೇಂದ್ರ ಉಪಾಸನೆ. ಶುಭ ಸಂಖ್ಯೆ–8

### ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸರ್ವತೋ ಅಭಿವೃದ್ಧಿ, ಹೊಸ ವಾಹನದ ಕನಸು ನನಸಾಗುವ ಸಂಭವ. ಉತ್ತಮ ಆಹಾರ–ವಿಹಾರಗಳು ಭೋಗ ವಸ್ತುಗಳ ಖರೀದಿ. ಆಡಿಟರುಗಳಿಗೆ ಉತ್ತಮ ಕಕ್ಷಿದಾರರು ದೊರಕುವರು. ನೌಕರರು ಅಧಿಕಾರಿಗಳ ಅಸಮಾಧಾನಕ್ಕೆ ಒಳಗಾಗುವರು. ದ್ವಿತೀಯ ಶನಿದೇವನ ಕಾರಣ ಒಂದರ ಮೇಲೊಂದರಂತೆ ಅಹಿತಕರ ಸನ್ನಿವೇಶಗಳನ್ನು ಎದುರಿಸಬೇಕಾದೀತು. ಹಿತಶತ್ರುಗಳು ನಿಮ್ಮ ಬೆನ್ನಿಗೇ ಇದ್ದಾರೆ.

ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ–2

### ಕುಂಭ (ಗು.ಗೆ.ಗೊ.ಸ.ಷಿ.ಸು.ಸೆ.ಸೊ.ದ)

ಚಂದ್ರ ಗ್ರಹ ಸಂಚಾರ ಶುಭವಿದೆ. ಸಾಡೇ ಸಾತಿ ಪ್ರಭಾವದ ನಡುವೆಯೂ ಧನ ಗಳಿಕೆ, ಆರೋಗ್ಯ ಸೌಖ್ಯ, ಶತ್ರುಗಳ ವಿನಾಶ, ತಂಟೆ ತಕರಾರುಗಳಿಂದ ವಿಮೋಚನೆ ದೊರಕುವುದು. ಕೈತುಂಬಾ ಧನವಿದ್ದರೂ ಅನುಭವಿಸಲಾರಿರಿ. ಶನಿಸ್ವಾಮಿಯ ಧಾತುಗಳಾದ ಸಿಮೆಂಟ್, ಕಬ್ಬಿಣ, ಆಟೋ ಮೊಬೈಲ್ ವ್ಯಾಪಾರಿಗಳಿಗೆ ಹಿನ್ನಡೆ. ಸಾಲಬಾಧೆ ಕಾಡುವುದು. ಸರಕಾರದಿಂದ ಅಹಿತಕರ ಸುದ್ದಿ ಬಂದೀತು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ–1

### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನಿಮ್ಮ ಸಕಲ ಕಾರ್ಯಗಳು ಯಶಸ್ಸಿನ ಹಾದಿಯಲ್ಲಿ ಸಾಗಬೇಕೆಂದರೆ ಗುರು ಹಿರಿಯರ ಮಾರ್ಗದರ್ಶನದ ಅಗತ್ಯವಿದೆ. ಕೆಲವು ವೈಯಕ್ತಿಕ ವಿಚಾರಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು. ಕೋರ್ಟು–ಕಚೇರಿ ವ್ಯವಹಾರಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು. ಯಾವುದಕ್ಕೂ ದುಡುಕದೆ ಹಿರಿಯ ಅನುಭವಿಗಳ ಮಾತಿಗೆ ಮಾನ್ಯತೆ ನೀಡಿ. ವ್ಯಯಸ್ಥ ಶನಿದೇವನ ಕಾರಣ ವಾಹನ ಚಾಲನಾ ಸಮಯದಲ್ಲಿ ಜಾಗೃತರಾಗಿದ್ದರೆ ಒಳ್ಳೆಯದು. ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4

## ಮಕ್ಕಳ ಚಿತ್ರಕಥೆ

# 'ಯಾವಾಗಲೂ ನನ್ನದು ದುರದೃಷ್ಟ....!'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199





ರಾಮುವಿಗೆ ಮಾತು ಮಾತಿಗೂ "ನನ್ನ ಅದೃಷ್ಟವೇ ಸರಿಯಿಲ್ಲ" ಎನ್ನುವ ಕೆಟ್ಟ ಅಭ್ಯಾಸ. ಕಾಲೇಜಿಗೆ ಹೋಗಲು ಬಸ್ ನಿಲ್ದಾಣಕ್ಕೆ ಹೋಗುವಾಗ ಹೀಗೇ ಹೇಳಿಕೊಂಡು ಹೋಗುತ್ತಿದ್ದ. ಬಸ್ ಸಿಗುತ್ತಿರಲಿಲ್ಲ. ಮುಂದಿನ ಬಸ್‌ನಲ್ಲಿ ಹೋಗುಷ್ಟರಲ್ಲಿ ತರಗತಿ ಪ್ರಾರಂಭವಾಗಿರುತ್ತಿತ್ತು.




ಕ್ಯಾಂಟೀನ್‌ಗೆ ಹೋದರೆ ಊಟ ಮುಗಿದಿರುತ್ತಿತ್ತು. ಈತ ಪರೀಕ್ಷೆಗೂ ಹೀಗೇ ಹೇಳಿಕೊಂಡು ಹೋಗುತ್ತಿದ್ದ. ಉತ್ತರ ಗೊತ್ತಿದ್ದರೂ ಸರಿಯಾಗಿ ಬರೆಯಲು ಆಗುತ್ತಿರಲಿಲ್ಲ. ಉತ್ತೀರ್ಣನಾಗಲು ನಾಲ್ಕೈದು ಪ್ರಯತ್ನಗಳು ಬೇಕಾಗುತಿತ್ತು. ಕೆಲಸಕ್ಕೆ ಸೇರಿದಾಗಲೂ ಹೀಗೆಂಯೇ ಎಲ್ಲರಿಗಿಂತಲೂ ಕೊನೆಯವನಾಗಿ ಸೇರಿದ್ದ.





ರಾಮುವಿಗೆ ಇದೆಲ್ಲಾ ಅನುಭವಿಸಿ ಬೇಸರವಾಗಿ ಹೋಯಿತು. ಜೀವನದಲ್ಲಿ ಉತ್ಸಾಹವೇ ಇರಲಿಲ್ಲ. ಸತ್ತರೆ ಸ್ವರ್ಗದಲ್ಲಿ ಎಲ್ಲಾ ಅನುಕೂಲಗಳು ಸಿಗಬಹುದೇನೊ ಎಂದೆನಿಸಿ ಆತ್ಮಹತ್ಯೆ ಮಡಿಕೊಂಡುಬಿಟ್ಟ. ಸ್ವರ್ಗ ತಲುಪಿದ. ರಾಮುವಿಗೆ ಅಲ್ಲಿ ತನ್ನಂತೆಯೇ ಇರುವ ಮತ್ತೊಬ್ಬ ನಿಂತಿದ್ದ. "ಅವನನ್ನು ನೀನು ಯಾರು..? ಏಕೆ ಬಂದಿದ್ದೀಯಾ...?" ಎಂದು ಕೇಳಿದ.




ಆತ ಗಹಗಹಿಸಿ ನಕ್ಕು "ನಾನು ಬೇರೆ ಯಾರೂ ಅಲ್ಲ... ನಾನು ನಿನ್ನ ದುರದೃಷ್ಟ. ನೀನು ಇಲ್ಲಿಯೂ ಸುಖವಾಗಿರದಂತೆ ನೋಡಿಕೊಳ್ಳಲು ನಾನು ನಿನ್ನೊಂದಿಗೆ ಬಂದಿದ್ದೇನೆ" ಎಂದ. ಹೆದರಿದ ರಾಮು, "ಅಯ್ಯೋ..ನೀನು ಇಲ್ಲಿಗೂ ಏತಕ್ಕೆ ಬಂದೆ...?" ಎಂದು ಕೇಳಿದ.




ಆತ, "ನೀನು ಇಡೀ ಜೀವಮಾನದಲ್ಲಿ ನನ್ನ ಅದೃಷ್ಟವೇ ಸರಿಯಿಲ್ಲ...ನನ್ನದು ದುರಾದೃಷ್ಟ..ಎಂದು ಹೇಳುತ್ತಿದ್ದೆ. ಅದಕ್ಕೆ ಯಾವಾಗಲೂ ನಿನ್ನೊಡನೆಯೇ ಇರುತ್ತಿದ್ದೆ....ಈಗಲೂ ಬಂದಿದ್ದೇನೆ" ಎಂದ. ತಕ್ಷಣ ಗಾಬರಿಗೊಂಡ ರಾಮು "ನನ್ನಿಂದ ತಪ್ಪಾಯಿತು ನಿನಗೊಂದು ದೊಡ್ಡ ನಮಸ್ಕಾರ...ನಿನ್ನಿಂದ ಬಿಡಿಸಿಕೊಳ್ಳಲು ನಾನೇನು ಮಾಡಬೇಕು...?" ಎಂದು ಕೇಳಿಕೊಂಡ.




ಆತ "ನನ್ನಿಂದ ತಪ್ಪಿಸಿಕೊಳ್ಳುವ ಸರಳ ಉಪಾಯವೆಂದರೆ ಯಾವಾಗಲೂ ನನ್ನದು ದುರದೃಷ್ಟ ಎಂದುಕೊಳ್ಳಬೇಡ. ಹಾಗೆಂಯೇ ಅಂದುಕೊಳ್ಳುತ್ತಿದ್ದರೆ ಇರುವ ಅದೃಷ್ಟವೂ ಹೊರಟು ಹೋಗುತ್ತದೆ. ಯಾವಾಗಲೂ ಒಳ್ಳೆಯದನ್ನೇ ಯೋಚಿಸುತ್ತಿರು ಒಳ್ಳೆಯದೇ ಆಗುತ್ತದೆ...ಈಗ ನಾನು ಹೋಗುತ್ತೇನೆ ನೀನು ಕರೆದರೆ ಮತ್ತೆ ಬರುತ್ತೇನೆ" ಎಂದು ಹೇಳಿ ಮಾಯವಾದ. ರಾಮು ಹೆದರಿಕೆಯಿಂದ ಎದ್ದಾಗ ಇದೊಂದು ಕನಸು ಎಂದು ಗೊತ್ತಾಯಿತು.

# ಸಂಸದ ಸುನೀಲ್ ಬೋಸ್ ಅದ್ಧೂರಿ ಹುಟ್ಟುಹಬ್ಬ ಆಚರಣೆ

## 42 ಕೆಜಿ ತೂಕದ ಗುಲಾಬಿ ಹೂವಿನ ಹಾರ ಹಾಕಿ ಶುಭಾಶಯ ಕೋರಿದ ಮುಖಂಡರು






ತಿ.ನರಸೀಪುರ ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ 42 ಕೆಜಿ ತೂಕದ ಕೇಕ್ ಕತ್ತರಿಸಿ ಹಾಗೂ ಕಗ್ಗಲೀಪುರ ಗ್ರಾಮದ ಗುತ್ತಿಗೆದಾರ ಕೆ.ಎಂ.ಮಧುಕುಮಾರ್ ಸಂಸದ ಸುನೀಲ್ ಬೋಸ್ ಅವರಿಗೆ 42 ಕೆಜಿ ತೂಕದ ಗುಲಾಬಿ ಹೂವಿನ ಹಾರ ಹಾಕುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು.

ತಿ.ನರಸೀಪುರ, ಆ.31– ಕಾಂಗ್ರೆಸ್ ಯುವ ನಾಯಕ, ಚಾಮರಾಜನಗರ ಸಂಸದ ಸುನೀಲ್ ಬೋಸ್ ಶನಿವಾರ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳೊಂದಿಗೆ ತಮ್ಮ 42ನೇ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಿಕೊಂಡರು.


ಮೈಸೂರಿನ ತಮ್ಮ ಗೃಹ ಕಚೇರಿಯಲ್ಲಿ ದಿನವಿಡೀ ಕಾರ್ಯಕರ್ತರು ಹಾಗೂ ಮುಖಂಡರ ಜೊತೆ ಹುಟ್ಟುಹಬ್ಬದ ಸಂಭ್ರಮಾಚರಣೆ ನಡೆಸಿದ ಸುನೀಲ್ ಬೋಸ್ ಅವರನ್ನು ವಿವಿಧ ಗಣ್ಯರು, ಜನಪ್ರತಿನಿಧಿಗಳು ಭೇಟಿ ಮಾಡಿ, ಹುಟ್ಟುಹಬ್ಬದ ಶುಭ ಕೋರಿದರು.

ತಾಲೂಕಿನ ಕಗ್ಗಲೀಪುರ ಗ್ರಾಮದ ಯುವ ಮುಖಂಡ, ಗುತ್ತಿಗೆದಾರ ಕೆ.ಎಂ. ಮಧುಕುಮಾರ್ ಅವರು ಸುನೀಲ್ ಬೋಸ್ ಅವರಿಗೆ 42 ಕೆಜಿ ತೂಕದ ಗುಲಾಬಿ ಹೂವಿನ ಹಾರ ಹಾಕಿ, ಕೇಕ್ ತಿನ್ನಿಸಿ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಿದರು. ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ ಅವರು 42 ಕೆಜಿ ಕೇಕ್ ಅನ್ನು ಸಂಸದರ ಸಮ್ಮುಖದಲ್ಲಿ ಕತ್ತರಿಸಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಕೂಡ ಬೆಂಬಲಿಗರ ಜೊತೆಗೆ ಆಗಮಿಸಿ ಸುನೀಲ್ ಬೋಸ್ ಅವರಿಗೆ ಶುಭ ಹಾರೈಸಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ, ತಿ.ನರಸೀಪುರ ಕ್ಷೇತ್ರದ ಜನರು ರಾಜಕೀಯವಾಗಿ ಗುರುತಿಸಿ ಆಶೀರ್ವದಿಸಿದ್ದರಿಂದ ಇಂದು ಚಾಮರಾಜನಗರ ಸಂಸದನಾಗಿದ್ದೇನೆ. ತಿ.ನರಸೀಪುರ ಸೇರಿದಂತೆ 8 ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಮತ್ತು ಜನಸೇವೆಯನ್ನು ಆಯಾಯ ಶಾಸಕರು ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಜೊತೆಗೂಡಿ ಮಾಡುತ್ತೇನೆ ಎಂದು ತಿಳಿಸಿದರು.

ಜಿಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ, ಪಪಂ ಮಾಜಿ ಅಧ್ಯಕ್ಷ ಎನ್.ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷರಾದ ವಾಟಾಳ್ ನಾಗೇಶ, ಅಕ್ಕೂರು ಗುರುಮೂರ್ತಿ, ತಾಪಂ ಮಾಜಿ ಅಧ್ಯಕ್ಷರಾದ ಕುಕ್ಕೂರು ಗಣೇಶ್, ಹ್ಯಾಕನೂರು ಉಮೇಶ್, ಯಾಚೇನಹಳ್ಳಿ ಮಾಜಿ ಗ್ರಾಪಂ ಸದಸ್ಯರಾದ ಅಶೋಕ್ ಹಾಗೂ ಅತ್ತಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಸುನೀಲ್ ಕುಮಾರ್, ಮಲಿಯೂರು ಗ್ರಾಪಂ ಮಾಜಿ ಅಧ್ಯಕ್ಷ ಜಯರಾಮ್, ಅಶೋಕ್, ಗುತ್ತಿಗೆದಾರ ಉಮೇಶ್ ಹಾಗೂ ಮುಖಂಡರಾದ ಸಾಹುಕಾರ್ ಹುಂಡಿ ಸಿ.ಮಹದೇವು, ಮುಖಂಡರಾದ ಚೌಹಳ್ಳಿ ಮಲ್ಲೇಶ, ಬನ್ನೂರು ಶಿವು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಇಂದು ಕೆಂಪೇಗೌಡ ಜಯಂತಿ



ಹುಣಸೂರು, ಆ.31– ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಸೆ.1ರಂದು ನಾಡಪ್ರಭು ಕೆಂಪೇಗೌಡರ ಜಯಂತಿ ನಡೆಯಲಿದ್ದು, ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಕೆ.ಗಣೇಶ್‌ಗೌಡ ತಿಳಿಸಿದರು.

ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಲಿದ್ದು, ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ಶ್ರೀನಿರ್ಮಲಾನಂದನಾಥಸ್ವಾಮಿ ಸಾನ್ನಿಧ್ಯ ವಹಿಸಲಿದ್ದಾರೆ. ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಶಾಸಕ ಜಿ.ಟಿ.ದೇವೇಗೌಡರು ಪುಷ್ಪಾರ್ಚನೆ ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ಮಾಜಿ ಸಂಸದ ಪ್ರತಾಪ್ ಸಿಂಹ, ಪ್ರಧಾನ ಭಾಷಣಕಾರರಾಗಿ ನಿವೃತ್ತ ಪ್ರಾಂಶುಪಾಲ ಸಿದ್ದರಾಮೇಗೌಡ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕೆ.ಗಣೇಶ್‌ಗೌಡ ವಹಿಸಲಿದ್ದಾರೆ. ಇದೇ ವೇಳೆ ಯುಪಿಎಸ್‌ಸಿಯಲ್ಲಿ ತೇರ್ಗಡೆಯಾದ ತಿಪ್ಲಾಪುರ ಲೇಖನ್ ಹಾಗೂ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಪಡೆದಿರುವ ನಗರದ ಪಿಯು ಕಾಲೇಜಿನ ಪ್ರಾಧ್ಯಾಪಕ ಹೆಚ್.ಎನ್.ಗಿರೀಶ್ ಹಾಗೂ ಅಂತಾರಾಷ್ಟ್ರೀಯ ಥ್ರೋ ಬಾಲ್‌ಗೆ ಆಯ್ಕೆಯಾಗಿರುವ ಪ್ರೇಮ್ ಕುಮಾರ್ ಅವರನ್ನು ಗೌರವಿಸಲಾಗುವುದು ಎಂದರು.

## ಟ್ಯಾವೋ ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ



ಬನ್ನೂರು ಸಮೀಪದ ಕೊಡಗಹಳ್ಳಿ ಟ್ಯಾವೋ ಇಂಟರ್‌ನ್ಯಾಷನಲ್ ಶಾಲೆ ಆವರಣದಲ್ಲಿ ಕೃಷ್ಣ ಜನ್ಮಾಷ್ಟಮಿ ನಡೆಯಿತು.

# ಸರಗೂರಲ್ಲಿ ರಥಯಾತ್ರೆಗೆ ಅದ್ಧೂರಿ ಸ್ವಾಗತ

ಸರಗೂರು, ಆ.31– ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ಮರು ನಾಮಕರಣ ಮಾಡಿದ ಸುವರ್ಣ ಮಹೋತ್ಸವ ಅಂಗವಾಗಿ ತಾಲೂಕಿನ ತುಂಬಸೋಗೆ ಬಳಿ ಆಗಮಿಸಿದ ಕರ್ನಾಟಕ ಸಂಭ್ರಮ–50 ರಥಯಾತ್ರೆ ಯನ್ನು ಪೂರ್ಣಕುಂಭದೊಂದಿಗೆ ತಹಸೀಲ್ದಾರ್ ರುಕಿಯಾ ಬೇಗಂ ಹಾಗೂ ಗಣ್ಯರು ಅದ್ಧೂರಿಯಾಗಿ ಬರಮಾಡಿಕೊಂಡರು.

ತಹಸೀಲ್ದಾರ್ ರುಕಿಯಾ ಬೇಗಂ ಮಾತನಾಡಿ, ಕನ್ನಡ ನಾಡು, ನುಡಿ, ಸಂಸ್ಕೃತಿ, ಪರಂಪರೆ, ಇತಿಹಾಸ, ಕಲೆ, ಸಾಹಿತ್ಯದ ಬಗ್ಗೆ ಯುವ ಜನತೆಯಲ್ಲಿ ಅರಿವು ಮೂಡಿಸುವ ಕರ್ನಾಟಕ ಸಂಭ್ರಮ–50 ರಥಯಾತ್ರೆ ಇದಾಗಿದೆ ಎಂದರು.

ಸಾಹಿತಿ ಡಾ.ವೈ.ಡಿ.ರಾಜಣ್ಣ ಮಾತನಾಡಿ, ಈ ರಥಯಾತ್ರೆ ಉದ್ದೇಶ ಕನ್ನಡದ ಇತಿಹಾಸ, ಪರಂಪರೆ ಬಗ್ಗೆ ಜಾಗೃತಿ ಮೂಡಿಸುವ ಜೊತೆಗೆ ಜನರಲ್ಲಿ ಕನ್ನಡ ಪ್ರೀತಿಯನ್ನು ಉದ್ದೀಪನಗೊಳಿಸುವುದೇ ಆಗಿದೆ. ವಿಶ್ವದ ಪ್ರಾಚೀನ ಭಾಷೆಗಳಲ್ಲಿ ಒಂದಾದ ಕನ್ನಡದ ಹಿರಿಮೆ ಸಾರುತ್ತಲೇ ನಾಡು ನುಡಿ, ನೆಲೆ ಹಿನ್ನೆಲೆ ಕುರಿತು ಅಭಿಮಾನ ಬೆಳೆಸುವುದೇ ಆಗಿದೆ ಎಂದರು.



ಕರ್ನಾಟಕ ಸಂಭ್ರಮ–50 ರಥಯಾತ್ರೆಯನ್ನು ಸ್ವಾಗತಿಸಲಾಯಿತು.

ರಥಯಾತ್ರೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಕಸಾಪ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿದರು. ತಾಲೂಕು ಕನ್ನಡ ಪರಿಷತ್ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ತಾಪಂ ಇಓ ಧರಣೇಶ್, ಪಪಂ ಎಇಇ ಉಷಾ, ಮುಖ್ಯಾಧಿಕಾರಿ ಎಸ್.ಎಸ್. ಮಂಜುನಾಥ್, ಉಪ ತಹಸೀಲ್ದಾರ್ ಸುನೀಲ್, ಎಸ್‌ಐ ನಂದೀಶ್ ಕುಮಾರ್, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಬಗರ್‌ಹುಕುಂ ಸಾಗುವಳಿ ಸಕ್ರಮ ಸಮಿತಿ ಸದಸ್ಯ ಶಿವಶಂಕರನ್, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಕೃಷ್ಣ, ಪಪಂ ಸದಸ್ಯರಾದ ಶ್ರೀನಿವಾಸ್, ವೀರೇಶ್, ನೂರಳಾಸ್ವಾಮಿ, ಚಲುವಕೃಷ್ಣ, ಸಣ್ಣತಾಯಮ್ಮ, ಮುಖಂಡರಾದ ರಾಜಣ್ಣ, ನವೀನ್, ರಾಮು, ಪುಟ್ಟಪ್ಪ, ಎಂ.ನಾಗರಾಜು ಸೇರಿದಂತೆ ಇನ್ನಿತರರಿದ್ದರು.

# ಜನಪರ ಕಾಳಜಿಯುಳ್ಳ ರಾಜಕಾರಣಿ ಸುನೀಲ್ ಬೋಸ್

## ಶ್ರೀಕಂಠೇಶ್ವರ ದೇವಾಲಯದ ಮಾಜಿ ಧರ್ಮದರ್ಶಿ ಇಂಧನ್‌ಬಾಬು

ನಂಜನಗೂಡು, ಆ.31– ಸಂಸದ ಸುನೀಲ್ ಬೋಸ್ ಸೂಕ್ಷ್ಮ ಸಂವೇದನೆ, ಜನಪರ ಕಾಳಜಿಯುಳ್ಳ ಒಬ್ಬ ಅತ್ಯುತ್ತಮ ರಾಜಕಾರಣಿ ಎಂದು ಶ್ರೀಕಂಠೇಶ್ವರ ದೇವಾಲಯದ ಮಾಜಿ ಧರ್ಮದರ್ಶಿ ಇಂಧನ್‌ಬಾಬು ತಿಳಿಸಿದರು.

ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ ಅಂಗವಾಗಿ ವರುಣ ಮತ್ತು ನಂಜನಗೂಡು ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಶ್ರೀಕಂಠೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ದೇವಾಲಯದ ಮುಂಭಾಗ ಕೇಕ್ ಕತ್ತರಿಸಿ, ಸಿಹಿ ಸಂಚುವ ಮೂಲಕ ಹುಟ್ಟುಹಬ್ಬ ಆಚರಿಸಿ ಅವರು ಮಾತನಾಡಿದರು.

ಸಂಸದ ಸುನೀಲ್ ಬೋಸ್ ಅವರು ಕಳೆದ ಹಲವು ವರ್ಷಗಳಿಂದ ಯಾವುದೇ ಫಲಾಪೇಕ್ಷೆ ಇಲ್ಲದೆ ಕಾಂಗ್ರೆಸ್ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡು ಕೆಲಸ ಮಾಡಿದ್ದಾರೆ. ಅಲ್ಲದೆ ನಂಜನಗೂಡು ಉಪ ಚುನಾವಣೆ ಸಂದರ್ಭ ಪಕ್ಷ ಸಂಘಟಿಸಿದ ಅವರು ಟಿಕೆಟ್ ವಂಚಿತರಾದರೂ ಬೇಸರ ಮಾಡಿಕೊಳ್ಳದೆ ಪಕ್ಷ ಸೂಚಿಸಿದ ಅಭ್ಯರ್ಥಿ ಗೆಲುವಿಗೆ ಶ್ರಮಿಸಿದರು. ಜೊತೆಗೆ ನಿಸ್ವಾರ್ಥದಿಂದ ಬಡವರ ಸೇವೆ ಮಾಡುವ ಮೂಲಕ ಅವರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಅವರ ಸೇವೆಯಿಂದಾಗಿ ಇಂದು ಚಾಮರಾಜನಗರ ಸಂಸದರಾಗಿ ಆಯ್ಕೆಯಾಗಿ ಕೆಲಸ ಮಾಡುತ್ತಿದ್ದಾರೆ ದೇವರು ಅವರಿಗೆ ಆಯಸ್ಸು ಆರೋಗ್ಯ ಉನ್ನತ ಅಧಿಕಾರ ಕೊಟ್ಟು ಕಾಪಾಡಲಿ ಎಂದು ಶ್ರೀಕಂಠೇಶ್ವರಸ್ವಾಮಿಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದರು.



ಶ್ರೀಕಂಠೇಶ್ವರ ದೇವಾಲಯದ ಎದುರು ಕೇಕ್ ಕತ್ತರಿಸುವ ಮೂಲಕ ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ ಆಚರಿಸಲಾಯಿತು.

ಕಾಂಗ್ರೆಸ್ ಹಿಂದುಳಿದ ವರ್ಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ಟಿ.ಗಿರೀಶ್ ಮಾತನಾಡಿ, ಸಂಸದ ಸುನೀಲ್ ಬೋಸ್ ಅವರು ಸಂಸದರಾಗಿ ಬಡವರ ಪರ ಕೆಲಸ ನಿರ್ವಹಿಸುವ ಮೂಲಕ ಈ ಭಾಗದ ಜನರ ಜನಮಾನಸದಲ್ಲಿ ಉಳಿದುಕೊಂಡಿದ್ದಾರೆ. ಒಬ್ಬ ಪ್ರಬುದ್ಧ ರಾಜಕಾರಣಿಯಾಗಿ ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ದೇವರು ಅವರಿಗೆ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಶುಭ ಹಾರೈಸಿದರು. ಇದೇ ವೇಳೆ ಹೌಸಿಂಗ್‌ಬೋರ್ಡ್ ಪಾರ್ಕ್ ಬಳಿ ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ ಅಂಗವಾಗಿ ಗಿಡ ನೆಡಲಾಯಿತು.

ಇದೇ ಸಂದರ್ಭ ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಕೆ.ಬಿ.ಸ್ವಾಮಿ, ಚೋಳರಾಜು, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ಮುಖಂಡರಾದ ಶಿವಪ್ರಕಾಶ್, ಸಿ.ಆರ್.ಮಹದೇವು, ಬಾಬು, ಬಿ.ಪಿ.ಮಹದೇವು, ಪರಶಿವಮೂರ್ತಿ ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.


## ವಿವಿಧ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ನಂಜನಗೂಡು, ಆ.31– ಪಿಎಂಕೆಎಸ್‌ವೈ ಸೂಕ್ಷ್ಮ ನೀರಾವರಿ ಹಾಗೂ ಕೃಷಿ ಯಾಂತ್ರೀಕರಣ ಯೋಜನೆಯಡಿ ಕೃಷಿ ಇಲಾಖೆ ವತಿಯಿಂದ ನೀರಾವರಿ ಯೋಜನೆ, ಟಿಲ್ಲರ್, ಮೇವು ಕಟ್ಟರ್, ರೊಟೋವೇಟರ್, ನೇಗಿಲು ಸೇರಿದಂತೆ ವಿವಿಧ ಸೌಲಭ್ಯ ಪಡೆದುಕೊಳ್ಳಲು ರೈತರು ಅರ್ಜಿ ಸಲ್ಲಿಸುವಂತೆ ಕೃಷಿ ಸಹಾಯಕ ನಿರ್ದೇಶಕ ರವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೂಕ್ಷ್ಮ ನೀರಾವರಿ ಯೋಜನೆಯಡಿ ಎಲ್ಲಾ ರೈತರಿಗೆ ಶೇ.90ರಷ್ಟು ಸಹಾಯಧನದಲ್ಲಿ ಗರಿಷ್ಠ 5 ಎಕರೆವರೆಗೆ ತುಂತುರು ನೀರಾವರಿ ಉಪಕರಣ, ಕಬ್ಬು ನಾಟಿ ಮಾಡುವ ರೈತರಿಗೆ ಡ್ರಿಪ್ ವಿತರಿಸಲಾಗುವುದು. ಕೃಷಿ ಯಾಂತ್ರೀಕರಣ ಯೋಜನೆಯಡಿ ಪವರ್ ಟಿಲ್ಲರ್, ಮೇವು ಕತ್ತರಿಸುವ ಯಂತ್ರ, ಬ್ರಷ್ ಕಟ್ಟರ್, ರೊಟೋವೇಟರ್, 5 ಹಲ್ಲಿನ ನೇಗಿಲು, ಕಲ್ಟಿವೇಟರ್, ಡೀಸೆಲ್ ಮೋಟರ್‌ಗಳನ್ನು ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಸಹಾಯಧನದಲ್ಲಿ, ಎಸ್ಸಿ, ಎಸ್ಟಿ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನದಲ್ಲಿ ಲಭ್ಯವಿದ್ದು, ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ.

ರೈತರು ಆಧಾರ್ ಪ್ರತಿ, ಪಹಣಿ, ಜಾತಿ ಪ್ರಮಾಣ ಪತ್ರ, 20 ರೂ. ಸ್ಟ್ಯಾಂಪ್ ಪೇಪರ್, ಇತ್ತೀಚಿನ 2 ಭಾವಚಿತ್ರ, ಕೊಳವೆ ಬಾವಿ ದೃಢೀಕರಣ ಪತ್ರಗಳನ್ನು ಅರ್ಜಿ ಜೊತೆಗೆ ಲಗತ್ತಿಸಿ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

## ಮೈಮುಲ್ ಅಧ್ಯಕ್ಷರಿಂದ ಹುಟ್ಟುಹಬ್ಬದ ಶುಭಾಶಯ



ಸಂಸದ ಸುನೀಲ್ ಬೋಸ್ ಅವರನ್ನು ಸನ್ಮಾನಿಸುವ ಮೂಲಕ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ಹುಟ್ಟುಹಬ್ಬದ ಶುಭ ಕೋರಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷರಾದ ಹ್ಯಾಕನೂರು ಉಮೇಶ್, ಕುಕ್ಕೂರ್ ಗಣೇಶ್, ಯಾಚೇನಹಳ್ಳಿ ಗ್ರಾಪಂ ಮಾಜಿ ಸದಸ್ಯ ಅಶೋಕ್, ಅತ್ತಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಸುನೀಲ್ ಕುಮಾರ್, ಮಲಿಯೂರು ಗ್ರಾಪಂ ಮಾಜಿ ಅಧ್ಯಕ್ಷ ಜಯರಾಮ್, ಅಶೋಕ್, ಗುತ್ತಿಗೆದಾರ ಉಮೇಶ್, ಮುಖಂಡರಾದ ಸಿ.ಮಹದೇವು ಇನ್ನಿತರರಿದ್ದರು.

## ಗುಣಮಟ್ಟದ ಹಾಲು ಪೂರೈಕೆಯಿಂದ ಹೆಚ್ಚಿನ ಲಾಭ



ಮಲ್ಕುಂಡಿಯಲ್ಲಿ ಡೈರಿ ವಾರ್ಷಿಕ ಮಹಾಸಭೆ ನಡೆಯಿತು

ಮಲ್ಕುಂಡಿ, ಆ.31– ರೈತರು ಗುಣಮಟ್ಟದ ಹಾಲು ಪೂರೈಕೆ ಮಾಡುವುದರಿಂದ ಸಂಘಕ್ಕೆ ಹೆಚ್ಚಿನ ಲಾಭ ದೊರೆಯಲಿದೆ ಎಂದು ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತಾಧಿಕಾರಿ ಎಸ್.ಮಂಜು ತಿಳಿಸಿದರು.

ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಹೈನುಗಾರಿಕೆ ಕೈಗೊಳ್ಳಲು ಹಲವು ಸೌಲಭ್ಯ ಕಲ್ಪಿಸಲಾಗಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ರೈತರು ಸಂಘಕ್ಕೆ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು ಎಂದು ತಿಳಿಸಿದರು. ಸಭೆಯಲ್ಲಿ ಸಂಘದ ಮಾಜಿ ಅಧ್ಯಕ್ಷ ಪುಟ್ಟಸುಬ್ಬಪ್ಪ, ಮಾಜಿ ಉಪಾಧ್ಯಕ್ಷ ಎಂ.ಶಿವಣ್ಣ, ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಎಂ.ಪುಟ್ಟಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಸತೀಶ್, ಗುರು ಮಲ್ಲಪ್ಪ, ವಿಸ್ತರಣಾಧಿಕಾರಿ ಶಿವಕುಮಾರ್, ಸಿಇಓ ಮುತ್ತುರಾಜ್, ಎಂ.ಸಿ. ಶಿವಶಂಕರ್ ಸೇರಿದಂತೆ ಇತರರಿದ್ದರು.

## ಹುಣಸೂರು ಸರ್ಕಾರಿ ಶಾಲೆಯಲ್ಲಿ ಪ್ರತಿಭಾ ಕಾರಂಜಿ

ಹುಣಸೂರು, ಆ.31– ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ತಾಲೂಕಿನಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡರು ತಿಳಿಸಿದರು.

ನಗರದ ಕಜಾರ್ ರಸ್ತೆಯಲ್ಲಿರುವ ಸರ್ಕಾರಿ ಮೌಲಾನ ಆಜಾದ್ ಮಾದರಿ ಶಾಲೆಯಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಬಹಳಷ್ಟು ಅಧಿಕಾರಿಗಳು ಮತ್ತು ಶಿಕ್ಷಕರು ಸರ್ಕಾರಿ ಶಾಲೆಗಳಲ್ಲಿ ಓದಿದ್ದಾರೆ. ಇಂತಹ ಶಿಕ್ಷಕರಿಂದ ಕಲಿಯುವ ಮಕ್ಕಳು ತಮ್ಮ ಪ್ರತಿಭೆ ಪ್ರದರ್ಶಿಸುವ ಕಾರ್ಯಕ್ರಮವೇ ಪ್ರತಿಭಾ ಕಾರಂಜಿ ಎಂದರು.

ಪ್ರತಿಯೊಂದು ಮಕ್ಕಳಲ್ಲೂ ಒಂದಲ್ಲಾ ಒಂದು ಕಲೆ ಇದ್ದೇ ಇರುತ್ತದೆ. ಹೀಗಾಗಿ ಶಿಕ್ಷಕರು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರ್ತಿಸುವ ಕೆಲಸ ಮಾಡಬೇಕು. ಅಲ್ಲದೇ ಅವರಿಗೆ ಸೂಕ್ತ ತರಬೇತಿ ನೀಡಿ ಪ್ರೋತ್ಸಾಹಿಸುವ ಮೂಲಕ ಜಿಲ್ಲಾ, ತಾಲೂಕು, ರಾಷ್ಟ್ರಮಟ್ಟದಲ್ಲಿ ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಸಾಧನೆ ಮಾಡುವಂತಾಗಬೇಕು. ತಾಲೂಕಿನ ವಿದ್ಯಾರ್ಥಿಗಳಲ್ಲಿ ಕಲೆ ಇರುವುದನ್ನು ನೋಡಿದ್ದೇವೆ. ಹೀಗಾಗಿ ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕೆಲಸಕ್ಕೆ ಮುಂದಾಗಬೇಕು ಎಂದರು.



ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರನ್ನು ಸನ್ಮಾನಿಸಲಾಯಿತು

ಶಾಲೆಗೆ ಮೂಲಸೌಕರ್ಯ ಒದಗಿಸಲು ನಾನು ಬದ್ಧನಾಗಿದ್ದೇನೆ ಎಂದು ಶಾಸಕರು ಭರವಸೆ ನೀಡಿದರು. ಇದೇ ವೇಳೆ ಶಾಲೆ ಮುಖ್ಯ ಶಿಕ್ಷಕ ಚಂದ್ರಕುಮಾರ್ ಶಾಸಕ ಜಿ.ಡಿ. ಹರೀಶ್‌ಗೌಡರನ್ನು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣಾಧಿಕಾರಿ ಮಹದೇವಸ್ವಾಮಿ, ನಗರಸಭೆ ಸದಸ್ಯರಾದ ಮಲ್ಲಿಕ್ ಪಾಷ, ಹರೀಶ್, ಅಕ್ಷರ ದಾಸೋಹ ಅಧಿಕಾರಿ ರಾಜೇಂದ್ರ ಕುಮಾರ್, ಬಿಆರ್‌ಸಿ ಹೇಮಲತಾ, ಇಸಿಓ ಕೇಶವ ಮೂರ್ತಿ, ರಿಜ್ವಾನಾ ಅಫ್ರೋಜ್, ಶಿಕ್ಷಕ ಗೋವಿಂದೇಗೌಡ ಇನ್ನಿತರರಿದ್ದರು.

# ದೇಶದಲ್ಲಿ ಸದೃಢವಾಗಿರುವ ಸರ್ಕಾರಿ ನೌಕರರ ಸಂಘ

## ●ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು ಅಭಿಪ್ರಾಯ ●ಸಂಘದ ನೂತನ ಕಟ್ಟಡ ಉದ್ಘಾಟನೆ

ತಿ.ನರಸೀಪುರ, ಆ.31– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ದೇಶದಲ್ಲೇ ಅತ್ಯಂತ ಬಲಿಷ್ಠ, ಸದೃಢವಾಗಿ ಕಾರ್ಯ ನಿರ್ವಹಿಸುತ್ತಿರುವ ಏಕೈಕ ಸಂಘ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು ತಿಳಿಸಿದರು.

ಪಟ್ಟಣದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಟ್ಟಡದ ಆವರಣದಲ್ಲಿ ಶನಿವಾರ ತಿ.ನರಸೀಪುರ ತಾಲೂಕು ಘಟಕದಿಂದ ನಡೆದ ಪ್ರತಿಭಾ ಪುರಸ್ಕಾರ ಹಾಗೂ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ನೌಕರರ ಸಂಘಕ್ಕೆ 104 ವರ್ಷಗಳ ಇತಿಹಾಸವಿದೆ. ರಾಷ್ಟ್ರದಲ್ಲಿಯೇ ರಾಜ್ಯ ಸಂಘ ಉತ್ತಮವಾಗಿ ಕಾರ್ಯ ನಿರ್ವಹಿಸುವ ಮೂಲಕ ಸದೃಢವಾಗಿದೆ. ಸಂಘವನ್ನು ಹಲವರು ಕಟ್ಟಿ ಬೆಳೆಸಿದ್ದಾರೆ. ಅವರು ಕಟ್ಟಿ ಬೆಳೆಸಿ ಹೆಮ್ಮರವಾಗಿರುವ ಸಂಘವನ್ನು ನಾವು ಮುನ್ನಡೆಸಿಕೊಂಡು ಹೋಗುತ್ತಿದ್ದೇವೆ. ಷಡಕ್ಷರಿ ಅವರು ನಮ್ಮ ಸಂಘದ ರಾಜ್ಯಾಧ್ಯಕ್ಷರಾದ ಮೇಲೆ ಸಂಘ ಮತ್ತಷ್ಟು ಬೆಳವಣಿಗೆಯಾಗಿದೆ. ರಾಜ್ಯ ಸರ್ಕಾರದೊಂದಿಗೆ ಸಂಪರ್ಕ ಸಾಧಿಸಿ ಎಲ್ಲಾ ನೌಕರರಿಗೆ 28ಕ್ಕಿಂತ ಹೆಚ್ಚಿನ ಉಪಯುಕ್ತ ಆದೇಶಗಳನ್ನು ಮಾಡಿಸಿರುವ ಕೀರ್ತಿ ರಾಜ್ಯಾಧ್ಯಕ್ಷರಿಗೆ ಸಲ್ಲುತ್ತದೆ ಎಂದರು.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಶೇ.27ರ ಆದೇಶದನ್ವಯ ನಾವು ಈಗಾಗಲೇ ಒಂದು ತಿಂಗಳ ವೇತನ ಪಡೆದಿದ್ದೇವೆ. 2021ರ ಜುಲೈನಿಂದಲೂ ಫಿಟ್‌ಮೆಂಟ್ ಕೊಡಬೇಕಿತ್ತೆಂಬ ಅಸಮಾಧಾನ ಕೆಲ ನೌಕರರಲ್ಲಿದೆ. ಈ ಬಗ್ಗೆ ನಮಗೆ ತಾಲೂಕು ಸಂಘದಿಂದ ಮನವಿ ಮಾಡಲಾಗಿದೆ. ಆದರೆ ಸರ್ಕಾರದ ಹಂತದಲ್ಲಿ ಏನೆಲ್ಲಾ ಕಾರ್ಯಕ್ರಮ ಮಾಡುತ್ತಿದ್ದಾರೆ. ಅದನ್ನು ನಾವು ಪಾಲಿಸಬೇಕಾಗುತ್ತದೆ. ಸರ್ಕಾರವು ಸಹ ವಿವಿಧ ಹಂತಗಳಲ್ಲಿ ಕಾರ್ಯಕ್ರಮ ರೂಪಿಸುತ್ತಿದೆ. ಯಾರಿಗೂ ಅನ್ಯಾಯವಾಗದ ರೀತಿ ಸರ್ಕಾರ ವೇತನ ಪರಿಷ್ಕರಣೆ ಮಾಡುತ್ತಿದೆ ಎಂದರು.



ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಸುಬ್ರಹ್ಮಣ್ಯ, ಕಾರ್ಯದರ್ಶಿ ರೇವಣ್ಣ, ಖಜಾಂಚಿ ರಮೇಶ್, ಸಹ ಕಾರ್ಯದರ್ಶಿ ರೇವಣ್ಣ, ಎಇಇ ಶಿವಪ್ರಸಾದು, ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಪ್ರಸಾದ್, ಎನ್‌ಪಿಎಸ್ ಅಧ್ಯಕ್ಷ ಶ್ರೀಧರ್, ಪದವೀಧರ ಶಿಕ್ಷಕರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಆರ್‌ಡಿಪಿಆರ್ ನಿಂಗರಾಜು, ಗ್ರಾಮೀಣ ಶಿಕ್ಷಕರ ಸಂಘದ ಅಧ್ಯಕ್ಷ ಮಹೇಶ್, ಕಾರ್ಯದರ್ಶಿ ಪುಟ್ಟಸ್ವಾಮಿ, ರಾಜೇಶ್, ಅರಣ್ಯ ಇಲಾಖೆ ಮಂಜುನಾಥ್, ಪ್ರಾಥಮಿಕ ಶಿಕ್ಷಣ ಇಲಾಖೆ ಗಜೇಂದ್ರ, ಆರೋಗ್ಯ ಇಲಾಖೆ ಆರ್.ಉಮೇಶ್ ಕುಮಾರ್, ನಾಗೇಶ್, ಪಶು ವೈದ್ಯಾಧಿಕಾರಿ ಶಿವಮಲ್ಲಪ್ಪ, ಎನ್.ರಂಗಸ್ವಾಮಿ, ಹೆಚ್.ಡಿ.ಮಾದಪ್ಪ, ಮೀನಾಕ್ಷಿ, ಸಿ.ಶೋಭಾ, ಜೇಮ್ಸ್ ಲ್ಯಾಜರಸ್, ಬಸವಣ್ಣ, ಚೆಲುವರಾಜು ಸೇರಿದಂತೆ ವಿವಿಧ ಇಲಾಖೆ ನೌಕರರು ಹಾಜರಿದ್ದರು.

> ರಾಜ್ಯ ಸಂಘ ನೌಕರರ 27 ಬೇಡಿಕೆಗಳನ್ನು ಈಡೇರಿಸಿದೆ. ರಾಜ್ಯಾಧ್ಯಕ್ಷರು ತಾಲೂಕಿನಲ್ಲಿ ಸಂಘ ಉತ್ತಮವಾಗಿ ಮುನ್ನಡೆಯಲು ಪ್ರೋತ್ಸಾಹ ನೀಡಿದ್ದು, ಅವರನ್ನು ಈ ಸಂದರ್ಭ ಅಭಿನಂದಿಸುತ್ತೇನೆ. ಪ್ರತಿ ವರ್ಷ ರಾಜ್ಯ ಮತ್ತು ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳನ್ನು ಗುರುತಿಸಿ ಸನ್ಮಾನಿಸಲಾಗಿದೆ. ಶಿಕ್ಷಕರ ಕ್ರೀಡಾಕೂಟ, ಮರಣ ಹೊಂದಿದ ಸರ್ಕಾರಿ ನೌಕರರ ಕುಟುಂಬಕ್ಕೆ 2 ಸಾವಿರ ನೀಡಲಾಗುತ್ತಿದೆ. ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಫಲಿತಾಂಶ ಉತ್ತಮ ಪಡಿಸುವ ನಿಟ್ಟಿನಲ್ಲಿ ಶಿಕ್ಷಕರಿಗೆ ಕಾರ್ಯಾಗಾರ ನಡೆಸಲು ಸಹಕಾರ ನೀಡಲಾಗಿದೆ. ವೃಂದ ಸಂಘಗಳ ಅಧ್ಯಕ್ಷರನ್ನು ಗೌರವದಿಂದ ನಡೆಸಿಕೊಳ್ಳಲಾಗಿದೆ. ಕೊರೊನಾ ವಾರಿಯರ್ಸ್‌ಗಳಿಗೆ ಸನ್ಮಾನ ಮಾಡುವ ಜೊತೆಗೆ ಕೊರೊನಾ ಚುಚ್ಚುಮದ್ದನ್ನು ನೌಕರರ ಕುಟುಂಬಕ್ಕೆ ಕೊಡಿಸಲಾಗಿದೆ. ಕಟ್ಟಡಕ್ಕೆ ಸುಣ್ಣ ಬಣ್ಣ ತುಂಬಿಸುವ ಜೊತೆಗೆ ಕಚೇರಿ ನವೀಕರಿಸುವ ಕೆಲಸ ಮಾಡಿ ಸಂಘವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ.
>
> – ಎಂ.ವಿ.ಶಿವಶಂಕರಮೂರ್ತಿ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ.

## ತರಗನಹಳ್ಳಿಯಲ್ಲಿ ಪ್ರತಿಭಾ ಕಾರಂಜಿ



ನಂಜನಗೂಡು ತಾಲೂಕಿನ ತರಗನಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರತಿಭಾ ಕಾರಂಜಿ ನಡೆಯಿತು. ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯ ನಂಜುಂಡಸ್ವಾಮಿ, ಮುಖ್ಯ ಶಿಕ್ಷಕ ಸಿ.ಬಸವರಾಜು, ಅಂಬ್ರಿನ್ ಬಾನು, ಎಸ್‌ಡಿಎಂಸಿ ಅಧ್ಯಕ್ಷ, ಸದಸ್ಯರು, ಗ್ರಾಮಸ್ಥರು, ಶಿಕ್ಷಕರು, ಮಕ್ಕಳಿದ್ದರು.

## ಗಣೇಶ್ ನಿಧನ



ಹುಣಸೂರು, ಆ.31– ನಗರದ ಕಲ್ಕುಣಿಕೆ ನಿವಾಸಿ ಮರಿಸ್ವಾಮಿ ಅವರ ಪುತ್ರ ಗಣೇಶ್ (30) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಕಲ್ಕುಣಿಕೆ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ದೇವಮ್ಮ



ಹಿರಿಕ್ಯಾತನಹಳ್ಳಿ, ಆ.31– ಹುಣಸೂರು ತಾಲೂಕಿನ ಹಿರಿಕ್ಯಾತನಹಳ್ಳಿ ಗ್ರಾಮದ ದೇವಮ್ಮ(89) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಗ್ರಾಪಂ ಬಿಲ್ ಕಲೆಕ್ಟರ್ ಶಿವಣ್ಣ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ನಿವೃತ್ತ ಪ್ರಾಧ್ಯಾಪಕ ಪ್ರೊ. ಮಹೇಶ್ ಚಂದ್ರ ಗುರುಗೆ ನುಡಿನಮನ

ಮೈಸೂರು,ಆ.31(ಎಂಟಿವೈ)– ದಮನಿತರ ಪರ ಸದಾ ಚಿಂತನೆ ಮಾಡುತ್ತಿದ್ದ, ಪ್ರೊ.ಬಿ.ಪಿ.ಮಹೇಶ್ ಚಂದ್ರಗುರು ಜಾತಿ ಧರ್ಮ ಮೀರಿದ ಕರ್ನಾಟಕದ ವೈಚಾರಿಕ ಪ್ರಜ್ಞೆಯ ಮಿಂಚಾಗಿದ್ದರು ಎಂದು ಗಾಂಧಿನಗರ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಮೈಸೂರು ವಿಶ್ವವಿದ್ಯಾನಿಲಯ ಹಿರಿಯ ವಿದ್ಯಾರ್ಥಿಗಳ ಒಕ್ಕೂಟ, ಕನ್ನಡ ಸಾಹಿತ್ಯ ಕಲಾಕೂಟ ಸಂಯುಕ್ತಾಶ್ರಯದಲ್ಲಿ ಶನಿವಾರ ಆಯೋಜಿಸಿದ್ದ ನುಡಿ ನಮನ ಕಾರ್ಯಕ್ರಮದಲ್ಲಿ ಪ್ರೊ.ಬಿ.ಪಿ. ಮಹೇಶಚಂದ್ರ ಗುರು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಹುಟ್ಟು ಹೋರಾಟಗಾರರಾಗಿದ್ದ ಪ್ರೊ.ಮಹೇಶ್ ಚಂದ್ರಗುರು ದಮನಿತರ, ಶೋಷಿತರ ಸಾಕ್ಷಿ ಪ್ರಜ್ಞೆಯಂತೆ ಕೆಲಸ ಮಾಡುತ್ತಿದ್ದರು. ಅನ್ಯಾಯವನ್ನು ಗಟ್ಟಿಯಾಗಿ ಪ್ರತಿಭಟಿಸುತ್ತಿದ್ದರು. ಶೋಷಿತರ ಪರ ಗಟ್ಟಿಧ್ವನಿಯಾಗಿದ್ದರು. ಜಾತಿ, ಧರ್ಮದ ಸಂಕೋಲೆ ಅಂಟಿಸಿಕೊಳ್ಳದೆ ಕರ್ನಾಟಕದ ವೈಚಾರಿಕ ಮಿಂಚಾಗಿ ಕೆಲಸ ಮಾಡಿದ್ದಾರೆ. ಯಾವುದೇ ಹೋರಾಟಗಾರರಿಗೆ ಹಾಗೂ ದಮನಿತರ ಪರವಾಗಿರುವವರಿಗೆ ಸಾವು ಇಲ್ಲ. ಹಾಗಾಗಿ ಇವರ ಆದರ್ಶಗಳನ್ನು ನಾವೆಲ್ಲರೂ ಪಾಲಿಸಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ಅಸಮಾನತೆ, ತಾರತಮ್ಯವನ್ನು ಧಿಕ್ಕರಿಸಿ, ಎಲ್ಲರಿಗೂ ಮಾದರಿಯಾಗಿದ್ದ ಅಪರೂಪದ ಅಧ್ಯಾಪಕರೂ ಆಗಿದ್ದ ಪ್ರೊ. ಮಹೇಶ್ ಚಂದ್ರಗುರು ನಮ್ಮ ನಡುವೆ ಇದ್ದ ದೊಡ್ಡ ಹೋರಾಟಗಾರ. ಸಮಾಜದ ಸಮಸ್ಯೆಗಳನ್ನು ಪ್ರಶ್ನಿಸಿ ಸ್ಪಂದಿಸುತ್ತಿದ್ದರು. ಅವರ ನಿಧನದಿಂದಾಗಿ ಸಮಾಜಕ್ಕೆ ವಿದ್ಯಾರ್ಥಿ ವೃಂದಕ್ಕೆ ನಷ್ಟ ಉಂಟಾಗಿದೆ ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಶೋಷಿತರು, ದಮನಿತರು, ಹಿಂದುಳಿದವರಿಗೆ ಅನ್ಯಾಯವಾದಾಗ ಅವರ ಧ್ವನಿಯಾಗಿ ಗುರು ಅವರು ಕೆಲಸ ಮಾಡಿದ್ದಾರೆ. ಅವರ ಹೋರಾಟ, ಮಾತು, ದಕ್ಷತೆ, ಗಟ್ಟಿತನ ಎಲ್ಲವೂ ಸಂಚಲನ ಮೂಡಿಸಿದೆ. ಅವರು ಭಯದ ಮನಸ್ಥಿತಿಯಲ್ಲಿ ಬದುಕಲಿಲ್ಲ. ನೇರವಾಗಿ ಆಳುವ ಸರ್ಕಾರ, ಜನಪ್ರತಿನಿಧಿ ಟೀಕಿಸುವ ಧೈರ್ಯ ಹೊಂದಿದ್ದರು ಎಂದು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್ ಮಾತನಾಡಿ, ಮಹೇಶ್ ಚಂದ್ರಗುರು ದಲಿತ, ರೈತ, ಬಂಡಾಯ ಸಾಹಿತ್ಯ ಚಳವಳಿ ಹಾಗೂ ಪ್ರಗತಿಪರ ಚಳವಳಿಗಳಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ವಿಶ್ವವಿದ್ಯಾನಿಲಯದಲ್ಲಿದ್ದರೂ ಹೋರಾಟಗಳಲ್ಲಿ ಭಾಗಿಯಾಗಿ ದಮನಿತರ ಪರವಾಗಿ ಇದ್ದರು ಎಂದು ತಿಳಿಸಿದರು.

ರಂಗಕರ್ಮಿ ಹೆಚ್. ಜನಾರ್ಧನ್ ಮಾತನಾಡಿ, ಗುರು ಅವರು ಪ್ರಾಮಾಣಿಕತೆ ಹಾಗೂ ನೇರವಾದಿಯಾಗಿದ್ದರು. ತನ್ನ ಜ್ಞಾನವನ್ನು ಸಾರ್ವತ್ರಿಕವಾಗಿ ತಿಳಿಸಿಕೊಟ್ಟು, ಡಾ.ಬಿ.ಆರ್.ಅಂಬೇಡ್ಕರ್, ಬುದ್ಧ ಅವರ ಆದರ್ಶಗಳನ್ನು ಪಾಲಿಸುತ್ತಿದ್ದರು. ಜನಪರ ಹೋರಾಟ, ನೇರವಾದಿ, ನಿಷ್ಠೂರವಾದಿ ಹಾಗೂ ಅತ್ಯಂತ ಮಾನವೀಯ ಮೌಲ್ಯಗಳನ್ನು ಒಳಗೊಂಡಿದ್ದರು. ಮೌನಕ್ಕೆ ಮೊರೆಹೋಗದೆ ಮತ್ತು ಪರಿಣಾಮವನ್ನೂ ಲೆಕ್ಕಿಸದೆ ನೇರವಾಗಿ ಮತ್ತು ನಿಷ್ಠುರವಾಗಿ ತಮ್ಮ ಅಭಿಪ್ರಾಯ ಮಂಡಿಸುತ್ತಿದ್ದರು. ಡಾ.ಮಹೇಶ್ ಚಂದ್ರ ಗುರು ಅವರ ನಿಧನದಿಂದ ಸಮಾಜ ಒಬ್ಬ ಚಿಂತನಶೀಲ ಮಾರ್ಗದರ್ಶಕನನ್ನು ಕಳೆದುಕೊಂಡಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ರಘುರಾಂ ವಾಜಪೇಯಿ, ಕರ್ನಾಟಕ ರಾಜ್ಯ ರೈತ ಸಂಘ ಸಾಮೂಹಿಕ ನಾಯಕತ್ವ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜು ಕಿರಣ್, ಮುಕ್ತ ವಿವಿ ಪತ್ರಿಕೋದ್ಯಮ ವಿಭಾಗದ ಪ್ರಾಧ್ಯಾಪಕ ಡಾ.ತೇಜಸ್ವಿ ನವಿಲೂರು ಮಾತನಾಡಿದರು. ಈ ಸಂದರ್ಭದಲ್ಲಿ ಮುಕ್ತ ವಿವಿ ಪ್ರಾಧ್ಯಾಪಕಿ ಡಾ.ಕವಿತಾ ರೈ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಹೆಚ್.ಎಸ್. ಪ್ರಕಾಶ್, ಸಿಂಡಿಕೇಟ್ ಸದಸ್ಯ ಡಾ.ನಟರಾಜ್ ಶಿವಣ್ಣ, ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ, ಜಿಲ್ಲಾ ಮಡಿವಾಳ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಕಸಾಪ ಕೋಶಾಧ್ಯಕ್ಷ ಜಿ.ಪ್ರಕಾಶ್, ಕ.ರಾ. ಗೋಪಾಲಕೃಷ್ಣ, ಚಂದ್ರು ಮಂಡ್ಯ, ಗುರುರಾಜ ಬೇಡಿಕರ್, ಸಂಶೋಧಕ ವಿದ್ಯಾರ್ಥಿಗಳಾದ ಸಂಜಯ್, ಅಭಿಷೇಕ್ ಪಾಳ್ಯಗಾರ್, ಯಶವಂತ್ ಕುಮಾರ್ , ಶಿವಮೂರ್ತಿ, ಸಚಿನ್, ಚೇತನ್, ಬಸವರಾಜ್, ಸುಶ್ಮಿತಾ, ದಿಲೀಪ್ ನರಸಯ್ಯ, ಗೌತಮ್ ದೇವನೂರು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.




ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಶನಿವಾರ ನಡೆದ ನುಡಿ ನಮನ ಕಾರ್ಯಕ್ರಮದಲ್ಲಿ ಗಾಂಧಿನಗರ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಪ್ರೊ.ಮಹೇಶ್ ಚಂದ್ರಗುರು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

> ಮಹೇಶ್ ಚಂದ್ರ ಗುರು ಬುದ್ಧ, ಬಸವ, ಅಂಬೇಡ್ಕರ್ ತತ್ವಗಳನ್ನು ಮೈಗೂಡಿಸಿಕೊಂಡಿದ್ದರು. ವಿದ್ಯಾರ್ಥಿಗಳ ಮನಸ್ಸನ್ನು ಕೂಡ ಗೆದ್ದಿದ್ದರು. ಯಾವುದೇ ವಿಚಾರ ಆಗಲಿ, ಅದನ್ನು ನೇರವಾಗಿ ಹೇಳುತ್ತಿದ್ದರು. ಪತ್ರಿಕೆಗಳಿಗೆ ಹೆಚ್ಚು ಲೇಖನಗಳನ್ನು ಬರೆಯುತ್ತಿದ್ದರು. ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನವನ್ನು ನೀಡಿದ್ದಾರೆ.
> -ಅಂಶಿ ಪ್ರಸನ್ನಕುಮಾರ್.
> ಹಿರಿಯ ಪತ್ರಕರ್ತ

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ದ ರೂಲರ್ (ಕ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ರಾಯನ್ (ತ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಭೀಮಾ (ಕ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಕರಿಯ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಭೀಮಾ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಸರಿಪೋದಾ ಶನಿವಾರಂ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಭೀಮಾ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಕರಿಯಾ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಮಿಸ್ಟರ್ ಬಚನ್ (ತೆ) | 4 ಪ್ರದರ್ಶನಗಳು |
| **ಪ್ರಭಾ** | |
| ಅಹೋ ವಿಕ್ರಮಾರ್ಕ (ಕ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ. |
| ಸ್ಕ್ರೀನ್ 2 | ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 3 | ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ. |
| ಸ್ಕ್ರೀನ್ 4 | ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ. |

### ಐನಾಕ್ಸ್ ಮೂವೀಸ್
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ. |
| ಸ್ಕ್ರೀನ್ 2 | ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ. |
| ಸ್ಕ್ರೀನ್ 3 | ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ. |
| ಸ್ಕ್ರೀನ್ 4 | ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ರಾಷ್ಟ್ರೀಯ ಪೋಷಣ್ ಅಭಿಯಾನ ಯೋಜನೆ




ಮೈಸೂರು ತಾಲೂಕು ನಾಗನಹಳ್ಳಿ ಅಂಗನವಾಡಿ ಕೇಂದ್ರದಲ್ಲಿ ರಾಷ್ಟ್ರೀಯ ಪೋಷಣ್ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಆ.31(ಎಸ್‌ಬಿಡಿ)– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆ ಸಹಯೋಗದಲ್ಲಿ ನಾಗನಹಳ್ಳಿಯ ಒಂದನೇ ಅಂಗನವಾಡಿ ಕೇಂದ್ರದಲ್ಲಿ ಶನಿವಾರ ರಾಷ್ಟ್ರೀಯ ಪೋಷಣ್ ಅಭಿಯಾನ ಯೋಜನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

'ತಾಯಿಯ ಹೆಸರಿನಲ್ಲಿ ಒಂದು ಗಿಡ' ಶೀರ್ಷಿಕೆಯಡಿ ನಡೆದ ಪೋಷಣ್ ಮಹಾ ಸಪ್ತಾಹಕ್ಕೆ ಆರೋಗ್ಯ ವೃದ್ಧಿ ಮತ್ತು ಪೌಷ್ಟಿಕತೆ ಹೆಚ್ಚಿಸಲು ನೆರವಾಗುವ ಪಪ್ಪಾಯ ಸಸಿ ನೆಡುವ ಮೂಲಕ ಚಾಲನೆ ನೀಡಲಾಯಿತು. ಬಳಿಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹಿರಿಯ ಮೇಲ್ವಿಚಾರಕಿ ಶ್ರೀಮತಿ ಭಾಗ್ಯಶ್ರೀ ವೈ.ನೂಕಾಪೂರ್ ನೇತೃತ್ವದಲ್ಲಿ ನಡೆದ ಸಭಾ ಕಾರ್ಯಕ್ರಮವನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕಿ ಎಸ್.ಬಿ.ಮಮತಾ ಉದ್ಘಾಟಿಸಿ, ಆರೋಗ್ಯ ಕಾಳಜಿ ಬಗ್ಗೆ ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿ, ಕೃಷಿ ಅಧಿಕಾರಿ ಗೌರಮ್ಮ ಅಗಸಿಬಾಗಿಲ್ ಮಹಿಳೆಯರು ಹಾಗೂ ಮಕ್ಕಳ ಆರೋಗ್ಯದ ಬಗ್ಗೆ ವಿವರಣೆ ನೀಡಿದರು. ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಚೆನ್ನಪ್ಪ, ಲೈಬ್ರರಿ ಕಾರ್ಯದರ್ಶಿ ನಾಗರಾಜ್, ಅಂಗನವಾಡಿ ಕಾರ್ಯಕರ್ತೆಯರಾದ ಜ್ಯೋತಿ, ಶಶಿಕಲಾ, ಶೃತಿ, ಕಿರಿಯ ಆರೋಗ್ಯ ಮಹಿಳಾ ಕಾರ್ಯಕರ್ತೆ ಸೌಮ್ಯ, ಆಶಾ ಕಾರ್ಯಕರ್ತೆಯರಾದ ಶಾಂತಮ್ಮ, ಶಾರದಮ್ಮ, ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ಸದಸ್ಯರು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.


# ಚಿಕ್ಕಾಂಜನೇಯ ಮೆರವಣಿಗೆ



ಶ್ರಾವಣ ಮಾಸದ ಕಡೇ ಶನಿವಾರದಂದು ಮೈಸೂರಿನ ಅಗ್ರಹಾರ ತ್ಯಾಗರಾಜ ರಸ್ತೆಯಲ್ಲಿನ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಪ್ರಸಾದ ವಿನಿಯೋಗದ ನಂತರ ದೇವರ ಮೆರವಣಿಗೆಯನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು.

# ಪಿಕ್ಕೆ ಹಾಕುತ್ತವೆ ಎಂದು ಅರಳೀಮರದ ರೆಂಬೆಗೆ ಕತ್ತರಿ: ನೆಲೆ ಕಳೆದುಕೊಂಡ ನೂರಾರು ಪಕ್ಷಿಗಳು

## ಮರಿಗಳ ನರಳಾಟ ಕಂಡು ಮರುಗಿದ ಗ್ರಾಮಸ್ಥರು



ಟಿ.ನರಸೀಪುರ ತಾಲೂಕಿನ ಬಿ.ಸೀಹಳ್ಳಿ ಗ್ರಾಮದಲ್ಲಿ ಪಕ್ಷಿಗಳ ಗೂಡುಗಳಿದ್ದ ಅರಳಿಮರದ ರೆಂಬೆ–ಕೊಂಬೆ ಕತ್ತರಿಸಿರುವುದು

ಮೈಸೂರು, ಆ.31(ಎಂಟಿವೈ)– ಪಕ್ಷಿಗಳ ಪಿಕ್ಕೆಯಿಂದ ರೋಸಿ ಹೋದ ಕೆಲವರು ರಸ್ತೆ ಬದಿ ಇದ್ದ ಅರಳೀಮರವೊಂದರ ರೆಂಬೆ–ಕೊಂಬೆ ಕತ್ತರಿಸಿದ ಪರಿಣಾಮ ನೂರಾರು ಪಕ್ಷಿಗಳು ಆಶ್ರಯ ಕಳೆದುಕೊಂಡು ನರಳಬೇಕಾದಂತಹ ವಿದ್ರಾವಕ ಪ್ರಸಂಗ ಟಿ.ನರಸೀಪುರ ತಾಲೂಕಿನ ಬಿ.ಸೀಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸರ್ಕಾರಿ ಶಾಲೆ ಹಾಗೂ ಗ್ರಾ.ಪಂ ಕಚೇರಿ ಮುಂಭಾಗವಿದ್ದ ನೂರು ವರ್ಷಕ್ಕೂ ಹಳೆದಾದ ಅರಳೀ ಮರದಲ್ಲಿ ಲಿಟಲ್ ಇಗ್ರೇಟ್ ಸೇರಿದಂತೆ ಹಲವು ಪಕ್ಷಿಗಳು ಗೂಡುಕಟ್ಟಿಕೊಂಡು ಸಂತಾನೋತ್ಪತ್ತಿ ಮಾಡುತ್ತಾ ಬಂದಿದ್ದವು. ಅಲ್ಲದೆ ನೂರಾರು ಪಕ್ಷಿಗಳು ಬೀಡು ಬಿಟ್ಟಿದ್ದವು. ಮರದ ಕೆಳಗೆ ಪಕ್ಷಿಗಳ ಪಿಕ್ಕೆ ವಾಸನೆ ಎಂಬ ಕಾರಣಕ್ಕೆ ಅರಳೀ ಮರದ ಕೊಂಬೆಗಳ ಕತ್ತರಿಸಿ, ನೆಲಕ್ಕುರುಳಿಸಿದ್ದಾರೆ. ಇವುಗಳಲ್ಲಿ ಗೂಡು ಕಟ್ಟಿದ ಪಕ್ಷಿಗಳು ನೆಲೆ ಕಳೆದುಕೊಂಡಿವೆ. ಅಲ್ಲದೆ ಅವುಗಳ ರೋದನ ನೋಡುಗರಲ್ಲಿ ನೋವುಂಟು ಮಾಡಿತು.

ಸಣ್ಣ ಮರಿಗಳು ಹಾರಲು ಆಗದೆ ಶಾಲೆ ಮುಂಭಾಗದ ಮೋರಿಯಲ್ಲಿ ಅಡಗಿ ಕುಳಿತಿದ್ದವು. ಈಗ ಅರಳೀಮರ ಬೋಳಾಗಿದ್ದು, ಪಕ್ಷಿಗಳ ಮೂಕ ರೋದನೆಗೆ ಸಾಕ್ಷಿಯಾಗಿದೆ

**ಅರಣ್ಯ ಸಿಬ್ಬಂದಿಗಳು ಭೇಟಿ:** ಅರಳೀಮರದ ರೆಂಬೆ–ಕೊಂಬೆಯ ಆಶ್ರಯ ಕಳೆದುಕೊಂಡ ಪಕ್ಷಿಗಳ ಮೂಕ ರೋಧನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಸೂಚನೆ ಮೇರೆಗೆ ಸ್ಥಳಕ್ಕೆ ಡಿಸಿಎಫ್ ಡಾ.ಕೆ.ಎನ್.ಬಸವರಾಜು ಟಿ.ನರಸೀಪುರದ ಆರ್‌ಎಫ್‌ಓ, ಡಿಆರ್‌ಎಫ್, ಸಿಬ್ಬಂದಿ ಭೇಟಿ ನೀಡಿ ಮರದ ಕೊಂಬೆ ಕಡಿದ ಕೆಲವರನ್ನು ತರಾಟೆಗೆ ತೆಗೆದುಕೊಂಡರು. ಅಲ್ಲದೆ, ಪಕ್ಷಿಗಳ ಮರಿಗಳನ್ನು ಸಂರಕ್ಷಿಸಲು ಕ್ರಮ ಕೈಗೊಂಡಿದ್ದಾರೆ.

**ಮರುಗಿದ ಗ್ರಾಮಸ್ಥರು:** ಪಿಕ್ಕೆಯ ನೆಪವೊಡ್ಡಿ ನಿರ್ದಯವಾಗಿ ಮರದ ರೆಂಬೆ–ಕೊಂಬೆ ಕತ್ತರಿಸಿ, ಪಕ್ಷಿಗಳ ನೆಲೆ ಕಿತ್ತುಕೊಂಡವರ ಬಗ್ಗೆ ಬಿ.ಸೀಹಳ್ಳಿ ಗ್ರಾಮದ ಗ್ರಾಮಸ್ಥರು ಬೇಸರಿಸಿದ್ದಾರೆ. ಪರಿಸ್ಥಿತಿ ಗಂಭೀರತೆ ಅರಿಯದೆ ಹಾಗೂ ತಪ್ಪು ತಿಳುವಳಿಕೆಯಿಂದ ಮರದ ಕೊಂಬೆ ಕಡಿಯಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಕೃತ್ಯ ಮರುಕಳಿಸದಂತೆ ಎಚ್ಚರ ವಹಿಸುವ ಭರವಸೆ ನೀಡಿದ್ದಾರೆ.

**ಗ್ರಾ.ಪಂ ಅಧಿಕಾರಿಗಳ ವೈಫಲ್ಯ:** ಮರದ ಕೊಂಬೆ ಕಡಿದ ಪ್ರಕರಣವನ್ನು ಬಿ.ಸೀಹಳ್ಳಿ ಗ್ರಾಪಂ ಸಿಬ್ಬಂದಿಯಾದರೂ ತಡೆಯಬಹುದಾಗಿತ್ತು. ಅಲ್ಲದೆ, ಪಕ್ಷಿಗಳ ಸಂರಕ್ಷಣೆಯ ಮಹತ್ವ ಸ್ಥಳೀಯರಿಗೆ ತಿಳಿಸಬಹುದಾಗಿತ್ತು. ರಸ್ತೆ ಬದಿಯ ಮರದ ರೆಂಬೆ ಕಡಿಯಲು ಅನುಮತಿ ಪಡೆಯದೇ ಇರುವುದಕ್ಕೆ ಆಕ್ಷೇಪಿಸಬಹುದಾಗಿತ್ತು ಎಂದು ಪರಿಸರ ಪ್ರೇಮಿಗಳು ಗ್ರಾಪಂ ಅಧಿಕಾರಿಗಳ ಕಾರ್ಯವೈಖರಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

> **ಕೃತ್ಯ ಮರುಕಳಿಸದಂತೆ ಜಾಗೃತಿ ಮೂಡಿಸಬೇಕು**
> ಬಿ.ಸೀಹಳ್ಳಿಯಲ್ಲಿ ಮರದ ಕೊಂಬೆ ಕಡಿದ ಪರಿಣಾಮ ನೂರಾರು ಪಕ್ಷಿಗಳು ಅನಾಥವಾಗಿವೆ. ಪಕ್ಷಿ ಸಂಕುಲಕ್ಕೆ ಸೀಹಳ್ಳಿ ಗ್ರಾಮಸ್ಥರಿಂದ ಯಾವುದೇ ತೊಂದರೆಯಾಗುವುದಿಲ್ಲ. ರಕ್ಷಣೆ ಇದೆ ಎಂಬ ನಂಬಿಕೆಯಿಂದ ಹಲವು ವರ್ಷಗಳಿಂದಲೂ ಅದೇ ಮರದ ಮೇಲೆ ಗೂಡು ಕಟ್ಟಿ ಸಂತಾನೋತ್ಪತ್ತಿ ಮಾಡುತ್ತಿದ್ದವು. ಆ ಪಕ್ಷಿಗಳು ಜಾನುವಾರುಗಳ ಮೈ ಮೇಲಿರುವ ಕೀಟಗಳನ್ನು ಹಾಗೂ ಉಳುಮೆ ಮಾಡುವ ವೇಳೆ ಕ್ರಿಮಿ ಕೀಟಗಳನ್ನು ತಿಂದು ರೈತರಿಗೆ ನೆರವಾಗುತ್ತಿದ್ದವು. ಆದರೆ, ಮರದ ಕೊಂಬೆ ಕಡಿದು ಅವುಗಳ ಗೂಡನ್ನು ಹಾಳು ಮಾಡಿರುವುದು ಖಂಡನೀಯ. ಇಂತಹ ಘಟನೆ ಯಾವ ಸ್ಥಳದಲ್ಲೂ ನಡೆಯಬಾರದು. ಆ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. - **ಪ್ರದೀಪ್**, ಪ್ರಾಣಿ ಸಂರಕ್ಷಕ

## ಲಾಭದ ಆಸೆಯಿಂದ ಆನ್‌ಲೈನ್‌ನಲ್ಲಿ ಹೂಡಿಕೆ

# ಶಿಕ್ಷಕರಿಗೆ 25 ಲಕ್ಷ, ವೈದ್ಯೆಗೆ 23 ಲಕ್ಷ ವಂಚನೆ

- ಟಾಸ್ಕ್ ನೀಡಿ ವ್ಯಕ್ತಿಯಿಂದ 6.68 ಲಕ್ಷ ಸುಲಿಗೆ
- ಮಾತಿಗೆ ಮರುಳಾಗಿ ಹಣ ಕಳೆದುಕೊಳ್ಳುವವರ ಸಂಖ್ಯೆ ಏರಿಕೆ



ಮೈಸೂರು, ಆ.31(ಎಸ್‌ಬಿಡಿ)– ಆನ್‌ಲೈನ್ ಮೂಲಕ ಹೂಡಿಕೆ ಮಾಡಿ ಮೈಸೂರಿನ ಶಿಕ್ಷಕರೊಬ್ಬರು 25 ಲಕ್ಷ ರೂ. ಹಾಗೂ ವೈದ್ಯೆಯೊಬ್ಬರು 23 ಲಕ್ಷ ರೂ. ಕಳೆದುಕೊಂಡಿದ್ದಾರೆ.

ಮೈಸೂರಿನ ಶಿಕ್ಷಕ ಕೋಟಕ್ ಸೆಕ್ಯೂರಿಟೀಸ್ ವಾಟ್ಸಾಪ್ ಗ್ರೂಪ್‌ಗೆ ಸೇರಿ ಮೋಸ ಹೋಗಿದ್ದಾರೆ. ಆ ಗ್ರೂಪ್‌ನಲ್ಲಿ ಹೂಡಿಕೆ ಬಗ್ಗೆ ಹಂಚಿಕೆಯಾಗುತ್ತಿದ್ದ ಮಾಹಿತಿಯನ್ನು ನಂಬಿ, ತಾವೂ ಹಣ ಹೂಡಲು ಮುಂದಾಗಿದ್ದಾರೆ ಆ ವೇಳೆ ಗ್ರೂಪ್‌ನ ಅಸಿಸ್ಟೆಂಟ್ ನಾರಾಯಣ್ ಜಿಂದಾಲ್ ಎಂದು ಪರಿಚಯಿಸಿಕೊಂಡ ವ್ಯಕ್ತಿ, ಕೋಟಕ್ ಕೇವ್ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಸಿ ಅಧಿಕ ಲಾಭದ ಆಸೆ ಹುಟ್ಟಿಸಿದ್ದಾನೆ. ಆತನ ನಯವಾದ ಮಾತುಗಳನ್ನು ನಂಬಿದ ಶಿಕ್ಷಕ, ಹಂತ ಹಂತವಾಗಿ ಒಟ್ಟು 25.35 ಲಕ್ಷ ರೂ. ಹೂಡಿಕೆ ಮಾಡಿ, ವಂಚನೆಗೊಳಗಾಗಿದ್ದಾರೆ.

ಇದೇ ರೀತಿ ವೈದ್ಯೆಯೊಬ್ಬರು ಇಟಿ ಇಂಡಿಯಾ ಸ್ಟಾಕ್ ಮಾರ್ಕೆಟ್ ಇನ್ವೆಸ್ಟ್‌ಮೆಂಟ್ 29 ಎಂಬ ವಾಟ್ಸಾಪ್ ಗ್ರೂಪ್‌ಗೆ ಸೇರಿದ್ದರು. ನಂತರ ಅಭಿಷೇಕ್ ಚೋಪ್ರಾ ಹಾಗೂ ಆತನ ಸಹಾಯಕ ಕರೆ ಮಾಡಿ ಎಲ್‌ಎಸ್‌ವಿ ಮ್ಯಾನೇಜ್‌ಮೆಂಟ್ ಆಪ್ ಅನ್ನು ಡೌನ್‌ಲೋಡ್ ಮಾಡುವಂತೆ ತಿಳಿಸಿದ್ದಾರೆ. ನಂತರ ಅಧಿಕ ಲಾಭದಾಸೆಗೆ ಅವರ ಸೂಚನೆಯಂತೆ 23.21 ಲಕ್ಷ ರೂ. ಹೂಡಿಕೆ ಮಾಡಿ, ಮೋಸ ಹೋಗಿದ್ದಾರೆ.

**ಟಾಸ್ಕ್ ನೀಡಿ 6.68 ಲಕ್ಷ ಗುಳುಂ:** ವಿಜಯನಗರ 4ನೇ ಹಂತದ ನಿವಾಸಿಯೊಬ್ಬರು ಟಾಸ್ಕ್ ಪೂರೈಸುವ ಮೂಲಕ ಅಧಿಕ ಹಣ ಗಳಿಸಬಹುದೆಂಬ ಅಪರಿಚಿತನ ಮಾತು ನಂಬಿ ಮೋಸ ಹೋಗಿದ್ದಾರೆ. ಡ್ರೀಮ್‌ವರ್ಕ್ ಮಾರ್ಕೆಟಿಂಗ್ ವಾಟ್ಸಾಪ್ ಗ್ರೂಪ್ ಮೂಲಕ ಪಾರ್ಟ್‌ಟೈಮ್ ಜಾಬ್ ಸಂದೇಶ್ ಕಳುಹಿಸಿದ ಅಪರಿಚಿತನ ಸಂಪರ್ಕಿಸಿದಾಗ ಆತ ಟೆಲಿಗ್ರಾಂ ಮೂಲಕ ಕಳುಹಿಸಿದ ಲಿಂಕ್ ಕಳುಹಿಸಿದ್ದಾನೆ. ಹೋಟೆಲ್ ಮ್ಯಾನೇಜ್‌ಮೆಂಟ್ ಟಾಸ್ಕ್ ಮೂಲಕ ಅಧಿಕ ಹಣ ಸಂಪಾದಿಸಬಹುದು, ಒಂದು ಟಾಸ್ಕ್ ಮಾಡಿದರೆ 60 ರೂ. ಹಣ ಸಿಗುತ್ತದೆ ಎಂದು ನಂಬಿಸಿದ್ದಾನೆ. ಆತನ ಮಾತು ನಂಬಿ ಡಿಪಾಸಿಟ್ ಆಗಿ 6.68 ಲಕ್ಷ ರೂ. ಹಣ ಕಳುಹಿಸಿ, ಕಳೆದುಕೊಂಡಿದ್ದಾರೆ.

ಈ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

# ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳು ಅಕ್ಷರ ಬೀಜ ಬಿತ್ತಿದ ಮಹಾತ್ಮರು

## 'ಶ್ರೀ ಶಿವರಾತ್ರಿ ರಾಜೇಂದ್ರ ಸದ್ಭಾವನ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಬನ್ನೂರು ಕೆ.ರಾಜು ಬಣ್ಣನೆ

ಮೈಸೂರು, ಆ.31(ಜಿಎ)–ಶ್ರೀ ಸುತ್ತೂರು ವೀರಸಿಂಹಾಸನ ಮಹಾ ಸಂಸ್ಥಾನ ಮಠದ ಜಗದ್ಗುರು ಪರಂಪರೆಯ 23ನೇ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮೀಜಿ ಅವರು ಶಿಕ್ಷಣದ ಮಹತ್ವವನ್ನು ಜಗತ್ತಿಗೆ ಸಾರಿದ ಶಿಕ್ಷಣ ಕ್ರಾಂತಿಯ ಕಾರಣ ಕರ್ತರು ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಡಾ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 109 ನೇ ಜಯಂತಿ ಮಹೋತ್ಸವ ಹಾಗೂ 'ಶ್ರೀ ಶಿವರಾತ್ರಿ ರಾಜೇಂದ್ರ ಸದ್ಭಾವನಾ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಶಿಕ್ಷಣದಿಂದ ಏನು ಬೇಕಾದರೂ ಸಾಧಿಸಬಹುದಾಗಿದ್ದು ಪ್ರತಿಯೊಬ್ಬರೂ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಬಡ ಮಕ್ಕಳು ಅಕ್ಷರ ಕಲಿತು ವಿದ್ಯಾವಂತರಾಗಬೇಕೆಂಬ ಸದಾಶಯದಿಂದ ಸ್ವಾತಂತ್ರ್ಯ ಪೂರ್ವದಲ್ಲೇ ಮೈಸೂರು ಭಾಗದಲ್ಲಿ ಅಕ್ಷರ ಬೀಜ ಬಿತ್ತಿದ ಮಹಾತ್ಮರು ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳು ಎಂದರು.

ಊಟ, ವಸತಿ, ವಿದ್ಯೆ ಸೇರಿದಂತೆ ತ್ರಿವಿಧ ದಾಸೋಹಿಯಾಗಿ ಮಾನವ ಸೇವೆಗಾಗಿ ತಮ್ಮ ಇಡೀ ಜೀವನವನ್ನು ಸಮರ್ಪಿಸಿಕೊಂಡಿದ್ದ ಸಾರ್ಥಕ ಬದುಕಿನ ಸಂತ ರಾಜೇಂದ್ರ ಶ್ರೀಗಳು ವಿಶೇಷವಾಗಿ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಟ್ಟವರು. ದೂರದೃಷ್ಟಿಯುಳ್ಳ ಮಹಾಜ್ಞಾನಿಯಾದ ಅವರು ಕೇವಲ ಬೆರಳೆಣಿಕೆ ಮಂದಿ ವಿದ್ಯಾರ್ಥಿಗಳಿಂದ ಶಾಲೆ ಪ್ರಾರಂಭಿಸಿ ಅಂದು ನೆಟ್ಟ ಪುಟ್ಟ ಅಕ್ಷರ ಸಸಿ ಇಂದು ಬೃಹತ್ ಶೈಕ್ಷಣಿಕ ವೃಕ್ಷವಾಗಿ ಬೆಳೆದು ನಿಂತಿದ್ದು, ಇದರ ನೆರಳಿನಲ್ಲಿ ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಸಹಸ್ರಾರು ವಿದ್ಯಾಸಂಸ್ಥೆಗಳಿದ್ದು ಕಲಿಯುವವರಿಗೆ ಎಲ್ಲಾ ರೀತಿಯ ಶಿಕ್ಷಣವೂ ಇಲ್ಲಿ ದೊರೆಯುತ್ತಿದೆ ಎಂದು ತಿಳಿಸಿದರು.

ಶಿಕ್ಷಣ ಕ್ಷೇತ್ರಕ್ಕೆ ಶ್ರೀಗಳ ಕೊಡುಗೆ ಅಪಾರವಾಗಿದ್ದು ಶಿಕ್ಷಣ ಕಾಶಿಯನ್ನೇ ಸೃಷ್ಟಿಸಿದ್ದಾರೆ. ಶ್ರೀಗಳು ಬಿತ್ತಿದ ಅಕ್ಷರದ ಬೀಜ, ನೆಟ್ಟ ಶಿಕ್ಷಣದ ಗಿಡ, ಈಗ ಜೆಎಸ್‌ಎಸ್ ಮಹಾ ವಿದ್ಯಾಪೀಠ ಎಂಬ ಹೆಸರಿನಲ್ಲಿ ಹೆಮ್ಮರವಾಗಿದ್ದು, ಇಂದಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ಸಹ ಇದನ್ನು ಮತ್ತಷ್ಟು ಬೃಹತ್ತಾಗಿ ಬೆಳೆಸುತ್ತಿದ್ದಾರೆ. ಇದರಿಂದಾಗಿ ಇಂದು ಲಕ್ಷಾಂತರ ಮಂದಿ ವಿದ್ಯಾರ್ಥಿಗಳು ಇಲ್ಲಿನ ಶಿಕ್ಷಣದ ಮೂಲಕ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆಂದ ಅವರು, ಒಂದು ಸರ್ಕಾರ ಕೂಡ ಮಾಡಲಾಗದಷ್ಟು ಶೈಕ್ಷಣಿಕ ಕೆಲಸಗಳನ್ನು ಜೆಎಸ್‌ಎಸ್ ವಿದ್ಯಾಸಂಸ್ಥೆ ಮಾಡುತ್ತಿದ್ದು ಇದನ್ನು ನಮ್ಮ ಸಮಾಜ ಸದ್ವಿನಿಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಾದ ಶ್ರೀವಿಷ್ಣು ಸಾಲಿಗ್ರಾಮ ಸ್ವಾಮಿಗಳು, ಯೋಗೇಶ್ ಚುಂಚನಹಳ್ಳಿ, ವೀರೇಶ್ ವೀರಪ್ಪ ಅವರುಗಳಿಗೆ ಶ್ರೀ ಶಿವರಾತ್ರಿ ರಾಜೇಂದ್ರ ಸದ್ಭಾವನಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಜಿಲ್ಲಾ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಶ್ರೀ ಗುರು ವಿದ್ಯಾ ವಿಕಾಸ ಕೇಂದ್ರದ ಅಧ್ಯಕ್ಷ ಸೋಮಶೇಖರ ಸ್ವಾಮಿಗಳು, ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಸದಸ್ಯೆ ಜ್ಯೋತಿ ರೇಚಣ್ಣ, ಶ್ರೀಕೃಷ್ಣ ಲಲಿತ ಕಲಾಮಂದಿರದ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಬಿ.ಎಂ.ಪರಮೇಶ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಶ್ರೀ ಶಿವರಾತ್ರಿ ರಾಜೇಂದ್ರ ಸದ್ಭಾವನಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.



## Garden VARELI

ಹಬ್ಬದ ಸಂಭ್ರಮಕ್ಕೆ ಕಳೆ ನೀಡಲು ಇಲ್ಲಿದೆ ಇನ್ನೂ ಒಂದು ಕಾರಣ !

ಪ್ರೇರಕ ಡಿಸೈನ್‌ಗಳು. ಮನಮೋಹಕ ಪ್ರಿಂಟ್‌ಗಳು !

40%ರ ತನಕ ಡಿಸ್ಕೌಂಟ್ ಸೆಕೆಂಡ್ ಸೇಲ್

ಮಾರಾಟ ಈಗ ಲೈವ್ ಆಗಿದೆ | ಸಮಯ- ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 8.00 (ರವಿವಾರವೂ ತೆರೆದಿರುತ್ತದೆ)

ಸೀರೆಗಳು ₹395 ರಿಂದ ಆರಂಭ | ಡ್ರೆಸ್ ಮೆಟೀರಿಯಲ್ ₹74/ಮೀ.ನಿಂದ ಆರಂಭ | ಸಲ್ವಾರ್ ಸೆಟ್ ಪೀಸ್‌ಗಳ ವಿಶೇಷ ಶ್ರೇಣಿ

ಹೋಟೆಲ್ ಅಭಿಷೇಕ್, 2930/A, (ಆನಂದ್ ವಿಹಾರ್ ಕಲ್ಯಾಣ ಭವನ ಕಾಂಪೌಂಡು), ಕಲ್ಯಾಣ್ ಜ್ಯುವೆಲರ್ಸ್ ಪಕ್ಕದಲ್ಲಿ, ಬಿ. ಎಸ್. ರಸ್ತೆ, ಮೈಸೂರು- 570001.

## Job Opportunity

**INTERIOR DESIGNER / ARCHITECT**

**PICCOLO & GRANDE,** a leading interior design firm based in Mysore, is seeking a talented and experienced **INTERIOR DESIGNER / ARCHITECT** to join our dynamic team.

**POSITION REQUIREMENTS :**

- Proficiency in 3D and 2D drawings.
- Strong skills in time management.
- Experience in material procurement.
- Ability to coordinate with carpenters and manage on-site work.
- Languages known: Kannada, English & Hindi

**Location : Mysore**

Interested candidates please send your resume and portfolio to :

**info@piccolongrande.com or contact us at +91 98860 40650**

Join us in crafting stunning spaces that inspire and delight!

## ವಿಲ್ಲಾ ಸೈಟ್– ಹುಣಸೂರು

**Suraksha Enclave**

20x30, 20x40, 30x40
30x50, 4 Kms ಬಸ್ ಸ್ಟಾಂಡ್‌ನಿಂದ
Entrance Arch, DC Approved , Huda Approved, Water Tank, 4 Outdoor Sports Facility
40 ಅಡಿ ರಸ್ತೆ, 75% ಬ್ಯಾಂಕ್ ಲೋನ್ ಮನೆಗಳು ಲಭ್ಯವಿದೆ. Rs 675/sft. Call

**9900201234**

## ತಕ್ಷಣ ಬೇಕಾಗಿದ್ದಾರೆ

ಕ್ವಾಲಿಟಿ ಇನ್ಸ್‌ಪೆಕ್ಟರ್– 05 ಹುದ್ದೆಗಳು
ಸ್ಟೋರ್ ಕೀಪರ್ – 05 ಹುದ್ದೆಗಳು
ಪ್ರೊಡಕ್ಷನ್ ಸೂಪರ್‌ವೈಸರ್–05 ಹುದ್ದೆಗಳು

ವಿದ್ಯಾಭ್ಯಾಸ : ITI, Diploma, BE

ESI, PF, ಕ್ಯಾಂಟೀನ್ ಸೌಲಭ್ಯವಿರುತ್ತದೆ.
ವಿಳಾಸ: G.J. Engineering
ನಂ.13A, ಮೇಟಗಳ್ಳಿ,
ಇಂಡಸ್ಟ್ರೀಯಲ್ ಬಡಾವಣೆ, ಮೈಸೂರು

**0821-4269033**

ಸಂಪರ್ಕಿಸುವ ಸಮಯ: 10am-6pm

## ಅಡುಗೆ ಮತ್ತು ಮನೆ ಕೆಲಸಕ್ಕೆ ಬೇಕಾಗಿದ್ದಾರೆ

ಸ್ಥಳ: ನಾಗವಾಲ, ಮೈಸೂರು.
ಊಟ ಮತ್ತು ವಸತಿಯ ಸೌಲಭ್ಯವಿರುತ್ತದೆ.

**Mob: 8884001233**

## ಜಮೀನು ಮಾರಾಟಕ್ಕಿದೆ

ಮೈಸೂರು ತಾ|| ಜಯಪುರ ಹೋ|| ದೂರ ಗ್ರಾಮದಲ್ಲಿ 19 ಗುಂಟೆ, 1 ಎಕರೆ, 4 ಗುಂಟೆ, ಮದ್ದೂರು 32 ಗುಂಟೆ ಮತ್ತು 25 ಗುಂಟೆ, ಮಾವಿನಹಳ್ಳಿ 3 ಎಕರೆ 7 ಗುಂಟೆ, 4 ಎಕರೆ, 10 ಗುಂಟೆ, ಹತ್‌ವಾಳು 1 ಎಕರೆ 28 ಗುಂಟೆ, ಕೊಳದಹುಂಡಿ 1 ಎಕರೆ 31 ಗುಂಟೆ ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ

**9945661696, 9663793666**

## SITE FOR SALE

**40x50, 2000 sq.ft.**
**Rs. 2000 per sq.ft.**
East facing corner site for sale at Mahalakshmi Layout, Phase-2, Vajamangala Road, T. Narasipura Road, Varuna, Mysore.
No agent. Contact owner by

**WhatsApp: 98451 64819**

## WANTED TEACHER

For a reputed CBSE School in Mysore.
Subject: English,
Qualification: BA/B.Sc with B.Ed,
Experience is preferred.
Send Resume to:
**hrmysorerps@gmail.com**
**Call: 9731937438**

## SITES FOR SALE
## L.V.R. ENCLAVE

- 30'x40' - E/F & S/F (Commercial)
- 40'x60' - W/F
- 40'x72' - W/F - 60 feet Road

Srirampura 2nd Stage, Mysore near Preethi Layout

**99004-66811 | 99802-70076**

## MUDA APPROVED SITES FOR SALE

RERA APPROVED

**"SRI KRISHNA ROYAL CITY LAYOUT"**

**30x40, 30x50, 30x60 AND COMMERCIAL SITE.**

Attached to Vinayaka Garden City Layout. 500 Mtrs from St. Joseph Central School, Near to Hyundai Car Showroom and Kirloskar Factory.

Scan for Location

**Bank loan available: HDFC Bank, ICICI Bank**

**Mob: 96865-73798 / 99450-70808**

## ನಿವೇಶನಗಳು ಮಾರಾಟಕ್ಕಿವೆ

## ಸೈನಿಕ ನಗರ ಬಡಾವಣೆ

ಡೆವಲಪರ್– **ARAMANE NAGARA DEVELOPERS**

ಇಲವಾಲದಿಂದ ಕೇವಲ 5 ಕಿ.ಮೀ., NH-275 ಗೆ ಹೊಂದಿಕೊಂಡಿದೆ.

ಪ್ರತಿ ಚದರ ಅಡಿಗೆ ಕೇವಲ **ರೂ.699/- & ರೂ.999/-**

**ಉಚಿತ** ನಿವೇಶನ ಭೇಟಿ ಲಭ್ಯವಿರುತ್ತದೆ.

ಆಸಕ್ತರು ಕರೆ ಮಾಡಿ : **95131 57993, 74062 84792**

## 4 Acres Agriculture Land for Sale

Fully Fenced, Two Borewell, Coconut Trees, Big Empty Sheds, 2000 Sq.ft., RCC Building, Labour rooms etc.,

15 km from Mysuru Palace, 2 km from Eagle Burg Enclave & Golf Village, 1 km from ATME Engg., College.

**Contact: 9448247766**

Address: Chaithanya School of Excellence
Mysuru-Bannur Main Road, Harohalli (Mellahalli)
Mysuru-570028

## SITES FOR SALE
## JK TERRA ENCLAVE

PREMIUM VILLA PLOTS LAYOUT

**20X30 - 30X40**

DTCP APPROVED LAYOUT

(100 Mtr From Bogadi Gaddige Road)
5 MINTS FORM BOGADI RING ROAD JUNCTION, JATTIHUNDI BOGADI GADDIGE ROAD

CORPORATION KATHA

TERRA DREAM DEVELOPERS

**79966 79933/96200 96199**

## ಶೂನ್ಯ ಬಂಡವಾಳ ಸೈಟ್‌ಗಳು

**20 ಸೈಟ್‌ಗಳು ಮಾರಾಟಕ್ಕಿವೆ**

DTCP ಅನುಮೋದಿತ 30 ಸೈಟ್‌ಗಳ ಹೊಸ ಬಡಾವಣೆ

1ರೂ ಬಂಡವಾಳವಿಲ್ಲದೆ ನಿಮ್ಮ ಹೆಸರಿಗೆ ಸೈಟ್ ರಿಜಿಸ್ಟರ್ ಮಾಡಿ ಕೊಡಲಾಗುವುದು

ಸರ್ಕಾರಿ/ಖಾಸಗಿ ನೌಕರರು ಮತ್ತು ಐ.ಟಿ. ಹೋಲ್ಡರ್ಸ್‌ಗೆ ಈ ಸುವರ್ಣವಕಾಶ

1550 ರೂ/Sq.ft

ಐಶ್ವರ್ಯ ಗಾರ್ಡನ್, ಯಶ್ ಮೆಗಾಸಿಟಿ ಹಿಂಭಾಗ
ಇಲವಾಲದ ನಂತರ, ಹುಣಸೂರು ಮುಖ್ಯ ರಸ್ತೆ, ಮೈಸೂರು

**9448958332**

## JSS MAHAVIDYAPEETHA

Jagadguru Dr. Shivarathri Rajendra Circle
Mysuru - 570 004, www.jssonline.org
Phone: 0821 - 2548212 Fax: 0821-2548218

### REQUIRED

MED-II/NOT/25/2018-19 DATE: 31.08.2024

Applications are invited from qualified professionals for the following positions at **JSS Nursing College, Mysuru and Chamarajanagar; JSS Nursing School, Mysuru, Chamarajanagar and Kollegal.**

Positions: **Associate/ Assistant Professor/ Nursing Tutors**

**Qualification:** M.Sc/ B.Sc Nursing with teaching experience

**Salary:** Not a constraint for the right candidates

**NOTE:** Freshers with a passion for teaching are also encouraged to apply.

Please send your resume to **the Director, Medical Education Division, JSS Mahavidyapeetha, Mysuru,** or to **med@jssonline.org** within 15 days from the date of this notification.

Sd/-
EXECUTIVE SECRETARY

## JAYACHAMARAJA WADIYAR GOLF CLUB

Maharana Prathap Singhji Road, Nazarbad, Mysore – 570 010
Phone: 0821-2538457,2413385, 9886009208

### WANTED IMMEDIATELY

**ADMINISTRATIVE OFFICER :** We are looking for a dedicated skilled organized Administrative Officer to join our team and help us provide outstanding service to our members, guests, and contribute to the efficient operations in achieving our goals at Golf Course and at our Club House office.

- **Qualification/Experience :** Any Graduate with minimum15 years of experience preferably army or defense background. Experience in working in social clubs, sports related clubs and other organisations is preferred. Strong knowledge in Microsoft Office is required. Strong organizational and multitasking skills. Excellent communication and customer service abilities.
- Coordinate events, Golf Tournaments, and club activities. Assist in budgeting and financial reporting. Manage member registrations, inquiries, and communications.
- Should be ready to work in flexible working hours. Oversee daily administrative operations of the Golf Club and Golf Course.

**FRONT OFFICE RECEPTIONIST:**

- Any Graduate with accounts knowledge minimum 5years experience in a customer service or front desk role, preferably in a hospitality or sports environment.
- Strong communication and interpersonal skills. Proficient in Microsoft Office Suite and experience with reservation systems is a plus. Ability to multitask and work in a fast-paced environment.
- Professional appearance and demeanor.

**Note:** Interested Candidates are requested to post your resumes on or before **09-09-2024** by e-mail: **jwgc@rediffmail.com, jwgolfclub1@gmail.com**

Date : 30-08-2024

Sd/-
Hon. Secretary

## ಬೇಕಾಗಿದ್ದಾರೆ

ಮೈಸೂರಿನಲ್ಲಿರುವ ವೃದ್ಧಾಶ್ರಮದಲ್ಲಿ ಕೆಲಸ ಮಾಡಲು ಸೇವಾ ಮನೋಭಾವ ಇರುವ 18 ರಿಂದ 45 ವರ್ಷದೊಳಗಿನ ಮಹಿಳೆ ಬೇಕಾಗಿದ್ದಾರೆ. ವೃದ್ಧಾಶ್ರಮದಲ್ಲಿ ಉಳಿದುಕೊಳ್ಳಬೇಕು. ಅನುಭವದ ಆಧಾರದ ಮೇಲೆ 12 ರಿಂದ 18000 ರೂ.ಗಳವರೆಗೆ ಸಂಬಳ ನೀಡಲಾಗುವುದು.

ಆಧಾರ್ ಅತ್ಯಂತ ಅಗತ್ಯ.

**9986344884, 9986346668**

## SITE FOR SALE

**30X40 SITE FOR SALE**

in Brindavan Extension Mysore and concept construction for sale, very good location.

For Details Call : **70222 22007**

## FOR ADVERTISEMENT

**STAR OF MYSORE**
Please Call: 0821-2496522 / 23
Email: ad@starofmysore.com

**ಮೈಸೂರು ಮಿತ್ರ**
Please Call: 0821-2496522 / 23
Email: ad@mysurumithra.com

## 20X30 NEW HOUSE FOR SALE

GROUND FLOOR & FIRST FLOOR
Semi furnished JSS Layout 2nd Stage, Mysuru

Contact :
**95358 62673 / 99864 78146**

## HOUSE FOR SALE

# MIG 108 (1275) Sq., at K H B Housing Board, Hootagalli, Earning Rent of Rs.50,000/- Per Month

Call : **99005 56777**

## ಸೈಟುಗಳು ಮಾರಾಟಕ್ಕಿದೆ

ಬನ್ನೂರು ರಸ್ತೆಯ ವಾಜಮಂಗಲ ಗ್ರಾಮಕ್ಕೆ ಹೊಂದಿಕೊಂಡಂತೆ ಎಲ್ಲಾ ಅಳತೆಯ ಮೂಡಾ ಅನುಮೋದಿತ ಸೈಟುಗಳು ಮಾರಾಟಕ್ಕಿದೆ.
ಚದರ ಅಡಿ 1600 ರೂಪಾಯಿಗಳು

**6360633036**

## ಹೊಸ ಮನೆ ಮಾರಾಟಕ್ಕಿದೆ

**30x40** ಪೂರ್ವ ದಿಕ್ಕು ಉತ್ತರ ದಿಕ್ಕಿಗೆ ಬಾಗಿಲು, ಶಾಂತವೇರಿ ಗೋಪಾಲಗೌಡ ನಗರ ಬೆಲೆ ರೂ. 90 ಲಕ್ಷ, 80% ರಷ್ಟು ಸಾಲ ಸೌಲಭ್ಯ ದೊರೆಯುತ್ತದೆ.

**9448601655**

## BUSINESS OPPORTUNITY

Manufacturing Unit for Sale in Hebbal Industrial Area.

For more information:
**6361259521**

## COMMERCIAL- RENT

Devaraj Mohalla, Vijayanagar 2nd Stage, Beautiful Corner Ground Floor Commercial Space 1200 Sft. available for Rent
Rent Rs.30K + GST

**Contact:- +91 63664 43134**

## ಬೇಕಾಗಿದ್ದಾರೆ

- ಏಸಿ ಟೆಕ್ನಿಷಿಯನ್
- ಎಲೆಕ್ಟ್ರಿಕಲ್ ಟೆಕ್ನಿಷಿಯನ್
- ಐಟಿ ಉದ್ಯೋಗಿಗಳು (ನೆಟ್‌ವರ್ಕಿಂಗ್)

ಸಂದರ್ಶನಕ್ಕಾಗಿ ಸಂಪರ್ಕಿಸಿ

**Call: 96065 21627**

Email: hello@myofficespace.in

## IMMEDIATE HIRING

1. ACCOUNTS EXECUTIVE (Day shift)
2. PROCESS ASSOCIATE / TELE CALLERS (Night shift)
3. PROCESS CO-ORDINATOR (Night shift)

Contact :
**+ 91 81233 71777 / 81231 60666**
Email: jobs@shirotechnologies.com

## MAHENDRA DEVELOPERS

### WANTED

We are seeking a qualified and experienced Accountant to join our developers office in Nagawala area. The ideal candidate should have 1-2 years of experience in accounting. If you're a motivated and details-oriented individual with a passion for numbers, please apply with your resume and contact information.

**Mob: 8884001233**



Hi! TAXI

ONLY ONE WAY TAXI CHARGE

**MYSORE to BANGALORE**
City drop or Pick up

**BANGALORE to MYSORE**
Airport drop or Pick up

MYSURU

**9611177599**

## NEWLY LAUNCHED PROJECT IN YELWALA

**"PARISARA SIRI" - MYSORE**

**RESIDENTIAL PLOTS @ JUST Rs. 675/- Sqft.,**

2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY

DIMENSION
"30x40" "30x50" "40x60"

Contact: **9740391228**

## ಸೈಟುಗಳು ಮಾರಾಟಕ್ಕಿದೆ

ಮೈಸೂರು ನಂಜನಗೂಡು ರಸ್ತೆಯಲ್ಲಿ ವಿಮಾನ ನಿಲ್ದಾಣದ ಹತ್ತಿರ 30x40 ಮತ್ತು 30x50 ಅಳತೆಯ ಸೈಟುಗಳು ಮಾರಾಟಕ್ಕಿದೆ

ಸಂಪರ್ಕಿಸಿ: ಲೋಹಿತಾಶ್ವ
**9035339634**

## ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ., (ರಿ)

ಪ್ರಧಾನ ಕಛೇರಿ: # 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–570 004. ದೂರವಾಣಿ: 2330014
ಶಾಖಾ ಕಛೇರಿ: # ಸಿಎ16, ವಿಜಯನಗರ, ಎರಡನೇ ಹಂತ, ಮೈಸೂರು–570 017. ದೂರವಾಣಿ: 2411556
e- mail: agastyasociety.mysore@gmail.com GST NO.:29AADAA7412N1ZI

### 2023–24ನೇ ಸಾಲಿನ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರೆ,

ಮೇಲ್ಕಂಡ ಸೊಸೈಟಿಯ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು **ದಿನಾಂಕ: 01/09/2024ನೇ ಭಾನುವಾರ ಬೆಳಗ್ಗೆ 11.00 ಗಂಟೆಗೆ** ಸಂಘದ ಅಧ್ಯಕ್ಷರಾದ **ಶ್ರೀ ಎಂ ಡಿ ಗೋಪಿನಾಥ್** ಇವರ ಘನ ಅಧ್ಯಕ್ಷತೆಯಲ್ಲಿ **ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಮೈಸೂರು** ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರೆಲ್ಲರಿಗೂ ಆಹ್ವಾನ ಪತ್ರಿಕೆಯನ್ನು ಅಂಚೆಯ ಮುಖಾಂತರ ಈಗಾಗಲೇ ಕಳುಹಿಸಿದ್ದು, ಅದು ತಲುಪದಿದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಸದಸ್ಯರು ಮಹಾ ಸಭೆಗೆ ಸಕಾಲಕ್ಕೆ ಆಗಮಿಸಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಮಹಾ ಸಭೆಯನ್ನು ಯಶಸ್ವಿಗೊಳಸಬೇಕಾಗಿ ಕೋರಲಾಗಿದೆ.

**ಸದಸ್ಯರಿಗೆ ಸೂಚನೆ:** 1) ಸದಸ್ಯರು ಕಡ್ಡಾಯವಾಗಿ ಷೇರು ಪಾಸ್ ಪುಸ್ತಕ ಅಥವಾ ಗುರುತಿನ ಚೀಟಿಯನ್ನು ತರತಕ್ಕದ್ದು.

2) ಸಂಘದ ಉಪನಿಯಮ 91ರಂತೆ ಲಾಭಾಂಶ ಘೋಷಿಸಿದ ದಿನಾಂಕದಿಂದ 3 ವರ್ಷದೊಳಗೆ ಲಾಭಾಂಶ ಪಡೆಯದೇ ಇರುವ ಮೊತ್ತವನ್ನು ಮೀಸಲು ನಿಧಿಗೆ ವರ್ಗಾವಣೆ ಮಾಡುವುದರಿಂದ ಲಾಭಾಂಶವನ್ನು ಪಡೆಯದೇ ಇರುವ ಸದಸ್ಯರು ದಿನಾಂಕ:31/12/2024ರ ಒಳಗೆ ಪಡೆಯಬೇಕಾಗಿ ತಿಳಸಲಾಗಿದೆ. ಇದೇ ಅಂತಿಮ ತಿಳುವಳಿಕೆ ಎಂದು ಪರಿಗಣಿಸುವುದು.

3) 2023–24ನೇ ಸಾಲಿನ ಸರ್ವ ಸದಸ್ಯರ ಸಭೆಯ ವರದಿಪುಸ್ತಕ ಮತ್ತು ಹಿಂದಿನ ಸಾಲಿನ ಮಹಾಸಭೆಯ ನಡಾವಳಿಗಳು ವೆಬ್‌ಸೈಟ್ www.agastyasociety.com ರಲ್ಲಿ ವೀಕ್ಷಿಸಲು ಲಭ್ಯವಿರುತ್ತದೆ.

4) ಪ್ರತಿಭಾ ಪುರಸ್ಕಾರ ಹಾಗೂ ಸಂಘದ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ಬೆಳಗ್ಗೆ 9.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿ/ವಿದ್ಯಾರ್ಥಿನಿಯರು, ಹಿರಿಯ ಸದಸ್ಯರು ಸಕಾಲಕ್ಕೆ ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ,
ಸಹಿ/–
ಪ್ರಭಾರ ಕಾರ್ಯದರ್ಶಿ

## ಗೌರಿ ಗಣೇಶ ಹಬ್ಬದ ಪ್ರಯುಕ್ತ ಇದೀಗ ಹೊಸ ಸ್ಟಾಕ್‌ನೊಂದಿಗೆ ಇಂದಿನಿಂದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಮಾರಾಟ ಪ್ರಾರಂಭ

ಫ್ಯಾಷನ್ & ಲೈಫ್‌ಸ್ಟೈಲ್ ಪ್ರದರ್ಶನ ಮತ್ತು ಮಾರಾಟ

Upto 90% OFF — 1 ಲಕ್ಷದಷ್ಟು ಬ್ರಾಂಡೆಡ್ ಸಿದ್ಧ ಉಡುಪುಗಳು, ಪಾದರಕ್ಷೆಗಳು, ಸೀರೆಗಳು, ಅಲಂಕಾರಿಕಾ ವಸ್ತುಗಳು

| | | | |
|---|---|---|---|
| ಪುರುಷರ ಬಾಕ್ಸರ್ ಶಾರ್ಟ್ಸ್ ರೂ. 249/- | ಪುರುಷರ ಟಿ–ಶರ್ಟ್‌ಗಳು ರೂ. 199/- | ಮಹಿಳೆಯರ ವೆಸ್ಟರ್ನ್ ಟಾಪ್ಸ್ ರೂ. 99/- | ಕಿಡ್ಸ್ ಬಾಯ್ಸ್ ಮತ್ತು ಗರ್ಲ್ಸ್ ರೂ. 99/- |
| ಮಹಿಳೆಯರ ಟ್ರಾಕ್‌ಪ್ಯಾಂಟ್ ಪಲ್ಲಾಜೋ ಮತ್ತು ಬಾಟಮ್ಸ್ ರೂ. 249/- | ಮಹಿಳೆಯರ ಕುರ್ತಿ, ಜೀನ್ಸ್, ಸೀರೆಗಳು ರೂ. 299/- | ಪುರುಷರ ಶರ್ಟ್ ರೂ. 399/- | ಜೀನ್ಸ್ ಪ್ಯಾಂಟ್ ರೂ. 599/- |

ಮಹಿಳೆಯರ ಜಾಕೆಟ್‌ಗಳು, ವುಡ್ಡೀಸ್, ಜಿಪ್ಪರ್, ಸ್ವೆಟ್ ಶರ್ಟ್‌ಗಳು, ಸ್ವೆಟರ್‌ಗಳು ಯಾವುದನ್ನೇ ಕೊಂಡರೂ ರೂ. 499/- ಮಾತ್ರ

ಪುರುಷರ ಜೀನ್ಸ್, ಪ್ಯೂಮಾ ಟ್ರ್ಯಾಕ್ ಪ್ಯಾಂಟ್, ಪುರುಷರ ಜಾಕೆಟ್‌ಗಳು, ಜಿಪ್ಪರ್, ವುಡ್ಡೀಸ್, ಸ್ವೆಟ್‌ಶರ್ಟ್‌ಗಳು — ಎಂಆರ್‌ಪಿ ರೂ. 1999ರಿಂದ 4999 ಯಾವುದನ್ನೇ ಖರೀದಿಸಿದರೂ ರೂ. 599/- ಮಾತ್ರ

## ಗೌರಿ ಗಣೇಶ ಹಬ್ಬದ ವಿಶೇಷ ರಿಯಾಯಿತಿ

ಪುರುಷರ ಶೂಗಳು : ರೂ. 400/- ರಿಂದ 2000/-

PUMA, NIKE, WOODLAND, adidas, SKECHERS, LOUIS PHILIPPE, ANTA, U.S. POLO ASSN. SINCE 1890, asics, CATIA, new balance, campus, cultsport, RED CHIEF

ಮಹಿಳೆಯರ ಪ್ಯಾಂಟಿ ರೂ. 60 ಮಾತ್ರ | Bra Just Rs. 100/-

ರೂ. 1200/- ಬೆಲೆ ಬಾಳುವ ಸೀರೆಗಳು ಇಂದು ಕೇವಲ ರೂ. 300/- ಮಾತ್ರ

ಆಫರ್ 5 ದಿನಗಳು ಮಾತ್ರ : ಸೆಪ್ಟೆಂಬರ್ 1, 2, 3, 4 ಮತ್ತು 5 – 2024

**ಸ್ಥಳ : ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ**
**ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು**